ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩ ನವೆಂಬರ್ ೨೦೦೨ ಸಂಚಿಕೆ ೪

ಕಾವೇರಿ ಸಮಸ್ಯೆ: ಒಂದು ವಿಮರ್ಶೆ

ಸುರೇಂದ್ರ ಕೌಲಗಿ

★

ಕಾವ್ಯಗಳಲ್ಲಿ ಕಾಡು ಮತ್ತು ಊರು

ಪ್ರೊ॥ ಬರಗೂರು ರಾಮಚಂದ್ರಪ್ಪ

★

ಚರಖಾ : ಬಂಡಾಯದ ಸಂಕೇತ!

ವಿನೋಬಾ

★

ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ದೇಶ ಭಾಷೆಗಳ ಸ್ಥಾನ

ಮಾಸ್ತಿ ವೆಂಕಟೇಶ್ ಅಯ್ಯಂಗಾರ್

★

★ ಈ ಸಂಚಿಕೆಯಲ್ಲಿ ★

೧. ಕಾವೇರಿ ಸಮಸ್ಯೆ : ಒಂದು ವಿಮರ್ಶೆ

-ಸುರೇಂದ್ರ ಕೌಲಗಿ

ಕಾವೇರಿ ನದಿ ನೀರಿನ ಹಂಚಿಕೆಯ ವಿವಾದ ಬಹಳ ದೀರ್ಘ ಕಾಲಿನದು. ಆದರೆ ಆ ಸಮಸ್ಯೆಯ ಉಗಮಕ್ಕೆ ಇರುವ ಕಾರಣಗಳಾವುವು, ಸಮಸ್ಯೆಯನ್ನು ಪರಿಹರಿಸಲು ಸರ್ಕಾರಗಳು ಕೈಗೊಂಡ ಕ್ರಮಗಳಾವುವು ಮತ್ತು ನೀರಿನ ಉಪಯೋಗ ಮತ್ತು ಸಂಗ್ರಹವಾಗುವ ಪ್ರಮಾಣ ಇತ್ಯಾದಿಗಳ ಬಗ್ಗೆ ಎರಡೂ ರಾಜ್ಯಗಳ ಜನತೆಗೆ ಯಾವ ತಿಳುವಳಿಕೆಯೂ ಇಲ್ಲದೆ ಇರುವುದು ಈ ಸಮಸ್ಯೆ ಕಗ್ಗಂಟಾಗಲು ಕಾರಣವಾಗಿದೆ. ಕಾವೇರಿ ನೀರಿನ ಸಮಸ್ಯೆ ಕೇವಲ ರಾಜಕಾರಣಿಗಳಿಗೆ ಸೀಮಿತವಾದ ವಿಷಯವಾಗಕೂಡದು. ನಿಜವಾಗಿಯೂ ಈ ಸಮಸ್ಯೆ ಎರಡೂ ರಾಜ್ಯಗಳ ರೈತರ ಸಮಸ್ಯೆಯಾಗಿದೆ, ರೈತರು ಪರಸ್ಪರರ ಕಷ್ಟಗಳನ್ನು ತಿಳಿದುಕೊಳ್ಳಬಲ್ಲವರಾಗಿದ್ದಾರೆ. ಆದ್ದರಿಂದ ಕಾವೇರಿ ಸಮಸ್ಯೆಯ ಪರಿಹಾರಕ್ಕೆ ಎರಡೂ ರಾಜ್ಯಗಳ ರೈತರ ಪ್ರತಿನಿಧಿಗಳು ಮತ್ತು ಮುಖಂಡರು ಸೇರಿ ಈ ಸಮಸ್ಯೆಯನ್ನು ಬಗೆಹರಿಸುವುದು ಸೂಕ್ತ. ಈ ಎಲ್ಲ ದೃಷ್ಟಿಕೋನದಿಂದ ಈ ವಿವಾದದ ಒಂದು ವಿಮರ್ಶೆ ಈ ಲೇಖನದಲ್ಲಿದೆ. ಪುಟ-೩

೨. ಕಾವ್ಯಗಳಲ್ಲಿ ಕಾಡು ಮತ್ತು ಊರು

-ಪ್ರೊ॥ ಬರಗೂರು ರಾಮಚಂದ್ರಪ್ಪ

ಕಾಡು ಮತ್ತು ನಾಡು ಹೊರ ನೋಟಕ್ಕೆ ಬೇರೆಬೇರೆಯಾಗಿ ಮತ್ತು ಬಹಳ ಭಿನ್ನವಾಗಿ ಕಂಡರೂ ಸಹ ಮೂಲದಲ್ಲಿ ಅವೆರಡು ಏಕೀ ಭಾವವನ್ನೂ ಮತ್ತು ಸಂಬಂಧವನ್ನೂ ಹೊಂದಿವೆ. ಮಾನವನ ಚಿಂತನ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಕಾಡಿನ ಪಾತ್ರ ಹಿರಿದಾಗಿದೆ. ಮಾನವನು ರಚಿಸಿರುವ ವೇದ ಉಪನಿಷತ್ತುಗಳಲ್ಲಿ ಮತ್ತು ಕಾವ್ಯಗಳಲ್ಲಿ ಕಾಡಿನ ವಿಷಯ ಅನಿವಾರ್ಯವಾಗಿ ಬರುತ್ತದೆ. ಇಂಥ ಸ್ವಾರಸ್ಯಕರವಾದ ವಿಷಯುವ ಬಗ್ಗೆ ರಾಜ್ಯದ ಚಿಂತಕರಲ್ಲಿ ಒಬ್ಬರಾದ ಪ್ರೊ॥ ಬರಗೂರ್ ರವರು ತಮ್ಮ ವಿಚಾರಗಳನ್ನು ಈ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. ಪುಟ-೧೦

೩. ಚರಖಾ; ಬಂಡಾಯದ ಸಂಕೇತ!

-ವಿನೋಬಾ

ಸುಮಾರು ೭೫ ವರ್ಷಗಳ ಹಿಂದೆ ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಕ್ರಾಂತಿಕಾರಿ ಸ್ವರೂಪದಲ್ಲಿ ಕಾಣಿಸಿಕೊಂಡ ಚರಖಾ ದೇಶದ ಇಂದಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಸಂದರ್ಭದಲ್ಲೂ ಅದೇ ಐತಿಹಾಸಿಕ ಕ್ರಾಂತಿಕಾರಿ ಸ್ವರೂಪವನ್ನು ಹೊಂದಿದೆ. ಅಷ್ಟೇ ಅಲ್ಲ, ಇಂದು ರಾಷ್ಟ್ರ ಜೀವನದಲ್ಲಿ ನುಸುಳುತ್ತಿರುವ ಎಲ್ಲ ಪ್ರಕಾರದ ಅಪಮೌಲ್ಯಗಳ ವಿರುದ್ಧ ಬಂಡಾಯದ ಸಂಕೇತವಾಗಿ ಈ ಚರಖಾ ಇನ್ನೂ ಜೀವಂತವಾಗಿದೆ. ಅದರ ಹಿಂದೆ ಇರುವ ವಿಚಾರವನ್ನು ತಿಳಿದುಕೊಳ್ಳುವ ಅಪೇಕ್ಷೆಯನ್ನು ಮಾತ್ರ ನಮ್ಮ ಜನ ಬೆಳೆಸಿಕೊಳ್ಳಬೇಕಾಗಿದೆ ಈ ಕುರಿತಾದ ಮನನೀಯ ವಿಚಾರಗಳು ಈ ಲೇಖನದಲ್ಲಿವೆ. ಪುಟ-೧೬

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೩ ಸಂಚಿಕೆ: ೪

ನವೆಂಬರ್ ೨೦೦೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ :

ವಾರ್ಷಿಕ	: ರೂ. ೧೦೦/-
ಅರ್ಧವಾರ್ಷಿಕ	: ರೂ. ೫೦/-
ಬಿಡಿ ಸಂಚಿಕೆ	: ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧
ದೂರವಾಣಿ :
೦೮೨೩-೬೪೮೭೫೪

ಕರಿಮುಗಿಲೇ, ಸಿರಿಮುಗಿಲೇ,
ಎಲ್ಲಿಂ ತಂದೆಯೋ ಇಂಥ ಮಳೆ,
ಇಂದ್ರನ ಮರಿದೇ ವರುಣನ ಸುಲಿದೇ
ಎಲ್ಲಿಂ ತಂದೆಯೋ ಕಾರ ಮಳೆ?

ಆವ ಮಾಟಗಳಿಂದ ನೀನು
ಏನೇನುಪಾಯ ಹೂಡಿ
ಸೂರ್ಯನ ಮುಸುಕಿ ಕಡಲನು ಹಿಸುಕಿ
ಗಾಳಿಯ ಗೆಳೆತನ ಮಾಡಿ?

ಆರ ಮಿಂಚಿನ ಏಟಿಗೆ ಮುಳಿದು
ಗುಡುಗುಟ್ಟಾಡುತ್ತಿರುವೆ,
ಹೊರಲಾರದೆ ಹೊತ್ತಿಂತು ತಂದ
ಕೊಳ್ಳೆಯನಿಲ್ಲಿಯೆ ಸುರಿವೆ?

ಎಳೆಯರ ಕತೆಯ ಕಳ್ಳನಂತೆ
ನೀನೂ ಸೈ ಸೈ ಚದುರ
ಬಲವಂತರ ಸಿರಿ ಸುಲಿಯುವ ಸಾಹಸಿ
ನೀನೆಮಗಾದೆಯೊ ಸದರ

ಕಾರ ಕರಾಳ ದೂರದಿ ಬರೆ ನೀ
ಕಣ್ಣಿಗೆ ಬಲು ಬಲು ಚೆನ್ನ
ಮಳೆಯಂಬೇಟಿಗೆ ಮುಪ್ಪಿಗು ಸಾವಿಗು
ತಿರೆ ಬಿಟ್ಟೋಡುವ ಒನ್ನ ಕೊಡು

ನೀ ಮೈದಡಹುತ ದಡದಡ ನಡೆಯಲು
ತರುಗಿಡವೆಲ್ಲಕು ಪುಳಕ
ನಾಡೇ ಜಳಜಳ ನಗುವುದು ನಮ್ಮೀ
ಮಂದಿಮಲೆಗಾಗಲು ಜಳಕ

ಮಳೆ ಮುಗಿಲೇ, ಬೆಳೆಮುಗಿಲೇ,
ಎಲ್ಲಿಂ ತಂದೆಯೊ ಇಂಥ ಮಳೆ,
ತಂದೆಯ ತೆರೆದೊಳು ತಂದುದ ತೆರುತ
ಹಾಯಾಗುವ ನಿನಗೆಂಥ ಕಳೆ!

—ಪು. ತಿ. ನ

ವಿಚಾರ ದೀಪ್ತಿ....................

ಭಾರತದಲ್ಲಿ ಶಿಕ್ಷಣ ಇದೆ. ಆದರೆ ಶಿಕ್ಷಣದಲ್ಲಿ ಭಾರತೀಯತೆ ಇದೆಯೇ? ಇದು ಇಂದಿನ ರಾಷ್ಟ್ರೀಯ ಶಿಕ್ಷಣ ಕುರಿತು ಇರುವ ಪ್ರಚಲಿತ ವಿಶ್ಲೇಷಣೆ. ಆಯಾ ದೇಶದ ವಿದ್ಯಾರ್ಥಿಗಳಿಗೆ ಆಯಾ ದೇಶದ ಹಿರಿಮೆ, ಸಂಸ್ಕೃತಿ, ಪರಂಪರೆಗಳ ಕುರಿತು ಸಂಪೂರ್ಣ ಅರಿವು ಮೂಡಿಸುವುದು ಅಗತ್ಯವಾಗಿದೆ.

ಕಂಪ್ಯೂಟರ್ ಶಿಕ್ಷಣಕ್ಕೆ ಇಂದು ಎಲ್ಲಿಲ್ಲದ ಪ್ರಾಮುಖ್ಯತೆ ಬಂದಿದೆ. ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣಕ್ಕೆ ಪ್ರವೇಶ ಸಿಕ್ಕಿದರೆ ಭಾಗ್ಯದ ಬಾಗಿಲು ತೆರೆದಂತೆ ಎಂದು ಭಾವಿಸುತ್ತಾರೆ. ಕೇವಲ ಕಂಪ್ಯೂಟರ್ ಶಿಕ್ಷಣಕ್ಕೆ ಒತ್ತುಕೊಟ್ಟರೆ ಸಾಕೆ? ಮೂಲ ವಿಜ್ಞಾನಗಳು, ಇತಿಹಾಸ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ ವಿಷಯಗಳ ಅಧ್ಯಯನದ ಅವಶ್ಯಕತೆ ಇಲ್ಲವೆ? ಕಂಪ್ಯೂಟರ್ ಶಿಕ್ಷಣದ ಅಬ್ಬರದಲ್ಲಿ ಉಳಿದೆಲ್ಲ ವಿಷಯಗಳು ಮೂಲೆಗುಂಪಾಗುತ್ತಿವೆ.

ಇತಿಹಾಸವನ್ನು ಮರೆತವರು ಇತಿಹಾಸವನ್ನು ನಿರ್ಮಿಸಲಾರರೆಂದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ. ಸ್ವಾಮಿ ವಿವೇಕಾನಂದರು "ಭೂತದ ಕಡೆ ಎಷ್ಟು ದೂರಕ್ಕೆ ನೋಡಲು ನಿನಗೆ ಸಾಧ್ಯವೋ. ಭವಿಷ್ಯವನ್ನು ಅಷ್ಟೇ ದೂರಕ್ಕೆ ರೂಪಿಸಿಕೊಳ್ಳಲು ನಿನಗೆ ಸಾಧ್ಯವಾಗುತ್ತದೆ" ಎಂದು ಹೇಳಿದ್ದಾರೆ.

–ಪ್ರೊ. ಡಿ. ಸತ್ಯನಾರಾಯಣ

ಕಾವೇರಿ ಸಮಸ್ಯೆ : ಒಂದು ವಿಮರ್ಶೆ

– ಸುರೇಂದ್ರಕೌಲಗಿ

ಜೀವನದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಯೂ ಮನುಷ್ಯನಿಗೆ ಬುದ್ಧಿ ಕಲಿಸುವ ಪಾಠವಾಗಿರುತ್ತದೆ. ಅದನ್ನೇ ಜೀವನಾನುಭವ ಎಂದೂ ಹೇಳಲಾಗುತ್ತದೆ. ಜೀವನಾನುಭವಗಳ ಒಟ್ಟು ಪರಿಣಾಮವಾಗಿ ಮನುಷ್ಯನು ಜೀವನವನ್ನು ನಡೆಸಲು ಕಲಿಯುತ್ತಾನೆ. ಸಮಾಜಜೀವನದ ರೂಪರೇಖೆಗಳನ್ನು ತಯಾರಿಸುತ್ತಾನೆ; ಅಷ್ಟೇ ಅಲ್ಲ, ಸಮಾಜಜೀವನ ವ್ಯವಸ್ಥಿತವಾಗಿ ಹೇಗೆ ನಡೆದುಕೊಂಡು ಬರಬೇಕೆಂಬ ಬಗ್ಗೆಯೂ ಚಿಂತನೆ ನಡೆಸುತ್ತಾನೆ. ಇದರ ಪರಿಣಾಮವೇ ಸುಸಂಸ್ಕೃತ ಸಮಾಜ ನಿರ್ಮಾಣ. ಮನುಷ್ಯ ತನ್ನ ಆದಿಮಾನವತೆಯ ಸ್ಥಿತಿಯಿಂದ ಈಗಿನ ಇಪ್ಪತ್ತೊಂದನೇ ಶತಮಾನದವರೆಗಿನ ದೀರ್ಘ ಪಯಣದಲ್ಲಿದ್ದರೂ ಜೀವನಾನುಭವದ ತನ್ನ ಬುತ್ತಿಯನ್ನು ಹೊತ್ತುಕೊಂಡೇ ಬಂದಿದ್ದಾನೆ. ಇಂಥ ಜೀವನಾನುಭವದ ಬುತ್ತಿಗೆ ಈಗ ನೂತನವಾಗಿ ಸೇರಿರುವ ಅನುಭವ ಕಾವೇರಿ ನೀರಿನ ಹಂಚಿಕೆಯ ವಿವಾದ. ಈ ವಿವಾದ ಸುಮಾರು ಎರಡು ತಿಂಗಳುಗಳಿಂದ ಕರ್ನಾಟಕ ಮತ್ತು ತಮಿಳುನಾಡಿನ ಜನತೆಯನ್ನು ಆತಂಕದ ಸ್ಥಿತಿಯಲ್ಲಿ, ಜಗಳದ ಮನೋಭಾವದಲ್ಲಿ, ಹಿಂಸೆಯ ಸಿದ್ಧತೆಯಲ್ಲಿಟ್ಟಿದೆ. ಇಡೀ ದಕ್ಷಿಣಭಾರತ ನೇರವಾಗಿ ಮತ್ತು ಭಾರತ ಪರೋಕ್ಷವಾಗಿ ನೀರಿನ ಹಂಚಿಕೆಯ ವಿಷಯದಲ್ಲಿ ಗಂಭೀರವಾದ ಒಂದು ರಾಷ್ಟ್ರೀಯ ಸಮಸ್ಯೆಯನ್ನು ಎದುರಿಸಿದೆ. ಇದರೊಂದಿಗೆ ಅನೇಕ ಸಂವಿಧಾನಾತ್ಮಕ ಪ್ರಶ್ನೆಗಳೂ ಹುಟ್ಟಿಕೊಂಡಿವೆ; ಗಣರಾಜ್ಯ ವ್ಯವಸ್ಥೆಯ ಭವಿಷ್ಯದ ಬಗ್ಗೆ ಚಿಂತೆ ಹುಟ್ಟಿಕೊಂಡಿದೆ; ನ್ಯಾಯಾಂಗ ಮತ್ತು ಆಡಳಿತಾಂಗ ಹಾಗೂ ಪ್ರಜಾಭಿಪ್ರಾಯದ ಪಾತ್ರ ಈ ಕುರಿತಾದ ಅನೇಕ ತೊಡಕುಗಳು ಹುಟ್ಟಿಕೊಂಡಿವೆ.

ಕಾವೇರಿ ಸಮಸ್ಯೆ ಈಗ ಎರಡು ರಾಜ್ಯಗಳ ನೀರಿನ ಹಂಚಿಕೆಯ ವಿಷಯಕ್ಕಷ್ಟೇ ಸೀಮಿತವಾದ ಸಮಸ್ಯೆಯಾಗಿ ಉಳಿದಿರದೆ ಈಗಾಗಲೇ ಮೇಲೆ ತಿಳಿಸಿರುವಂತೆ ಸಂವಿಧಾನಾತ್ಮಕ ಸಮಸ್ಯೆಯಾಗಿಯೂ ರೂಪತಾಳಿದೆ. ಮುಂದಿನ ಶತಮಾನಗಳಲ್ಲಿಯ ಯುದ್ಧಗಳಿಗೆ ನೀರು ಕಾರಣವಾಗುತ್ತದೆ ಎಂದ ತಜ್ಞರು ಹೇಳುತ್ತಲಿದ್ದಾರೆ. ತಜ್ಞರ ಆ ಊಹೆ ನಿರಾಧಾರವಲ್ಲ ಎಂಬ ಚಿಕ್ಕ ಅನುಭವ ದಕ್ಷಿಣದ ರಾಜ್ಯಗಳಿಗೆ ಈಗ ಆಗಿದೆ. ಎರಡು ರಾಜ್ಯಗಳ ಮಧ್ಯೆ ಯುದ್ಧ ನಡೆಯದೆ ಹೋದರೂ ಯುದ್ಧಸದೃಶವಾದ ವಾತಾವರಣ ಎರಡು ರಾಜ್ಯಗಳಲ್ಲಿಯೂ ಸೃಷ್ಟಿಯಾಗಿತ್ತು. ಈಗ ವಿವಾದ ಉಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ಮತ್ತು ನ್ಯಾಯಾಲಯ ತನ್ನ ತೀರ್ಪನ್ನು ನವೆಂಬರ್ ೧೫ನೇ ತಾರೀಖಿನವರೆಗೆ ಕಾಯ್ದಿರಿಸಿರುವುದರಿಂದ ಕಾವೇರಿ ಹೋರಾಟಕ್ಕೆ ಹೊಸ

ತಿರುವು ಬಂದಿದೆ. ಕರ್ನಾಟಕ ಸರ್ಕಾರ ಮತ್ತು ಜನತೆ ಒಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದೆ. ಕರ್ನಾಟಕ ಸರ್ಕಾರ ಕೋರ್ಟ್ ನಿಂದನೆಯ ವಿಷಯದಲ್ಲಿ ಬೇಷರತ್ತಾದ ಕ್ಷಮಾಪಣೆ ಕೇಳಿರುವುದರ ಜೊತೆಗೆ ಪ್ರತಿದಿನ ೧೧,೦೦೦ ಕ್ಯುಸೆಕ್ಸ್ ನೀರನ್ನು ತಮಿಳು ನಾಡಿಗೆ ಬಿಡಲು ಒಪ್ಪಿರುವುದರಿಂದ ಕಾವೇರಿ ನೀರಿನ ಸಮಸ್ಯೆ ಪ್ರಾರಂಭದಲ್ಲಿದ್ದ ಮೂಲರೂಪದಲ್ಲಿ ಉಳಿದಿರದೆ ಹೊಸ ಆಯಾಮವನ್ನು ಪಡೆದಿದೆ ಮತ್ತು ನೂರಕ್ಕೆ ನೂರು ರಾಜಕೀಯ ಸಮಸ್ಯೆಯಾಗಿ ಪರಿವರ್ತಿತಗೊಂಡಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ

ಈಗ ಸಧ್ಯಕ್ಕಂತೂ ಕಾವೇರಿ ಸಮಸ್ಯೆ ಒಂದು ಭಾವಾವೇಶದ ಸಮಸ್ಯೆಯಾಗಿದೆ. ಸತ್ಯ ಸಂಗತಿಯನ್ನು ಮಾತನಾಡಲು ಯಾರೂ ಸಿದ್ಧರಿಲ್ಲ. ಸತ್ಯ ಸಂಗತಿಯನ್ನು ಹೇಳಿದರೆ ಎಲ್ಲಿ ತಮ್ಮ ಇಂದಿನ ಸ್ಥಾನಮಾನಗಳಿಗೆ ಧಕ್ಕೆ ಉಂಟಾಗುತ್ತದೆಯೋ, ಎಲ್ಲಿ ಬಹುಸಂಖ್ಯಾತ ಸಮಾಜದ ವಿರೋಧವನ್ನೂ, ಕೋಪವನ್ನೂ ಎದುರಿಸಬೇಕಾಗುತ್ತದೋ ಎಂಬ ಭೀತಿ ಎಲ್ಲ ನಾಯಕರ ಬಾಯಿಯನ್ನು ಮುಚ್ಚಿಸಿದೆ. ಯಾವುದೇ ರಾಜಕೀಯ ಪಕ್ಷ ತನ್ನ ಮತಗಳಿಕೆಯ ಸೀಮಿತ ಚಿಂತನೆಯ ಚೌಕಟ್ಟಿನ ಹೊರಗೆ ಬಂದು ತನ್ನದೇ ಆದ ನಿಲುವನ್ನು ಸ್ಪಷ್ಟವಾಗಿ, ತರ್ಕಬದ್ಧವಾಗಿ ರಾಜ್ಯದ ಜನತೆಯ ಮುಂದೆ ಮಂಡಿಸಲು ಇದುವರೆಗೂ ಮುಂದೆ ಬಂದಿಲ್ಲ. ಕೃಷ್ಣ ಏನು ತಪ್ಪುಮಾಡಿದರು, ಏನು ಮಾಡಬೇಕಾಗಿತ್ತು ಈ ಮುಂತಾದ ವಿಷಯಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ರಾಜಕೀಯ ಮುಖಂಡರು ವ್ಯಕ್ತಪಡಿಸುತ್ತಿದ್ದಾರೆಯೋ ಹೊರತು ತಾವು ಒಂದು ಜವಾಬ್ದಾರಿ ರಾಜಕೀಯ ಪಕ್ಷವಾಗಿ ಸರ್ಕಾರಕ್ಕೆ ಸಂವಿಧಾನದ ದೃಷ್ಟಿಯಿಂದ, ಗಣರಾಜ್ಯದ ವ್ಯವಸ್ಥೆಯ ದೃಷ್ಟಿಯಿಂದ ಏನು ಮಾಡಬೇಕು ಎಂಬ ಸಲಹೆ–ಸೂಚನೆಗಳನ್ನು ಕೊಡಲು ಕರ್ನಾಟಕ ಮತ್ತು ತಮಿಳುನಾಡಿನ ರಾಜಕೀಯ ಪಕ್ಷಗಳು ಪೂರ್ಣವಾಗಿ ವಿಫಲವಾಗಿವೆ. ಅವು ವೈಚಾರಿಕ ದಿವಾಳಿತನವನ್ನು ಪ್ರದರ್ಶಿಸಿವೆ. ಕಾವೇರಿ ನೀರಿನ ಹಂಚಿಕೆಯ ವಿಷಯವಾಗಿ ಕಳೆದ ಎರಡು ತಿಂಗಳುಗಳಿಂದ ರಾಜ್ಯದಲ್ಲಿದ್ದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಯಾರೇ ರಾಜ್ಯದ ಮುಖ್ಯ ಮಂತ್ರಿಯಾಗಿದ್ದರೂ–ಜೆ. ಮಾದೇಗೌಡರಿರಬಹುದು, ಕೆ. ಎಸ್. ಪುಟ್ಟಣ್ಣಯ್ಯನವರಿರಬಹುದು, ಸಿದ್ಧರಾಮಯ್ಯನವರಿರಬಹುದು, ಸಿಂಧಿಯಾ ಇದ್ದಿರಬಹುದು, ದೇವೇಗೌಡರಿರಬಹುದು–ಇವರಲ್ಲಿ ಯಾರೇ ಮುಖ್ಯ ಮಂತ್ರಿಯಾಗಿದ್ದರೂ ಯಾವ ಸ್ಥಿತಿಯಲ್ಲಿ ಕರ್ನಾಟಕ ಬಂದಿಳಿದಿದೆಯೋ ಆ ಸ್ಥಿತಿಗೆ ಭಿನ್ನವಾದ ಪರಿಸ್ಥಿತಿಯಲ್ಲಿ ಇರುತ್ತಿರಲಿಲ್ಲ ಏಕೆಂದರೆ ತಮಿಳುನಾಡಿನೊಂದಿಗೆ ಕಾವೇರಿ ನೀರಿನ ಹಂಚಿಕೆಯ ವಿವಾದ ನಿನ್ನೆ ಮೊನ್ನೆಯದಲ್ಲ. ೧೯೧೦ ನೇ ಇಸ್ವಿಯಿಂದಲೇ ಪ್ರಾರಂಭವಾಗಿ ಇದುವರೆಗೆ ಅಂದರೆ ೯೨ ವರ್ಷಗಳಕಾಲದಿಂದಲೂ ನಡೆದು

ಕೊಂಡು ಬಂದಿದೆ. ಈ ಅವಧಿಯಲ್ಲಿ ಕರ್ನಾಟಕದಲ್ಲಿ ಎಷ್ಟೋಂದು ಜನ ಮುಖ್ಯಮಂತ್ರಿಗಳಾಗಿ ಹೋದರು, ಎಷ್ಟೋಂದು ಜನ ವಿರೋಧ ಪಕ್ಷಗಳ ನಾಯಕರಾಗಿ ಹೋದರು, ಎಷ್ಟೋಂದು ಜನ ರೈತ ಮುಖಂಡರಾಗಿ ಹೋದರು, ಆದರೆ ಕಾವೇರಿ ಸಮಸ್ಯೆ ಮಾತ್ರ ಹಾಗೆಯೇ ಉಳಿಯಿತಲ್ಲದೆ ಒಂದೊಂದು ಸರ್ಕಾರ ಬಂದು ಹೋದಾಗಲೂ ಸಮಸ್ಯೆ ಮೊದಲು ಇದ್ದುದಕ್ಕಿಂತಲೂ ಹೆಚ್ಚು ಗಂಟಾಗುತ್ತ ಹೋಯಿತು. ೧೯೧೦ ನೇ ಇಸ್ವಿ ಲಾಗಾಯ್ತು ಇಂದಿನವರೆಗೆ ಕಾವೇರಿ ಸಮಸ್ಯೆನಡೆದು ಬಂದ ರೀತಿಯನ್ನು ಅವಲೋಕಿಸಿದರೆ ಒಂದು ಮುಖ್ಯ ಸಂಗತಿ ಗೋಚರಿಸುತ್ತದೆ. ಅದೇನೆಂದರೆ ೧೯೧೦ ರಿಂದ ೨೦೦೨ನೇ ಇಸ್ವಿವರೆಗಿನ ನ್ಯಾಯಾಂಗೀಯ ಹೋರಾಟದಲ್ಲಿ ಕರ್ನಾಟಕ ತಮಿಳುನಾಡಿಗೆ ಸೋಲುತ್ತ ಬಂದಿದೆ. ಇದುವರೆಗೂ ಕರ್ನಾಟಕ ತನ್ನ ಪಾಲಿನ ನೀರಿನ ವಿಷಯವನ್ನು ಸಮರ್ಥವಾಗಿ ಉಚ್ಚ ನ್ಯಾಯಾಲಯದ ಮುಂದೆಯಾಗಲೀ, ಕಾವೇರಿ ನೀರಿನ ಹಂಚಿಕೆ ಪ್ರಾಧಿಕಾರದ ಮುಂದೆಯಾಗಲೀ, ಬಚಾವತ್ ಆಯೋಗದ ಮುಂದೆ ಯಾಗಲೀ ಮಂಡಿಸಲು ಸಮರ್ಥವಾಗಿಲ್ಲ. ಇದರಿಂದಾಗಿ ಕರ್ನಾಟಕ ರಾಜ್ಯ ತನ್ನ ನದಿಗಳ ನೀರನ್ನು ತನಗಾಗಿಯೇ ಪೂರ್ಣಪ್ರಮಾಣವಾಗಿ ಉಪಯೋಗಿಸಿಕೊಳ್ಳಲು ಅಸಮರ್ಥವಾಗಿ ಉಳಿಯತವಷ್ಟೇ ಅಲ್ಲ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಪಾಂಡಿಚೆರೀಯಂಥ ರಾಜ್ಯಗಳೊಂದಿಗೆ ಸದಾ ನೀರಿಗಾಗಿ ಬಡಿದಾಡುವ ರಾಜ್ಯವೆಂಬ ಕೆಟ್ಟ ಹೆಸರನ್ನೂ ಹೊತ್ತುಕೊಳ್ಳ ಬೇಕಾಗಿ ಬಂತು. ನದಿ ನೀರಿನ ಹಂಚಿಕೆಯ ವಿಷಯದಲ್ಲಿ – ಮುಖ್ಯವಾಗಿ ಕಾವೇರಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ– ಕರ್ನಾಟಕ ರಾಜಕೀಯ ವಾಗಿ ತಮಿಳುನಾಡಿಗಿಂತ ದುರ್ಬಲವಾಗಿರುವುದರಿಂದ ಕೇಂದ್ರ ಸರ್ಕಾರದ ಮೇಲಾಗಲೀ, ಪ್ರಾಧಿಕಾರದ ಮೇಲಾಗಲೀ ಒತ್ತಡವನ್ನು ತರುವಲ್ಲಿ ವಿಫಲ ವಾಗುತ್ತ ಬಂದಿದೆ. ಈ ಪರಿಸ್ಥಿತಿ ನಿನ್ನೆ-ಮೊನ್ನೆಯದಲ್ಲ. ಟಿಪ್ಪುಸುಲ್ತಾನನ ಕಾಲದಿಂದಲೂ ಇರುವಂಥ ಪರಿಸ್ಥಿತಿ. ಟಿಪ್ಪುಸುಲ್ತಾನನ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಸುಲ್ತಾನನ ಮೇಲಿನ ರಾಜಕೀಯ ದ್ವೇಷ ತೀರಿಸಿಕೊಳ್ಳಲು ಅವನಿಗೆ ಕಾವೇರಿ ನೀರಿನ ಉಪಯೋಗದ ವಿಷಯದಲ್ಲಿ ಯಾವ ರೀತಿಯಲ್ಲೂ ನೆರವಾಗ ಲಿಲ್ಲ. ಮುಂದೆ ಬಂದ ಬ್ರಿಟಿಷ್ ಅಧಿಕಾರಿಗಳು ಸಹ ಕರ್ನಾಟಕಕ್ಕೆ ಅನುಕೂಲ ಕರವಾದ ನೀತಿಯನ್ನು ಹೊಂದಿರಲಿಲ್ಲ. ಹೀಗಾಗಿ ಕಾವೇರಿ ನೀರನ್ನು ಉಪ ಯೋಗಿಸಿಕೊಳ್ಳುವ ವಿಷಯದಲ್ಲಿ ಕರ್ನಾಟಕ ಪ್ರತಿಕೂಲವಾದ ಪರಿಸ್ಥಿತಿಯಲ್ಲೇ ಉಳಿದುಬಂದಿತು. ಇದೆಲ್ಲವೂ ಇತಿಹಾಸ.

ಆದರೆ ೧೯೫೬ ರಲ್ಲಿ ಕರ್ನಾಟಕ ರಾಜ್ಯದ ಸ್ಥಾಪನೆಯಾದ ಮೇಲಾದರೂ ಕರ್ನಾಟಕ ಮಾಡಿದ್ದಾದರೂ ಏನು? ತಮಿಳುನಾಡಿನೊಂದಿಗಿನ ವಿವಾದಗಳಲ್ಲಿ

ತೊಡಗಿತೇ ಹೊರತು ರಾಜ್ಯದ ಒಳಭಾಗದಲ್ಲಿ ನೀರಿನ ಸದುಪಯೋಗವಾಗುವಂತೆ ಮತ್ತು ಮಳೆಯ ಪ್ರಮಾಣ ಹೆಚ್ಚಾಗುವಂತೆ ಹಾಗೂ ಅಂತರ್‌ಜಲದ ಪ್ರಮಾಣ ಹೆಚ್ಚಾಗುವಂತೆ ಯಾವ ರಚನಾತ್ಮಕ ಕಾರ್ಯಕ್ರಮವನ್ನೂ ಕೈಗೊಂಡಿರುವ ದೃಷ್ಟಾಂತಗಳು ಕಾಣುತ್ತಿಲ್ಲ. ಇದಕ್ಕೆ ಬದಲಾಗಿ ಮುಖ್ಯವಾಗಿ ಕಂಡು ಬಂದದ್ದೇನೆಂದರೆ ಕರ್ನಾಟಕದ ರಾಜಕಾರಣ ಕಳೆದ ೫೦ ವರ್ಷಗಳಿಂದ ಕಾವೇರಿ ಸಮಸ್ಯಾಧಾರಿತ ರಾಜಕಾರಣವಾಗಿ ಬೆಳೆಯುತ್ತ ಬಂತೇ ಹೊರತು ನಿಜವಾಗಿಯೂ ರಾಜ್ಯದ ಹಿತಯಲ್ಲಿದೆ ಎಂಬುದನ್ನು ಆಧರಿಸಿದ ರಾಜಕಾರಣ ಬೆಳೆಯಲೇ ಇಲ್ಲ. ಕೃಷ್ಣರವರ ಪಾದಯಾತ್ರೆಯಾಗಲೀ, ಮಾದೇಗೌಡರ ರೈತ ಹಿತ ರಕ್ಷಣಾ ಸಮಿತಿಯ ಹೋರಾಟದ ವಿಧಾನಗಳಾಗಲೀ ಕಾವೇರಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ, ಕರ್ನಾಟಕಕ್ಕೆ ಅನುಕೂಲವಾದ ತೀರ್ಮಾನವನ್ನು ಪ್ರಾಧಿಕಾರದಿಂದಾಗಲೀ, ಉಚ್ಚನ್ಯಾಯಾಲಯದಿಂದಾಗಲೀ ಪಡೆಯಲಿಕ್ಕೆ ಸಮರ್ಥವಾಗಲಿಲ್ಲವಷ್ಟೇ ಅಲ್ಲ, ಕಾವೇರಿ ನೀರಿನ ವಿವಾದದಕೋಲಾಹಲದಲ್ಲಿ ಕೃಷ್ಣ ನದಿನೀರಿನ ಪೂರ್ಣಪ್ರಮಾಣದ ಬಳಕೆಯ ವಿಷಯವನ್ನು ನಾಯಕರು ಮರೆತೇ ಬಿಟ್ಟರೇನೋ ಎನ್ನುವಂಥ ಸ್ಥಿತಿ ಉಂಟಾಯಿತು. ಈ ಕುರಿತು ರಾಜ್ಯದ ನಾಯಕರು ಏಕೆ ತೀವ್ರ ಗಮನಹರಿಸಲಿಲ್ಲ ಎಂಬುದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಕಾವೇರಿ ವಿವಾದ ಕರ್ನಾಟಕಕ್ಕೆ ಅನೇಕ ಪಾಠಗಳನ್ನಂತು ಕಲಿಸಿದೆ, ಅವುಗಳಲ್ಲಿ ಕೆಲವನ್ನು ಈ ರೀತಿ ಪಟ್ಟಿ ಮಾಡಬಹುದು:-

೧) ಇದು ವರೆಗಿನ ಎಲ್ಲ ಸರ್ಕಾರಗಳು ಕರ್ನಾಟಕ ಮತ್ತು ಕನ್ನಡಿಗರ ಹಿತವನ್ನು ರಕ್ಷಿಸುವಲ್ಲಿ ವಿಫಲವಾಗಿವೆ. ತಮ್ಮ ಪ್ರದೇಶದ ಸಮಗ್ರ ಹಿತವನ್ನು ಕಾಯುವಲ್ಲಿ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ರೀತಿಗಳಿಂದ ಪ್ರೇರಣೆ ಪಡೆಯಲಿಲ್ಲ. ಈ ಎಲ್ಲ ರಾಜ್ಯಗಳು ತಮ್ಮ-ತಮ್ಮ ನೆಲ-ಜಲ-ಜನ-ಭಾಷೆ ಇವುಗಳ ರಕ್ಷಣೆಯ ವಿಚಾರದಲ್ಲಿ ಕರ್ನಾಟಕಕ್ಕಿಂತ ಬಹಳಷ್ಟು ಮುಂದೆ ಇವೆ. ಮತ್ತು ಚುರುಕಾಗಿವೆ.

೨) ಮಾಹಿತಿ ತಂತ್ರಜ್ಞಾನ, ಸಿಲಿಕಾನ್ ಕಣಿವೆ ಅಭಿವೃದ್ಧಿ, ಬೆಂಗಳೂರು ನಗರವನ್ನು ಸಿಂಗಪುರ ಮಾಡುವುದು ಮುಂತಾದ ಪ್ರಮುಖವಲ್ಲದ ವಿಷಯಗಳ ಕಡೆಗೆ ಗಮನಕೊಡುತ್ತಾ ಜನ ಸಾಮಾನ್ಯರ ಜೀವನದ ಪ್ರಾಥಮಿಕ ಮತ್ತು ತೃಣಮೂಲ ಸಮಸ್ಯೆಗಳತ್ತ ಗಮನ ಹರಿಸಲಿಲ್ಲ.

೩) ದೇಶದ ಇತರ ರಾಜ್ಯಗಳಲ್ಲಿ ಮುಖ್ಯವಾಗಿ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ತಮಿಳನಾಡುಗಳಲ್ಲಿಯಂತೆ ಕರ್ನಾಟಕದಲ್ಲೂ ಪ್ರಬಲವಾದ ಪ್ರಾದೇಶಿಕ ಹಿತರಕ್ಷಣಾ ಪಕ್ಷವನ್ನು ಕಟ್ಟಲು ಸಾಧ್ಯವಾಗಲಿಲ್ಲ;

೪) ಪ್ರೊ॥ ಡಿ. ಎಂ. ನಂಜುಂಡಪ್ಪ ಸಮಿತಿಯ ತಜ್ಞರ ವರದಿ ಪ್ರಕಾರ ಕಾವೇರಿ ನೀರಿನ ಹಂಚಿಕೆಯ ಸಮಸ್ಯೆಯಿಂದ ಕರ್ನಾಟಕ ಪಾಠ ಕಲಿತಿಲ್ಲವಷ್ಟೇ ಅಲ್ಲ ಕೃಷ್ಣ ನದಿಯ ನೀರನ್ನು ಬಳಸಿಕೊಳ್ಳುವುದರಲ್ಲಿ ಕೂಡ ವಿಫಲವಾಗಿದೆ. ಬಚಾವತ್ ನ್ಯಾಯಾಧಿಕರಣದಿಂದ ದತ್ತವಾದ ೭೩೪ ಟಿಎಮ್‌ಸಿ ಅಡಿ ನೀರನ್ನು ಉಪಯೋಗಿಸಿ ಕೊಳ್ಳಲು ಇದುವರೆಗೂ ಸಾಧ್ಯವಾಗಿಲ್ಲ. ೭.೮ ಲಕ್ಷ ಹೆಕ್ಟರ್ ಪ್ರದೇಶ ನೀರಾವರಿಯಿಲ್ಲದೆ ವಂಚಿತವಾಗಿದೆ. ಕರ್ನಾಟಕ ಉಪಯೋಗಿಸಿಕೊಳ್ಳಲು ಸಾಧ್ಯ ವಾಗದೇ ಇರುವ ನೀರನ್ನು ಆಂಧ್ರಪ್ರದೇಶ ಉಪಯೋಗಿಸಿಕೊಳ್ಳಲು ಪ್ರಯತ್ನಿ ಸುತ್ತಿದೆ. ಅದಕ್ಕೆ ಅನುರೂಪವಾದ ವಾದವನ್ನು ಹೊಸದಾಗಿ ರಚಿತವಾಗಬಹು ದಾದ ಪ್ರಾಧಿಕಾರದ ಮುಂದೆ ಮಂಡಿಸಲು ಆ ರಾಜ್ಯ ಎಲ್ಲ ಸಿದ್ಧತೆ ಮಾಡುತ್ತಿದೆ.

೫) ನ್ಯಾಯಾಂಗದ ಆದೇಶಗಳನ್ನು ಉಲ್ಲಂಘಿಸಿದ್ದಕ್ಕಾಗಿ ನ್ಯಾಯಾಂಗದ ಟೀಕೆಗೆ ಗುರಿಯಾಗುತ್ತಿರುವವರು ಕೃಷ್ಣ ಮೊದಲಿಗರಲ್ಲ. ಈ ಮೊದಲು ಮುಖ್ಯ ಮಂತ್ರಿ ಗಳಾಗಿದ್ದ ಬಂಗಾರಪ್ಪ, ರಾಮಕೃಷ್ಣ ಹೆಗಡೆ ಮತ್ತು ದೇವರಾಜ್ ಅರಸ್ ಕೂಡ ಬೇರೆ-ಬೇರೆ ಸಂದರ್ಭಗಳಲ್ಲಿ ನ್ಯಾಯಾಲಯದ ಟೀಕೆಗೆ ಗುರಿಯಾಗಿದ್ದಾರೆ;ಹೀಗಿದ್ದೂ ಕಾವೇರಿ ವಿವಾದದ ಸಂದರ್ಭದಲ್ಲಿ ನ್ಯಾಯಾಂಗ ನಿಂದನೆಗೆ ಕರ್ನಾಟಕ ಸರ್ಕಾರ ಒಳಗಾಗಬೇಕಾಗಿ ಬಂದದ್ದು ವಿಷಾದನೀಯ. ಇಲ್ಲಿ ಗಮನಿಸಬೇಕಾದ ಸಂಗತಿ ಯೇನೆಂದರೆ ರಾಜ್ಯ ಸರ್ಕಾರದ ಉನ್ನತ ಸ್ಥಾನದಲ್ಲಿರುವ ಹಾಗೂ ಮಾಹೆಯಾನಾ ಸಾವಿರಾರು ರೂಪಾಯಿಗಳ ವೇತನ ಪಡೆಯುವ ನೌಕರವರ್ಗ ನಿಜವಾಗಿಯೂ ದಕ್ಷವಾಗಿದೆಯೆ? ಆ ನೌಕರವರ್ಗ ಸರ್ಕಾರವನ್ನು ತಪ್ಪು ದಾರಿಗೆ ಎಳೆಯುತ್ತಿಲ್ಲವೆ? ಈ ಕುರಿತು ತನಿಖೆ ನಡೆದು ತಪ್ಪಿತಸ್ಥ ಅಧಿಕಾರಿಯನ್ನು ಗುರುತಿಸಿ ಅವರಿಗೆ ಶಿಕ್ಷೆ ಕೊಡಬೇಕು. ಕಾವೇರಿ ವಿವಾದದ ಉಲ್ಬಣಕ್ಕೆ ತಮಿಳುನಾಡು ಸಹ ಬಹಳಷ್ಟು ಕಾರಣವಾಗಿದೆ. ಆ ರಾಜ್ಯಕ್ಕೆ ಕರ್ನಾಟಕದ ತಪ್ಪುಗಳು ಕಾಣುತ್ತವೆಯೇ ಹೊರತು ತನ್ನ ತಪ್ಪುಗಳು ಕಾಣುತ್ತಿಲ್ಲ. “ತನ್ನ ಬೆನ್ನು ತನಗೆ ಕಾಣುವುದಿಲ್ಲ” ಎಂಬ ಗಾದೆಯಂತೆ ಆ ರಾಜ್ಯದ ನೀತಿಯಾಗಿದೆ.

ಕಾವೇರಿ ಜಲಾನಯನದ ಇಡೀ ಪ್ರದೇಶದ ನೀರಿನ ಸ್ಥಿತಿಗತಿಗಳ ಬಗ್ಗೆ, ಆ ಪ್ರದೇಶದಲ್ಲಿ ನಡೆಯುತ್ತಿರುವ ವ್ಯವಸಾಯ ಪದ್ಧತಿಗಳ ಬಗ್ಗೆ; ನೀರಿನ ಉಪಯೋಗದ ರೀತಿಯ ಬಗ್ಗೆ ಸಮಗ್ರವಾಗಿ ಮತ್ತು ವೈಜ್ಞಾನಿಕ ಅಧ್ಯಯನವನ್ನು ನಡೆಸಿದರೆ ವಸ್ತುಸ್ಥಿತಿಗೊತ್ತಾಗುವುದು. ೨೧ನೇ ಶತಮಾನದಲ್ಲಿ ಲಭ್ಯವಿರುವ ತಂತ್ರಜ್ಞಾನದ ಮೂಲಕ ಕಾವೇರಿ ಪ್ರದೇಶದಲ್ಲಿಯ ಒಂದೊಂದು ಹನಿ ನೀರಿನ ಲೆಕ್ಕವನ್ನೂ ಸಂಗ್ರಹಿಸಬಹುದು. ಈ ರೀತಿ ಅಧ್ಯಯನದ ಮೂಲಕ ಸಂಗ್ರಹ ವಾಗುವ ಮಾಹಿತಿಯ ಆಧಾರದ ಮೇಲೆ ಕಾವೇರಿ ನೀರನ್ನು ಅವಲಂಬಿಸಿರುವ ರಾಜ್ಯಗಳ ಮಧ್ಯ ನೀರಿನ ಹಂಚಿಕೆಯ ವಿಷಯವಾಗಿ ಈಗಾಗಲೇ ಅಸ್ತಿತ್ವದಲ್ಲಿರುವ

ಕಾವೇರಿ ನೀರಿನ ಪ್ರಾಧಿಕಾರದ ಮೂಲಕ ನಿರ್ದಿಷ್ಟ ಹಾಗೂ ಸ್ಪಷ್ಟ ತೀರ್ಮಾನವನ್ನು ಪಡೆದು ಅದರಂತೆ ಎಲ್ಲ ರಾಜ್ಯಗಳು ನಡೆದುಕೊಳ್ಳಬೇಕು. ಆದರೆ ತಮಿಳುನಾಡಿನ ಜನತೆ ಮತ್ತು ಅಲ್ಲಿಯ ರಾಜಕಾರಣಿಗಳು ಏಕಪಕ್ಷೀಯ ಕಣ್ಣು ಪಟ್ಟಿಯನ್ನು ಕಟ್ಟಿ ಕೊಂಡಿವೆ. ವಿವಾದದಲ್ಲಿಯ ಇನ್ನೊಂದು ಪಕ್ಷದವರ ಅಭಿಪ್ರಾಯಗಳನ್ನು ತಿಳಿಯು ವುದಕ್ಕಾಗಲೀ, ವಾಸ್ತವಿಕ ಸಂಗತಿಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಲೀ ಆ ರಾಜ್ಯ ಸಿದ್ಧವಿಲ್ಲವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ಪ್ರಾಧಿಕಾರ ಎರಡೂ ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಸಭೆ ಸೇರಿಸಿ ಈ ವಿವಾದ ಸಮರ್ಪಕವಾಗಿ ಇತ್ಯರ್ಥಗೊಳ್ಳುವಂತೆ ಮಾಡಬೇಕು.

ಕಾವೇರಿ ವಿವಾದವನ್ನು ಸಾಧ್ಯವಿದ್ದಷ್ಟು ರಾಜಕೀಯ ಪಕ್ಷಗಳಿಂದ ದೂರ ವಿಡುವ ಕೆಲಸವನ್ನು ಎರಡೂ ರಾಜ್ಯಗಳ ಜನತೆ ಮಾಡಬೇಕಾಗಿದೆ. ಈಗ ನಡೆಯು ತ್ತಿರುವ ಕಾವೇರಿ ವಿವಾದ ದಾರಿತಪ್ಪಿದ್ದಕ್ಕೆ ಎರಡೂ ರಾಜ್ಯಗಳ ರಾಜಕಾರಣಿಗಳು ಮೊದಲ ಅಪರಾಧಿಗಳಾಗಿದ್ದಾರೆ: ಎರಡನೇ ಅಪರಾಧಿ ಕೇಂದ್ರ ಸರ್ಕಾರ. ತಮಿಳು ನಾಡಿಗೆ ಒಂದು ಹನಿ ನೀರು ಬಿಡಲೂ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಕರ್ನಾಟಕವಿದೆ ಎಂದು ಹೇಳುತ್ತ ಬಂದಿದ್ದ ರಾಜಕಾರಣಿಗಳು ಸುಪ್ರೀಂ ಕೋರ್ಟಿನ ಕಟುಟೀಕೆಯ ನಂತರ ದಿಢೀರನೆ ೮-೯ ಸಾವಿರ ಕ್ಯುಸೆಕ್ಸ್ ನೀರನ್ನು ಬಿಡಲು ಪ್ರಾರಂಭಿಸಿತು. ಈ ಘಟನೆಯ ಕಾರಣದಿಂದಾಗಿ ಕರ್ನಾಟಕದ ಮುಖ್ಯ ಮಂತ್ರಿಗಳು ಹಾಗೂ ಬೇರೆ ರಾಜಕಾರಣಿಗಳು ತಮ್ಮ ವಿಶ್ವಾಸನೀಯತೆಯನ್ನು ಕಳೆದುಕೊಂಡರು. ಆದರೆ ಈ ಬಗ್ಗೆ ಅವರಾರಿಗೂ ಆತ್ಮ ಸಾಕ್ಷಿ ಕಾಡಿದಂತೆ ಅನಿಸುವುದಿಲ್ಲ.

ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ರೈತರನ್ನು ಎತ್ತಿ ಕಟ್ಟಿ ಹೋರಾಟ ನಡೆಸಿ ಸೋತನಂತರ ಈಗ ರಾಜಕಾರಣಿಗಳು ಹೇಳುವ ಮಾತೇ ಬೇರೆಯಾಗಿದೆ. ಇದು ರಾಜಕಾರಣಿಗಳಿರುವ ವೈರುಧ್ಯತೆಯನ್ನು ತೋರಿಸುತ್ತದೆ.

ಈಗ ಕಾವೇರಿ ಸಮಸ್ಯೆಯ ಪರಿಹಾರಕ್ಕೆ ಸೂಚಿಸಲ್ಪಡುತ್ತಿರುವ ಕೆಲ ಮುಖ್ಯ ಸಲಹೆಗಳು ಈ ರೀತಿ ಇವೆ:-

1) ನದಿಗಳ ರಾಷ್ಟ್ರೀಕರಣ

2) ನದಿಗಳ ಜೋಡಣೆ

ಎರಡೂ ಸಲಹೆಗಳು ಕಾರ್ಯಾನ್ವಯಗೊಳ್ಳುವುದು ಕಷ್ಟ ಸಾಧ್ಯ. ಅವು ದಂಗೆಯೆದ್ದಿರುವ ರೈತರನ್ನು ಸಮಾಧಾನಗೊಳಿಸಲು ಹೇಳಲಾಗುತ್ತಿರುವ ಮಾತು ಗಳಾಗಿವೆಯೇ ಹೊರತು ಅವು ರೈತರ ಈಗಿನ ಸಮಸ್ಯೆಗಳನ್ನು ಕೂಡಲೇ ಪರಿ ಹರಿಸಲಾರವು. ಆ ಸಲಹೆಗಳು ಕಾರ್ಯಗತವಾಗುವುದಕ್ಕೆ ದೀರ್ಘ ಸಮಯವೂ, ಹೇರಳ ಧನವೂ ಬೇಕಾಗುತ್ತದೆ ಅಲ್ಲದೆ ಆ ಯೋಜನೆಗಳ ಅನುಷ್ಠಾನದ ಕಾರಣ ದಿಂದಾಗಿ ಪರಿಸರದ ಮೇಲೆ ಏನು ಪರಿಣಾಮವಾಗುತ್ತದೆಂಬ ಬಗ್ಗೆ ಅಧ್ಯಯನ

ನಡೆಯಬೇಕಾಗುತ್ತದೆ. ಆ ಅಧ್ಯಯನದ ಆಧಾರದ ಮೇಲೆ ನದಿಗಳ ಜೋಡಣೆಯ ಯೋಚನೆ ಮತ್ತು ನದಿಗಳ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುವುದನ್ನು ತಪ್ಪಿಸುವ ಯೋಜನೆ ಸಿದ್ಧವಾಗಬೇಕಾಗುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಸಲಹೆಗಳು ರೈತರ ಕೋಪ ಮತ್ತು ತಾಪವನ್ನು ಸಾಂತ್ವನಗೊಳಿಸುವ ಮಾರ್ಗ ಗಳಾಗಿವೆಯೇ ವಿನಃ ಸಧ್ಯದ ಕಾವೇರಿ ನೀರಿನ ವಿವಾದಕ್ಕೆ ಪರಿಹಾರವಾಗಿಲ್ಲ.

ಕಾವೇರಿ ಸಮಸ್ಯೆಯ ಸಂದರ್ಭದಲ್ಲಿ ನಡೆದ ಹೋರಾಟ ಅಥವಾ ಚಳು ವಳಿಯ ಸಾಧಕ - ಬಾದಕಗಳ ಬಗ್ಗೆಯೂ ಆಲೋಚನೆ ನಡೆಯಬೇಕಿದೆ. ಅನ್ಯಾಯ ವಾದಾಗ ಪ್ರತಿಭಟನೆಯನ್ನು ಮಾಡುವುದು ನಾಗರಿಕರ ಹಕ್ಕು, ಮತ್ತು ಕರ್ತವ್ಯ ಕೂಡ. ಈ ಪರಂಪರೆ ಸ್ವಾತಂತ್ರ್ಯ ಆಂದೋಲನದ ಕಾಲದಿಂದಲೇ ಬಂದಿದೆ. ಅಷ್ಟೇ ಅಲ್ಲ, ಸ್ವತಂತ್ರಭಾರತದ ಜನರು ಅನ್ಯಾಯ-ಅತ್ಯಾಚಾರಗಳಂಥ ಸಮಸ್ಯೆಗಳ ಗಳ ವಿರುದ್ಧ ಹೋರಾಟ ನಡೆಸುವ ಸಾಮರ್ಥ್ಯ ಪಡೆಯಬೇಕೆಂಬುದೂ ಹಾಗೂ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವ ಓರ್ವ ಸಾಮಾನ್ಯನೂ ಪ್ರತಿಭಟನಾತ್ಮಕ ಶಕ್ತಿಯನ್ನು ಪಡೆಯಬೇಕೆಂಬುದು ಸ್ವಾತಂತ್ರ್ಯ ಪಡೆಯುವ ಉದ್ದೇಶ್ಯಗಳಲ್ಲಿ ಪ್ರಮುಖವಾದುದಾಗಿದೆಯೆಂದು ಮಹಾತ್ಮಾ ಗಾಂಧೀಜಿ ಹೇಳು ತ್ತಲೇ ಬಂದಿದ್ದರು. ಮತ್ತು ಪ್ರತಿಭಟನೆಯ ಸಾಧನವನ್ನಾಗಿ ಎರಡು ಅಸ್ತ್ರ ಗಳನ್ನು ಕೊಟ್ಟಿದ್ದರು ಒಂದು ಅಸ್ತ್ರ ಅಸಹಕಾರ, ಇನ್ನೊಂದು ಅಸ್ತ್ರ ಸತ್ಯಾ ಗ್ರಹ, ಆದರೆ ಕಾವೇರಿ ನೀರಿನ ಚಳುವಳಿಯ ಕಾಲಕ್ಕೆ ಚಳುವಳಿಯ ನಾಯ ಕರು ಚಳುವಳಿಯ ಹಿಂಸಾಮಾರ್ಗವನ್ನು ಅನುಸರಿಸದಂತೆ ನೋಡಿಕೊಳ್ಳಲು ವಿಫಲವಾದರು. ಇದೇ ಹೊತ್ತಿಗೆ ಕೃಷ್ಣರವರು ನಡೆಸಿದ ಪಾದಯಾತ್ರೆಯೂ ಚಳುವಳಿಯನ್ನು ಇನ್ನಷ್ಟು ಗೊಂದಲಕ್ಕೀಡು ಮಾಡಿತೆ ವಿನಃ ಅದರಿಂದ ಸಮಸ್ಯಾ ಪರಿಹಾರ ಮಾರ್ಗ ಸ್ಪಷ್ಟವಾಗಲಿಲ್ಲ. ಅಷ್ಟೇ ಅಲ್ಲ ಚಳುವಳಿ ಒಟ್ಟಾರೆ ಕರ್ನಾಟಕಕ್ಕೆ ಪ್ರತಿಕೂಲವಾದ ಪರಿಸ್ಥಿತಿಯನ್ನುಂಟು ಮಾಡಿತು.

ರೈತರ ಚಳುವಳಿ ಹಿಂಸಾಮಾರ್ಗ ಹಿಡಿದಿದ್ದರಿಂದ ಮತ್ತು ರಾಜಕೀಯ ರೂಪವನ್ನು ತಾಳಿದ್ದರಿಂದ ಮುಖ್ಯ ಮಂತ್ರಿ ಕೃಷ್ಣರವರು ಗಾಬರಿಗೊಂಡರು ಆದ್ದರಿಂದ ಅವರು ಸವೈಧಾನಿಕ ಪರಿಹಾರಗಳ ಕಡೆಗೆ ಗಮನ ಹರಿಸಲು ಮತ್ತು ನ್ಯಾಯಾಲಯದ ಆದೇಶದ ಪಾಲನೆಯ ಅಗತ್ಯವನ್ನು ಅರಿತುಕೊಳ್ಳಲು ಅಸಮರ್ಥ ರಾದರು. ಒಂದು ವೇಳೆ ರೈತ ಚಳುವಳಿ ಹಿಂಸಾಮಾರ್ಗ ಹಿಡಿಯದೆ ಅಹಿಂಸಾ ಮಾರ್ಗದಲ್ಲೇ ನಡೆದು ಕಾವೇರಿ ವಿವಾದದ ಪರಿಹಾರದಲ್ಲಿ ಸರ್ಕಾರಕ್ಕೆ ನೈತಿಕ ಸಮರ್ಥನೆ ಕೊಟ್ಟಿದ್ದರೆ ಬಹುಶಃ ನ್ಯಾಯಾಂಗದ ಟೀಮಾರಿಯಿಂದ ಕರ್ನಾಟಕ ತಪ್ಪಿಸಿಕೊಳ್ಳಬಹುದಾಗಿತ್ತು, ಮತ್ತು ನ್ಯಾಯಾಲಯದ ಹಾಗೂ ಕಾವೇರಿ ಪ್ರಾಧಿ ಕಾರದ ಸಹಾನುಭೂತಿಯನ್ನೂ ಪಡೆಯಬಹುದಾಗಿತ್ತು. ★

ಕಾವ್ಯಗಳಲ್ಲಿ ಕಾಡು ಮತ್ತು ಊರು

ಲೇ : ಪ್ರೊ॥ ಬರಗೂರು ರಾಮಚಂದ್ರಪ್ಪ

ನಮ್ಮ ಕಾವ್ಯಗಳಲ್ಲಿರುವ ಕಾಡು ಕೇವಲ ಮರ, ಗಿಡ, ಮೃಗಾದಿಗಳ ತಾಣವಲ್ಲ. ಕಾಡಿನೊಳಗೆ ಪ್ರಾಣಿ ಪಕ್ಷಿಗಳ ಜೊತೆ ಋಷಿಗಳೂ ವಾಸ ಮಾಡುತ್ತಾರೆ. ಸಾಮಾನ್ಯವಾಗಿ ಋಷಿಗಳ ಆಶ್ರಮಗಳು ಊರೊಳಗೆ ಇರುವುದಿಲ್ಲ. ಊರಿನಿಂದ ಬಹುದೂರ ಕಾಡುಗಳಲ್ಲಿ, ನದಿ ತೀರಗಳಲ್ಲಿ, ಜಲಪ್ರಪಾತಗಳಲ್ಲಿ ತಮಗೆ ತಾವೇ ನಿರ್ಲಿಪ್ತ, ನಿರಪೇಕ್ಷ ಸಾಕ್ಷಿಪ್ರಜ್ಞೆಗಳಾಗಿ ನೆಲೆಯೂರುತ್ತವೆ. ತಪಸ್ಸುಗಳು ನಡೆಯುವುದು ಊರೊಳಗಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕು. ತಪಸ್ಸಿಗೆ ಹೊರಟವರೆಂದರೆ ಕಾಡಿಗೆ ಹೊರಟವರು ಎಂದೇ ಅರ್ಥ. ಹೀಗಾಗಿ ನಮ್ಮ ಕಾವ್ಯಗಳಲ್ಲಿ ಬರುವ ಕಾಡು 'ಪ್ರತೀಕ್ಷೆಯ ಪ್ರತೀಕ'ವೂ ಆಗಿದೆ. ಇಲ್ಲಿ ಬದುಕುವ ಜೀವಿಗಳಿಗೆ ನಾನಾ ರೀತಿಯ ಪ್ರತೀಕ್ಷೆಗಳಿವೆ. ಆದರೆ ಪ್ರತಿಷ್ಠೆಗಳಿಲ್ಲ. ಋಷಿಗಳ ಪ್ರತೀಕ್ಷೆ; ಋಷಿ ಪತ್ನಿಯರ ಪ್ರತೀಕ್ಷೆ, ಊರಿನಿಂದ ಕಾಡಿಗೆ ಬಂದ ರಾಜರ ಪ್ರತೀಕ್ಷೆ ಹೀಗೆ ಒಬ್ಬೊಬ್ಬರದೂ ಒಂದೊಂದು ರೀತಿಯ ಪ್ರತೀಕ್ಷೆಯ ನೆಲೆ. ಹಾಗೆಂದ ಕೂಡಲೆ ಇದಿಷ್ಟೇ ಕಾಡಿನ ಬದುಕೆಂದು ಭಾವಿಸಬೇಕಾಗಿಲ್ಲ. ಇದೇ ಕಾಡಿನಲ್ಲಿ ಕಿತ್ತು ತಿನ್ನುವ ಪ್ರಾಣಿಗಳಿವೆ, ಭೋರ್ಗರೆಯುವ ನದಿಗಳಿವೆ, ಸರೋವರಗಳಿವೆ. ನಗುವ ಹೂಗಳಿವೆ. ಬುಸುಗುಡುವ ಹುತ್ತಗಳಿವೆ.

ವಾಲ್ಮೀಕಿಯ ಹುತ್ತ ಬೆಳೆದದ್ದು ಊರೊಳಗಲ್ಲ, ಕಾಡಿನಲ್ಲಿ. ಲವ-ಕುಶರು ಬೆಳೆದದ್ದು, ಹಾಡಿದ್ದು ಕಾಡಿನಲ್ಲಿ, ನಮ್ಮ ಪುರಾಣ ಮತ್ತು ಕಾವ್ಯಗಳಲ್ಲಿ ಅನೇಕ ಮುಖ್ಯ ಘಟನೆಗಳು ಸಂಭವಿಸಿರುವುದು ಕಾಡಿನಲ್ಲಿ. ಅರ್ಜುನನು ಶಿವನಿಂದ ಪಾಶುಪತಾಸ್ತ್ರ ಪಡೆದದ್ದು ಕಾಡಿನಲ್ಲಿ. ಏಕಲವ್ಯನು ದ್ರೋಣರಿಗೆ ಗುರುದಕ್ಷಿಣೆಯಾಗಿ ಹೆಬ್ಬೆರಳು ನೀಡಿದ್ದು ಕಾಡಿನಲ್ಲಿಯೇ. ಹರಿಶ್ಚಂದ್ರ ಮತ್ತು ಅನಾಮಿಕೆಯರ ಪ್ರಸಂಗಕ್ಕೆ ತಾಣವಾದದ್ದು ಕಾಡು. ಪರಶುರಾಮನಿಂದ ವಿದ್ಯೆ ಕಲಿತ ಕರ್ಣ ಮತ್ತೆ ಶಾಪಗ್ರಸ್ತನಾಗುವುದು ಕಾಡಿನಲ್ಲಿರುವ ಆಶ್ರಮದ ಆವರಣದಲ್ಲಿ. ಅಷ್ಟೇಕೆ,? ಪುರಾಣ ಕತೆಯ ಪ್ರಕಾರ ವಾಲ್ಮೀಕಿಯು ಕಾಡಿನಲ್ಲಿ ನಡೆದ ಘಟನೆಯೊಂದರ ಫಲವಾಗಿ ರಾಮಾಯಣವನ್ನು ಬರೆದ. ವಾಲ್ಮೀಕಿಯು ಕಾಡಿನ ಬೇಡರ ಬದುಕಿನಲ್ಲಿ ಬೆರೆತು ಅನಂತರ ಮಹರ್ಷಿಯಾದವನು. ಒಮ್ಮೆ ತಮಸಾ ನದಿಗೆ ಸ್ನಾನಕ್ಕೆ ಹೋಗಿದ್ದಾಗ ಬೇಡನೊಬ್ಬ ಕ್ರೌಂಚ ಪಕ್ಷಿಗಳ ಕೂಡಿಕೆಯಲ್ಲಿ ಗಂಡು ಹಕ್ಕಿಯನ್ನು ಕೊಂದದ್ದನ್ನು ಕಂಡು ಶಾಪಕೊಡಲು ಹೋದಾಗ ಅದೇ ಛಂದೋರೂಪದ ಶ್ಲೋಕವಾಗಿ ಹೊರಹೊಮ್ಮಿತು. ವಾಲ್ಮೀಕಿ ಚಿಂತಾಕ್ರಾಂತನಾಗಿ ಆಶ್ರಮ ಸೇರಿದ ಮೇಲೆ ಬ್ರಹ್ಮ ಬಂದು ರಾಮಾಯಣವನ್ನು ಬರೆಯಲು

ಹೇಳಿದ. ಅನಂತರ ನಾರದನು ರಾಮಾಯಣದ ಸಾರವನ್ನು ವಾಲ್ಮೀಕಿಗೆ ಹೇಳಿದ ನೆಂಬ ಪ್ರಸಂಗವು ರಾಮಾಯಣದಲ್ಲೇ ಇದೆ. ಇದೊಂದು ಪ್ರತೀಕಾತ್ಮಕ ಉದಾಹರಣೆ. ಯಾಕೆಂದರೆ ಕಾಡಿನ ಘಟನೆಯೊಂದು ಮಹಾಕಾವ್ಯವೊಂದರ ರಚನೆಗೆ ಪ್ರೇರಣೆಯಾಯಿತು ಎಂಬ ಕಲ್ಪನೆ ಸಾಮಾನ್ಯವಾದುದಲ್ಲ.

ಪಾಂಡುರಾಜನಿಗೆ ಸಂಬಂಧಿಸಿದ ಬಹುಮುಖ್ಯ ಘಟನೆಯೊಂದು ಕಾಡಿನಲ್ಲಿಯೇ ಸಂಭವಿಸುತ್ತದೆ. ಪಾಂಡುರಾಜನು ಬೇಟೆಗಾಗಿ ಕಾಡಿಗೆ ಬಂದಿರುತ್ತಾನೆ. ಅದೇ ಸಂದರ್ಭದಲ್ಲಿ ಕಿಂದಮನೆಂಬ ಮುನಿಯು ಮೃಗ ರೂಪವನ್ನು ಧರಿಸಿ ತನ್ನ ಪ್ರಿಯೆಯೊಂದಿಗೆ ವಿಹರಿಸುತ್ತಿರುತ್ತಾನೆ. ಪಾಂಡುವು ಗಂಡು ಜಿಂಕೆಯನ್ನು ಕೊಂದು ಹಾಕಿದ. ಆಗ ಕಿಂದಮ ಮುನಿಯು ಮೂಲ ರೂಪದಲ್ಲಿ ಕಾಣಿಸಿಕೊಂಡು "ನೀನು ಸ್ತ್ರೀ ಸಂಪರ್ಕ ಮಾಡಿದರೆ ಸಾಯುತ್ತೀಯೆ" ಎಂದು ಶಾಪ ಕೊಡುತ್ತಾನೆ. ಇದರಿಂದ ಖಿನ್ನನಾದ ಪಾಂಡು ಶತಶೃಂಗ ಪರ್ವತದ ಬಳಿ ತಪಸ್ಸಿಗೆ ಕೂತ. ಕುಂತಿಗೆ ಪ್ರೇರಣೆ ನೀಡಿ ಬೇರೆ ಮಾರ್ಗದಲ್ಲಿ ಪುತ್ರೋತ್ಪತ್ತಿ ಪಡೆಯಲು ಹೇಳಿದ. ಕುಂತಿಯು ಬಾಲ್ಯದಲ್ಲಿ ದುರ್ವಾಸ ಮುನಿಯ ಸೇವೆ ಮಾಡಿ ಪಡೆದಿದ್ದ ಮಂತ್ರಶಕ್ತಿಯಿಂದ ದೇವತೆಗಳನ್ನು ಬರ ಮಾಡಿಕೊಂಡು ಪುತ್ರರನ್ನು ಗಳಿಸುವ ವರಗಳನ್ನು ಪಡೆಯುತ್ತಾಳೆ. ಮುಂದೆ ಪಾಂಡುವು ಮಾದ್ರಿಯ ಸಂಪರ್ಕದಿಂದ ಸಾಯಬೇಕಾಗುತ್ತದೆ. ಮಹಾಭಾರತದಲ್ಲಿ ಇದೊಂದು ಪ್ರಮುಖ ಘಟನೆಯಾಗಿದೆ.

ಹೀಗೆ ನಮ್ಮ ಕಾವ್ಯಗಳ 'ಕಾಡು' ಪ್ರಮುಖ ಘಟನೆಗಳ ಮೂಲಕ ಕಥಾ ನಿರೂಪಣೆಗೆ ಒತ್ತಾಸೆಯಾಗುವುದು ಏನನ್ನು ಹೇಳುತ್ತದೆ ಎಂದರೆ.– ಕಾಡೆನ್ನುವುದು ಮನುಷ್ಯನ ಬದುಕಿನ ಭಾಗ. ಅದು ಊರಿನಿಂದ ದೂರವಿದ್ದರೂ ಬದುಕಿನಿಂದ ದೂರವಿಲ್ಲ. ಊರಿನಲ್ಲಿ ನಡೆಯುವ ಕ್ರಿಯೆಗಳಿಗೆ ಕಾಡಿನ ಕ್ರಿಯಾ ಪರಂಪರೆಯ ಪ್ರೇರಣೆ ಇರುತ್ತದೆ.

ಊರಿನ ಗುಣಲಕ್ಷಣಗಳು ಕಾಡಿನಲ್ಲಿ ಪ್ರಕಟವಾಗುವ ಕ್ರಮ ಬೇರೆಯಿರಬಹುದೇ ಹೊರತು ನಮ್ಮ ಕಾವ್ಯಗಳ ಕಾಡುಗಳು ಊರಿನ ಬದುಕಿನಿಂದ ಸಂಪೂರ್ಣ ಕಡಿದುಕೊಂಡ ತಾಣಗಳಾಗಿರಲಿಲ್ಲ. ಮನುಷ್ಯರ ಪ್ರೀತಿ–ನೋವು, ಅಸಹನೆ ಮುಂತಾದ ಸ್ವಭಾವಗಳು ಅಥವಾ ನಡವಳಿಕೆಗಳು ಕಾಡಿನ ಪ್ರಾಣಿಗಳಲ್ಲಿ, ಋಷ್ಯಾಶ್ರಮದ ಆವರಣದಲ್ಲಿ ವಿವಿಧ ವಿಧಾನಗಳಲ್ಲಿ ಪ್ರಕಟಗೊಳ್ಳುತ್ತವೆ. ಕಾಡಿನಲ್ಲಿ ಪ್ರಾಣಿಗಳ ಕಿತ್ತಾಟಗಳಿವೆ. ಮನುಷ್ಯರನ್ನು ಕಂಗೆಡಿಸುವ ಕ್ರೂರ ಮೃಗಗಳಿವೆ. ಆದರೆ ಇಲ್ಲಿಯೇ ಸಾಧಕರಾದ ಋಷಿಗಳಿದ್ದಾರೆ. ತೃಪ್ತ ಹಾಗೂ ಅತೃಪ್ತ ಋಷಿ ಪತ್ನಿಯರೂ ಇದ್ದಾರೆ. ಆದರ್ಶ ಬದುಕಿನ ಪ್ರತೀಕ ಎನ್ನುವಂತೆ ಪ್ರಕಟಗೊಳ್ಳುವ ಆಶ್ರಮಗಳೂ ಇವೆ. ಉದಾಹರಣೆಗೆ ಜಾಬಾಲಿಯ

ಋಷಿಯ ಆಶ್ರಮದ ವರ್ಣನೆಯನ್ನು ನೋಡಬಹುದು. ಈ ಆಶ್ರಮದಲ್ಲಿ ಹುಲಿ- ಹುಲ್ಲೆಗಳು ಜೊತೆಯಲ್ಲಿ ಆಟವಾಡುತ್ತವೆ; ಹಾವು ಮತ್ತು ಮುಂಗುಸಿಗಳು ಸರಸವಾಡುತ್ತವೆ. ಪ್ರಾಣಿ- ಪಕ್ಷಿಗಳು ತಂತಮ್ಮ ಸಹಜ ಸ್ವಭಾವಗಳನ್ನು ಮೀರಿ ಸಾಮರಸ್ಯದ ಬದುಕನ್ನು ಸಾಗಿಸುತ್ತಿರುವ ಆಶ್ರಮದ ದೃಶ್ಯವು ಆದರ್ಶ ಸಮಾಜದ ಸಂಕೇತವಾಗಿದೆ. ನಮ್ಮ ಕಾವ್ಯಗಳಲ್ಲಿ ರಾಜಪರಂಪರೆಯೇ ಪ್ರಧಾನವಾದ ಊರುಗಳು ಋಷಿಪರಂಪರೆ ಪ್ರಧಾನವಾದ ಕಾಡಿನಲ್ಲಿಯ ಆದರ್ಶ ಆಶ್ರಮಗಳನ್ನು ಅನುಸರಿಸಬೇಕಾದ ಸೂಚನೆಯನ್ನು ಇಂತಹ ದೃಶ್ಯಗಳು ನೀಡುತ್ತವೆ.

ಊರಿನ ರಾಜಪರಂಪರೆ ಮತ್ತು ಕಾಡಿನ ಋಷಿಪರಂಪರೆಗಳನ್ನು ನಮ್ಮ ಕಾವ್ಯಗಳು ಸಂಪೂರ್ಣ ಬೇರ್ಪಡಿಸಿಲ್ಲ ಎಂಬ ಅಂಶವನ್ನೂ ಗಮನಿಸ ಬೇಕು. ರಾಜಪರಂಪರೆ ಮತ್ತು ಋಷಿಪರಂಪರೆಗಳ ನಡುವೆ ಪೂರಕ ಸಂಬಂಧಗಳನ್ನು ನಿರ್ಮಿಸುವ ನಮ್ಮ ಕಾವ್ಯಗಳು ಈ ಮೂಲಕ ಊರು ಮತ್ತು ಕಾಡುಗಳ ಸಾಂಸ್ಕೃತಿಕ ಅನುಸಂಧಾನ ಸಂದರ್ಭವನ್ನು ಸಾದರಪಡಿಸು ತ್ತವೆ. 'ಊರು' ಎಂಬ ವಾಸಸ್ಥಳವು ಕಾಡಿನಿಂದ ಸಂಪೂರ್ಣ ಪ್ರತ್ಯೇಕವಾಗಿದಲ್ಲ ಮತ್ತು ಕಾಡಿನಿಂದ ಸಂಪೂರ್ಣ ಕಡಿದುಕೊಂಡಿಲ್ಲದ ಸಂದರ್ಭವನ್ನು ಕಾವ್ಯಗಳಲ್ಲಿ ಕಾಣಬಹುದಾಗಿದೆ. ಇಂದು ಕಾಡುಗಳಲ್ಲಿ ಆದಿವಾಸಿ ಜನರು ಬದುಕುತ್ತಿದ್ದಾರೆ. ಗಡ್ಡಧಾರಿ ಮುನಿಗಳು 'ಪುಣ್ಯ ಕ್ಷೇತ್ರ'ಗಳಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದಾರೆ.

ಕಾಡು ಮನುಷ್ಯ ಸಂಸ್ಕೃತಿಯ ಮೂಲ ಘಟಕ ಎನ್ನುವುದನ್ನು ನಾವು ಮರೆಯಬಾರದು. ಕಾಡಿನ ಮನುಷ್ಯ ತನ್ನ ಆಹಾರೋತ್ಪಾದನೆಗಾಗಿ ನಡೆಸು ತ್ತಿದ್ದ 'ಬೇಟೆ' ನಮ್ಮ ಕಾವ್ಯದ ರಾಜರಿಗೆ 'ಹವ್ಯಾಸ' ಮಾತ್ರವಾದ ಸ್ಥಿತ್ಯಂತರ ವನ್ನು ಗಮನಿಸಬಹುದು. ನಮ್ಮ ಬಹುಪಾಲು ಕಾವ್ಯಗಳು ಊರು ಮತ್ತು ಕಾಡುಗಳ ನಡುವಿನ ಸಂಬಂಧಾಂತರಗಳನ್ನು ನಿರೂಪಿಸುತ್ತವೆ. ಈ ಮೂಲಕ ಅಂದಂದಿನ ಸಂಸ್ಕೃತಿ ರೂಪಿಕೆಗಳನ್ನು ಅಭಿವ್ಯಕ್ತಿಸುತ್ತವೆ. 'ಬೇಟೆ'ಯ ಚರ್ಚೆ ಯಿಂದಲೇ ಈ ಅಂಶವನ್ನು ಮತ್ತಷ್ಟು ವಿವರಿಸಬಹುದಾಗಿದೆ.

ಕಾಡಿನ ಜನರಿಗೆ ಬೇಟೆಯು ಆಹಾರೋತ್ಪಾದನೆಯ ಒಂದು ಮುಖ್ಯ ವಿಧಾನವಾದರೆ ಊರಿನ ಜನರಿಗೆ ಅದೊಂದು ಹವ್ಯಾಸ ಹಾಗೂ ಆಚರಣೆ ಯಾಗಿದೆ; ನಮ್ಮ ಕಾವ್ಯಗಳ ರಾಜರು ಬೇಟೆಗೆ ಹೋಗುವುದು ಬೇಸರ ಕಳೆ ಯಲಿಕ್ಕಾಗಿ. ರಂಜನೆಗಾಗಿ; ಅಂದರೆ ರಾಜ ಪರಂಪರೆಗೆ ಬೇಟೆಯು ಬದುಕಿನ ಅನಿವಾರ್ಯ ಭಾಗವಲ್ಲ. ಆಹಾರೋತ್ಪಾದನೆಯ ಸಾಧನವಲ್ಲ. ತಮ್ಮ 'ಬಿಲ್ ವಿದ್ಯೆ'ಯನ್ನು ಪ್ರಯೋಗಿಸುವ ಒಂದು 'ಹವ್ಯಾಸ'. ಆದರೆ ಇಂದು ಊರಿನ

ಜನಸಾಮಾನ್ಯರಿಗೆ 'ಬೇಟೆ' ಎನ್ನುವುದು ಒಂದು 'ಆಚರಣೆ' ಆಗಿರುವುದನ್ನು ಗಮನಿಸಬಹುದು. ಕೆಲವು ಹಬ್ಬಗಳಂದು ಊರಿನ ಜನರು ಹೊಲಗಳತ್ತ ಬೇಟೆಗೆಂದು ಹೋಗುತ್ತಾರೆ. ಬೇಟೆಯಾಡುವುದು ಹುಲಿಯನ್ನಲ್ಲ; ಬೆಳ್ಳಿ ಇಲಿಗಳನ್ನು, ಬಿಳಿಯ ಬಣ್ಣದ ಈ ಇಲಿಗಳನ್ನು ಹಿಡಿದು ತಂದು, ಕೊಯ್ದು, ಮುತ್ತುಗದ ಎಲೆಯಲ್ಲಿ ಚೂರುಗಳನ್ನು ಹಾಕಿ ನೆಂಟರಿಷ್ಟರಿಗೆ ಹಂಚುವ ಆಚರಣೆ ನಡೆಯುತ್ತದೆ. ಕೆಲವೊಮ್ಮೆ ಹಬ್ಬಕ್ಕೆ ಬಲಿಯಾದ ಪ್ರಾಣಿಯ ಮಾಂಸದ ತುಂಡುಗಳನ್ನು ಮುತ್ತುಗದ ಎಲೆಯಲ್ಲಿಟ್ಟು ಹಂಚಲಾಗುತ್ತದೆ. ಇದು ಬೇಟೆ ಮತ್ತು ಆಹಾರ ಹಂಚಿಕೆಯ ಪ್ರಾಚೀನ ಸಂಸ್ಕೃತಿಯ ಪಳೆಯುಳಿಕೆ. ಇದೊಂದು ಸಾಂಸ್ಕೃತಿಕ ನೆನಪು. ಅಂದರೆ ಯಾವ ಬೇಟೆಯು ಕಾಡಿನಲ್ಲಿ ಬದುಕಿನ ಭಾಗವಾಗಿತ್ತೋ ಅದು ಊರಿನಲ್ಲಿ ನೆನಪಿನ ಆಚರಣೆಯಾಗಿ ಸ್ಥಿತ್ಯಂತರಗೊಂಡಿದೆ. ಹೀಗಾಗಿ 'ಬೇಟೆ'ಯು ಕಾಡು ಮತ್ತು ಊರುಗಳ ಸಂಸ್ಕೃತಿ ಸ್ಥಿತ್ಯಂತರದ ವ್ಯಾಖ್ಯಾನಕ್ಕೆ ಒಂದು ಸಮರ್ಥ ಸಾಧನವಾಗುತ್ತದೆ.

ಕಾಡು ಮತ್ತು ಊರುಗಳನ್ನು ಎರಡು ಸಂಸ್ಕೃತಿ ರೂಪಿಕೆಗಳಾಗಿ ಪರಿಶೀಲಿಸುವ ಕೆಲಸ ಕುತೂಹಲಕಾರಿ ಅಧ್ಯಯನಕ್ಕೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಮತ್ತಷ್ಟು ಅಧ್ಯಯನಗಳು ನಡೆಯಬೇಕಾಗಿವೆ. ಈಗ ನೋಡಿ; 'ಕಾಡು' ಹೊರ ನೋಟಕ್ಕೆ ಸಂಸ್ಕೃತಿಯ ಸಂಚಾರ ರೂಪವಾಗಿ ಕಾಣಿಸುತ್ತದೆ. 'ಊರು' ಸಂಸ್ಕೃತಿಯು ಸ್ಥಾಯೀ ರೂಪವಾಗಿ ಗೋಚರಿಸುತ್ತದೆ. ಮೇಲ್ನೋಟಕ್ಕೆ ಹೀಗೆ ಅನ್ನಿಸಲು ಆಧಾರವಿದೆ. ಕಾಡಿನೊಳಗಿನ ಮನುಷ್ಯರು ಬಹುಪಾಲು ಅಲೆಮಾರಿಗಳು. ಕೆಲವು ಕಾಲ ಸ್ಥಾಯಿಯಾಗಿ ಒಂದು ಕಡೆ ಇದ್ದರೂ ಬಹುಪಾಲು ಆದಿವಾಸಿಗಳು ಇಂದಿನ ಒತ್ತಡದಲ್ಲಿ ಅಲೆಮಾರಿಗಳು ಆಗುತ್ತಿದ್ದಾರೆ. ಇನ್ನು ಪ್ರಾಣಿ- ಪಕ್ಷಿಗಳಂತೂ ಸದಾ ಸಂಚಾರಿಗಳು. ಊರಿನಲ್ಲಿರುವ ಜನರು ಮನೆ ಕಟ್ಟಿಕೊಂಡು ಸ್ಥಾಯಿಯಾದ ನೆಲೆ ಪಡೆದಿರುತ್ತಾರೆ. ಎಲ್ಲಿ ಸಂಚಾರ ಮಾಡಿದರೂ ಮತ್ತೆ ಮೂಲ ಮನೆಗೆ ಬರುತ್ತಾರೆ. ಈ ಕಾರಣಗಳಿಂದ "ಕಾಡು' ಸಂಸ್ಕೃತಿಯು ಸಂಚಾರಿ ರೂಪಿಯಾಗಿ 'ಊರು' ಸ್ಥಾಯೀ ರೂಪಿಕೆಯಾಗಿ ಕಾಣಿಸುತ್ತದೆ. ಆದರೆ ಒಳಗಿನ ವೈರುಧ್ಯ ಬೇರೆಯೇ ಇದೆ. ಭೌತಿಕವಾಗಿ ಅಲೆಮಾರಿಯಾಗುವ ಕಾಡಿನ ಜನರ ಬದುಕಿನ ವಿಧಾನದಲ್ಲಿ ಹೆಚ್ಚು ಬದಲಾವಣೆಗಳಾಗದೆ ಸಂಸ್ಕೃತಿ ರೂಪಿಕೆಗಳು ಸ್ಥಾಯಿಯಾಗಿರುತ್ತವೆ. ನೆಲೆಯೂರಿದ ಜನರು ಹೊಸ ಬದಲಾವಣೆಗಳಿಗೆ ತೆರೆದುಕೊಳ್ಳುತ್ತ, ಬದುಕಿನಲ್ಲಿ ಬದಲಾವಣೆ ಮಾಡಿಕೊಳ್ಳುತ್ತ, ಅವರ ಸಂಸ್ಕೃತಿ ರೂಪಿಕೆಗಳು ಸಂಚಾರಿಯಾಗುತ್ತವೆ. 'ಕಾಡು' ಮತ್ತು 'ಊರು'ಗಳು ಮೇಲ್ನೋಟಕ್ಕೆ ಕ್ರಮವಾಗಿ ಸಂಚಾರಿ ಮತ್ತು ಸ್ಥಾಯಿಯಾಗಿ ಕಾಣಿಸಿಕೊಳ್ಳುತ್ತ ಅಂತರ್ಯದಲ್ಲಿ ಕ್ರಮವಾಗಿ

ಸ್ಥಾಯಿ ಮತ್ತು ಸಂಚರಿಯಾಗುವ ವೈರುಧ್ಯವು ನಮ್ಮ ಕಾಲದ ಕನ್ನಡಿಯೂ ಆಗಿದೆ. ಆದರೆ ನಮ್ಮ ಕಾವ್ಯಗಳಲ್ಲಿರುವ ಕಾಡು ಮತ್ತು ಊರುಗಳ ನಿಕಟ ಸಂಬಂಧವನ್ನು ಸ್ಥಾಪಿಸುತ್ತ ಅಂದಂದಿನ ಸಾಂಸ್ಕೃತಿಕ ಅನುಸಂಧಾನಕ್ಕೆ ಸಂಕೇತ ವಾಗುತ್ತವೆ.

ನಮ್ಮ ಮಹಾಕಾವ್ಯಗಳಲ್ಲಿ ಸಾಮಾನ್ಯವಾಗಿ 'ಮಹಾಪ್ರಯಾಣ'ವೊಂದು (Voyage) ಇರುತ್ತದೆ. ಈ ಮಹಾ ಅಥವಾ ದೀರ್ಘ ಪ್ರಯಾಣವನ್ನು ಮಹಾಕಾವ್ಯಗಳ ಒಂದು ಲಕ್ಷಣವೆಂದೂ ಹೇಳಲಾಗುತ್ತದೆ. ಲಕ್ಷಣಗಳನ್ನು ಗುರುತಿಸುವ ದೃಷ್ಟಿಯಿಂದ ಇದು ಸರಿ. ಆದರೆ ಸಂಸ್ಕೃತಿಯ ನೆಲೆಯಲ್ಲಿ ಈ 'ಪ್ರಯಾಣ'ವನ್ನು ಬೇರೆ ರೀತಿಯಲ್ಲಿಯೂ ವ್ಯಾಖ್ಯಾನಿಸಬಹುದಾಗಿದೆ. ರಾಮಾಯಣ ಮಹಾಭಾರತಗಳನ್ನು ಒಳಗೊಂಡಂತೆ ನಮ್ಮ ಅನೇಕ ಕಾವ್ಯಗಳಲ್ಲಿ ಊರಿನರಾಜರು ವಿವಿಧ ಕಾರಣಗಳಿಗಾಗಿ ಕಾಡಿನತ್ತ 'ಪ್ರಯಾಣ' ಬೆಳೆಸುತ್ತಾರೆ. 'ರಾಮಾಯಣ'ದಲ್ಲಿ ಶ್ರೀರಾಮ ಸೀತೆ ಮತ್ತು ಲಕ್ಷ್ಮಣ ಮೂವರೂ ಹದಿನಾಲ್ಕು ವರ್ಷ ಕಾಡಿನವಾಸಕ್ಕೆ ಹೋಗಬೇಕಾಗುತ್ತದೆ. 'ಮಹಾಭಾರತ ದಲ್ಲಿ ಪಾಂಡವರು ಹನ್ನೆರಡು ವರ್ಷ ಕಾಡಿನವಾಸಕ್ಕೆ ದೂಡಲ್ಪಡುತ್ತಾರೆ. ನಳ ಮಹಾರಾಜನು ಕಾಡಿಗೆ ಹೋಗುವ ಕತೆ ಜನಜನಿತವಾಗಿದೆ. ಇವೆಲ್ಲ ಕಾಡಿಗೆ ಹೋಗಲು ಪ್ರತ್ಯೇಕ ಕಾರಣಗಳಿದ್ದರೂ ಒಟ್ಟಾರೆ ಊರಿನಿಂದ 'ಉಚ್ಚಾಟಿತ' ರಾಗುತ್ತಾರೆ ಎಂಬುದು ಇಲ್ಲಿ ಗಮನೀಯ. ಊರಿನ ರಾಜಪರಂಪರೆಯವರು ಕಾಡಿನ ಋಷಿಪರಂಪರೆಯ ಬಳಿಗೆ ಬಂದರೆಂದು ಸಂತೋಷಪಡುವ ರೀತಿಯಲ್ಲಿ ಕಾವ್ಯದ ಘಟನೆಗಳು ನಿರೂಪಿತವಾಗುವುದಿಲ್ಲ. ಇದು ಸಹಜ ನಿರೂಪಣೆಯೂ ಹೌದು. ಯಾಕೆಂದರೆ ಸಂಸ್ಕೃತಿಯ ವಿಕಾಸ ಕ್ರಮದಲ್ಲಿ 'ಕಾಡು' ಮೊದಲು; 'ಊರು' ಅನಂತರದ ಹಂತ. ಕಾಡಿನಿಂದ ಊರಿಗೆ ವಿಕಾಸವಾದ ಸಂಸ್ಕೃತಿಯಲ್ಲಿ ಊರಿನವರು ಮತ್ತೆ ಕಾಡಿಗೆ ಮರಳುವುದೆಂದರೆ ಅದು ಸುಖಕರ ಸ್ಥಿತ್ಯಂತರ ವಲ್ಲ. ಯಾಕೆಂದರೆ 'ಊರು' ಸಂಸ್ಕೃತಿಯ ಒಂದು ಪ್ರಧಾನ ರೂಪಿಕೆ ಯಾಗುತ್ತ ಹೋದಂತೆ. 'ಕಾಡು' ಸಾವಿರಾರು ವರ್ಷಗಳ ಹಿಂದಿನ ಸಂಸ್ಕೃತಿಯ ರೂಪಿಕೆಯಾಯಿತು. ಕಾವ್ಯಗಳಲ್ಲಿರುವ "ಕಾಡು" ಪ್ರಾಚೀನ ಸಂಸ್ಕೃತಿ ರೂಪಿಕೆ ಯಾಗಿ "ಊರು" ಆಧುನಿಕ ಸಂಸ್ಕೃತಿ ರೂಪಿಕೆಯಾಗಿ ಕಾಣಿಸುತ್ತದೆ. ಅಷ್ಟೇ ಅಲ್ಲ, 'ಊರು' ಸಕಲ ಸುಖ ಸೌಕರ್ಯಗಳ ನೆಲೆಯಾದರೆ. "ಕಾಡು" ಶ್ರಮದ ನೆಲೆಯಾಗಿದೆ. ಕಾಡಿನಲ್ಲೇ ಬದುಕುವವರಿಗೆ ಅವರದೇ ಸುಖ ಸಂತೋಷಗಳಿವೆ; ನಿಜ- ಆದರೆ ಊರಿನಲ್ಲಿ ಬದುಕುವವರಿಗೆ ಕಾಡು ಎನ್ನುವುದು ಕಷ್ಟಗಳ ಕೇಂದ್ರ. ಆದ್ದರಿಂದ ಊರಲ್ಲಿದ್ದವರನ್ನು ಕಾಡಿಗೆ ಕಳಿಸುವುದು ಎಂದರೆ ಅದೊಂದು "ಶಿಕ್ಷೆ". ಅಂದರೆ ಸುಖ ಸಂಸ್ಕೃತಿಗೆ ಸೇರಿದ ಶ್ರೀರಾಮ, ಧರ್ಮ

ರಾಜ, ಹರಿಶ್ಚಂದ್ರಾದಿಗಳನ್ನು ಊರು ಬಿಡಿಸಿ ಕಾಡಿಗೆ ಕಳಿಸುವ ಮೂಲಕ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ವಿಕಾಸ ಹೊಂದಿದ ಸಂಸ್ಕೃತಿಯು ಸುಖ ಸಂಪತ್ತಿನ ಕೇಂದ್ರ ಸ್ಥಾನವೆಂದು ಭಾವಿಸಲಾದ "ಊರು"ಗಳನ್ನು ತೊರೆದು ಶತ ಶತಮಾನಗಳ ಹಿಂದಿನ ಸಂಸ್ಕೃತಿ ವಲಯವಾದ "ಕಾಡು"ಗಳಿಗೆ ಬರುವುದು "ಸುಖ ಸಂಸ್ಕೃತಿ"ಯವರಿಗೆ ಶಿಕ್ಷೆಯೇ ಸರಿ. ಇದಕ್ಕಿಂತ ಮುಖ್ಯವಾಗಿ ಕಾವ್ಯಗಳಲ್ಲಿರುವ ದೃಷ್ಟಿಕೋನವೇ ಕಾಡಿಗೆ ಕಳಿಸುವುದನ್ನು ಶಿಕ್ಷೆಯೆಂದು ನಿರೂಪಿಸುತ್ತದೆ. "ಕಾಡು"ಗಳು, ಕಾಡಿನಲ್ಲಿರುವ ಋಷಿಗಳು, ಬೇಡರು, ವಿವಿಧ ಜನಾಂಗಗಳು ತಂತಮ್ಮ ಶ್ರಮದ ಮೂಲಕವೇ ಬದುಕನ್ನು ನಿರ್ವಹಿಸುತ್ತಾರೆ. ಮತ್ತೊಬ್ಬರ ದುಡಿಮೆಯ ಮೂಲಕ ಬದುಕುವ ಪರಾವಲಂಬಿತನ ಇವರಿಗಿಲ್ಲ. ಆದ್ದರಿಂದ "ಸುಖ ಸಂಸ್ಕೃತಿ"ಯಿಂದ "ಶ್ರಮ ಸಂಸ್ಕೃತಿ ತಾಣಗಳಿಗೆ ಬಂದ ಶ್ರೀರಾಮಾದಿ ಎಲ್ಲ ರಾಜಪರಂಪರೆಯವರು ಮತ್ತೆ ತಮ್ಮ ಸಂಸ್ಕೃತಿ ತಾಣವಾದ ಊರಿಗೆ ಮರಳಲು? ದಿನ ಎನಿಸುತ್ತಾರೆ ಎಂಬುದನ್ನು ಗಮನಿಸಬೇಕು.

ನಮ್ಮ ಕಾಡುಗಳು ಇನ್ನೂ ಮನುಷ್ಯ ಜಗತ್ತಿನ ಕತೆಗಳನ್ನು ಹೇಳುತ್ತಿವೆ; ನದಿಯ ದಂಡೆಗಳಲ್ಲಿ ಮಾನವ ಮಿಡಿತದ ಕಾವ್ಯದಲೆಯ ಗುರುತುಗಳು ಕಾಣಿಸುತ್ತವೆ. ಗುಹೆ-ಗುಡಿಸಲುಗಳು ವಿಭಿನ್ನ ರೀತಿಯಲ್ಲಿ ಬುಸುಗುಡುತ್ತಿವೆ. ಇನ್ನೂ "ಮನೆ" ಕಟ್ಟದೆ ಇರುವ ಮನುಷ್ಯನ ಮನಸ್ಸು ಬೇರೆಯದೇ ಲೋಕವನ್ನು ಕಟ್ಟಿಕೊಂಡಿದೆ; ಊರೊಳಗಿದ್ದೂ ಆದಿವಾಸಿಗಳಾದ, ಹಟ್ಟಿಗಳಲ್ಲಿದ್ದೂ ಅಲೆಮಾರಿಗಳಾದ, ಅಸಂಖ್ಯಾತ ಜನರು ಸಂಕಟಗಳಲ್ಲಿ ಉಸಿರಾಡುತ್ತಿದ್ದಾರೆ. ಹೊಸ ಮಾತಿಗಾಗಿ ಮಿಡುಕುತ್ತ. ಮತ್ತೆ ಮೂಕವಾಗುತ್ತ, ಮೌನ-ಮಾತುಗಳ ನಡುವೆ ಮಿಡಿಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಮ್ಮ ಕಾವ್ಯದ ಮನುಷ್ಯ ಊರು ಮತ್ತು ಕಾಡುಗಳಿಂದ ಕಾಡಿಸಿಕೊಳ್ಳುತ್ತ. ಹೊಸ ಸಂವೇದನೆ ಮತ್ತು ಚಿಂತನೆಗಳ ಸಾಧ್ಯತೆಯನ್ನು ದಕ್ಕಿಸಿಕೊಳ್ಳುತ್ತ. ಊರು ಮತ್ತು ಕಾಡುಗಳೆಂಬ "ದ್ವೀಪ"ಗಳನ್ನು ದಾಟಬೇಕಾಗಿದೆ. ★

'ಪ್ರಜಾವಾಣಿ' ಸಾಭಾರ

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ

ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಚರಖಾ : ಬಂಡಾಯದ ಸಂಕೇತ !

ಲೇ : ವಿನೋಬಾ

(ಚರಖಾ ಗಾಂಧೀಜಿಯವರಿಂದ ಪ್ರಚಾರಗೊಂಡ ಒಂದು ಅದ್ಭುತವಾದ ಯಂತ್ರ! ಆದರೆ ಅದು ಕೇವಲ ಒಂದು ಯಂತ್ರವಾಗಿರದೆ ಒಂದು ವಿಶಿಷ್ಟ ವಿಚಾರದ, ಒಂದು ವಿಶಿಷ್ಟ ಜೀವನಶೈಲಿಯ, ಒಂದು ವಿಶಿಷ್ಟ ಸಮಾಜ ರಚನೆಯ ಸಂಕೇತವಾಗಿದೆ. ಈಗಲೂ ಚರಖಾ ಇಂದಿನ ರಾಜಕೀಯ – ಆರ್ಥಿಕ – ಸಾಮಾಜಿಕ ನೀತಿಗಳಿಗೆ ವಿರೋಧವನ್ನು ಸೂಚಿಸುವ ಮತ್ತು ಬಂಡಾಯಕ್ಕಾಗಿ ಕರೆಕೊಡುವ ಸಂಕೇತವಾಗಿದೆ ಎಂದು ಹೇಳಿದರೆ ನೀವು ಒಪ್ಪಲಾರಿರಿ. ಆದರೆ ಚರಖಾದ ಆ ವಿಚಾರ ಕುರಿತು ಕೆಲವು ಚಿಂತನೆಗಳು ಈ ಲೇಖನದಲ್ಲಿವೆ–ಸಂ)

ಇಂದು ಇಡೀ ವಿಶ್ವದಲ್ಲಿ ಯಂತ್ರವಿದ್ಯೆಯ ಬಗ್ಗೆ ಮಾತ್ರ ನಿಷ್ಠೆಯಿದೆ. ವಿಜ್ಞಾನಿಗಳು ಇದನ್ನು ಯಂತ್ರಯುಗವೆಂದೇ ಕರೆದಿದ್ದಾರೆ ಆದರೆ ಹಳೆಕಾಲದ ಜನ ಇದನ್ನು ಕಲಿಯುಗವೆಂದು ಕರೆದಿದ್ದಾರೆ. ಇಂಥ ಹಿನ್ನೆಲೆಯಲ್ಲಿ ನಾವು ಚರಖಾ ಕುರಿತು ಮಾತನ್ನಾಡುತ್ತಿದ್ದೇವೆ. ಈಗ ವಿಶ್ವದಲ್ಲಿ ಯಾವ ವಿಚಾರಸರಣಿ ಇದೆಯೋ ಅದಕ್ಕೆ ವಿರೋಧವಾಗಿ "ಬಂಡಾಯದ ಬಾವುಟ ಚರಖಾ" ಎಂದು ನಾವು ಅರಿತುಕೊಳ್ಳಬೇಕು! ಇದು ಒಂದು ರೀತಿಯಲ್ಲಿ ಬಂಡಾಯವೇ ಆಗಿದೆ. ಬಂಡಾಯದ ಈ ಬಾವುಟ ಕೃಷಿ ಆಗಲು ಸಾಧ್ಯವಿಲ್ಲ. ಬಂಡಾಯದ ಗುರುತು ಚರಖಾ ಮಾತ್ರ ಆಗಲು ಸಾಧ್ಯ. ಯಾವಾಗ ನಾವು ಕೃಷಿಗೆ ಮಹತ್ವದ ಸ್ಥಾನವನ್ನು ಕೊಡಬೇಕೆಂದು ಬಯಸುತ್ತೇವೊ ಆಗ ಅಲ್ಲಿಂದ ಚರಖಾವನ್ನು ಪದಚ್ಯುತಗೊಳಿಸಬೇಕೆಂಬ ಇಚ್ಛೆಯೂ ಇರುತ್ತದೆ. ಇದರಲ್ಲಿ ವಿಚಾರ ದೋಷವಿದೆಯೆಂದು ನಾನು ಹೇಳಬಯಸುತ್ತೇನೆ. ನಾವು ಪ್ರಪಂಚದ ಎದುರಿನಲ್ಲಿ ಬಂಡಾಯದ ಯಾವ ಬಾವುಟವನ್ನು ಹಾರಿಸ ಬಯಸುತ್ತೇವೊ, ಯಾವುದನ್ನು ಕ್ರಾಂತಿಕಾರಿ ಹೆಜ್ಜೆ ಮತ್ತು ವಿಚಾರವೆಂದು ಇಡಲು ಬಯಸುತ್ತೇವೊ ಅದರ ಸಂಕೇತ ಚರಖವೇ ಆಗಿದೆ. ನನ್ನ ದೃಷ್ಟಿಯಲ್ಲಿ ಈ ಚರಖದ ಮಹತ್ವ ಇಷ್ಟೊಂದು ಇದೆ. ಸರ್ವೋದಯ ಸಮಾಜದ ವಿಚಾರದಲ್ಲಿ ಖಾದಿಗೆ ಇರುವಂಥ ಸ್ಥಾನ ಇನ್ನಾವುದೇ ವಿಷಯಕ್ಕೆ ಇಲ್ಲ. ನಾವು ಬೇರೆ ಸಾವಿರ ಮಾತುಗಳನ್ನು ಆಡಬಹುದು. ಆದರೆ ಖಾದಿ ಕೆಲಸದಲ್ಲಿ ನಾವು ಸೋಲನ್ನನುಭವಿಸಿದರೆ ಗಾಂಧೀಜಿಯವರ ವಿಚಾರದ ಬಗ್ಗೆ ಇರುವ ನಮ್ಮ ಹಕ್ಕನ್ನು ಬಿಟ್ಟು ಕೊಟ್ಟಂತಾಗುತ್ತದೆ ಮತ್ತು ಖಾದಿಯ ಕೆಲಸದಲ್ಲಿ ಸೋಲನ್ನೊಪ್ಪಿಕೊಂಡಂತಾಗುತ್ತದೆ. ಆಗ ಇದರ ಅರ್ಥ ಬೇರೆ ಸೇವಾ

ಕೆಲಸವನ್ನು ಬಿಡಬೇಕೆಂದಲ್ಲ. ಅದನ್ನು ನಾವು ಮಾಡಲೇ ಬೇಕು. ಆದರೆ ಆ ಎಲ್ಲ ಸೇವೆಗಳು ನಮ್ಮ ವಿಚಾರ ದೃಷ್ಟಿಯಲ್ಲಿ ಗೌಣವಾಗುತ್ತವೆ. ಈ ಬಗ್ಗೆ ನನಗೆ ಸ್ವಲ್ಪವೂ ಅನುಮಾನವಿಲ್ಲ. ಖಾದಿಯ ಕೆಲಸವನ್ನು ಬಿಟ್ಟೆವೆಂದ ಮಾತ್ರಕ್ಕೆ ನಾವು ಅಸತ್ಯ ಮತ್ತು ಹಿಂಸಾಚರಣೆ ಮಾಡುತ್ತೇವೆಂದು ಹೇಳಲು ಇಷ್ಟಪಡುವುದಿಲ್ಲ. ಒಂದು ವೇಳೆ ನಾವು ಖಾದಿ ಅ-ವ್ಯವಹಾರಿಕವೆಂದು ಒಪ್ಪಿದರೆ ಈಗ ಯಾವ ಸಾಮಾಜಿಕ ಅಹಿಂಸೆಯ ವಿಚಾರವನ್ನು ಕುರಿತು ಮಾತನಾಡುತ್ತೇವೆಯೊ ಆ ರೀತಿಯ ಅಹಿಂಸೆಯ ಆಚರಣೆಗೆ ಅಪಾಯ ಇರುವುದನ್ನು ನಾನು ಕಾಣುತ್ತಿದ್ದೇನೆ. ನಿರುದ್ಯೋಗಿಯಾಗಿರುವ ಯಾರಾದರೂ ಕೂಲಿಗಾಗಿ ನೂಲನ್ನು ತೆಗೆಯಲಿ. ರೈತ ಯಾವ ರೀತಿ ಸ್ವಂತಕ್ಕಾಗಿ ಆಹಾರವನ್ನು ಬೆಳೆಯುತ್ತಾನೊ ಅದೇ ರೀತಿ ಬಟ್ಟೆಯನ್ನೂ ತಯಾರಿಸಿಕೊಳ್ಳಬೇಕೆಂಬ ವಿಶ್ವಾಸ ರೈತನಲ್ಲಿರದ ಪಕ್ಷದಲ್ಲಿ ಈ ಕ್ರಿಯೆ ಗಾಂಧೀಜಿಯವರ ದೃಷ್ಟಿಯಿಂದ ಸರಿಯಿದೆಯೆಂದು ಹೇಳಲಾಗುವುದಿಲ್ಲ. ಇರುವ ವಿಚಾರವೇನೆಂದರೆ ಚರಖಾ ಒಂದು ವಿಶಿಷ್ಟ ವಿಚಾರದ ಚಿಹ್ನೆ ಅಂದರೆ ಅಹಿಂಸಾ ವಿಚಾರದ ಅಹಿಂಸೆಯ ಚಿಹ್ನೆ.

ಅರ್ಥಶಾಸ್ತ್ರದ ಪ್ರತೀಕ

ಜಗತ್ತಿನಲ್ಲಿ ಮೂರು ಪ್ರಕಾರದ ಮನುಷ್ಯರಿದ್ದಾರೆ:-

1. ವ್ಯವಸಾಯಗಾರರು;
2. ಬೇರೆ ಪ್ರಕಾರದ ಉದ್ಯೋಗ ಮಾಡುವವರು
3. ಏನನ್ನೂ ಕೆಲಸಮಾಡದವರು.
   ಉದಾ: ವೃದ್ಧರು. ರೋಗಿಗಳು ಮಕ್ಕಳು, ನಿರುದ್ಯೋಗಿಗಳು ಇತ್ಯಾದಿ.

ನಿಜವಾದ ಅರ್ಥಶಾಸ್ತ್ರದ ನಿಯಮದ ಮೇರೆಗೆ ಈ ಮೂರೂ ವರ್ಗದಲ್ಲಿ ಪ್ರಾಮಾಣಿಕರಾಗಿರುವ ಎಲ್ಲ ಜನರಿಗೆ ಹೊಟ್ಟೆ ತುಂಬಾ ಅನ್ನ ಮತ್ತು ನೆರಳಿನ ಅನುಕೂಲತೆಯನ್ನು ಒದಗಿಸಿ ಕೊಡಬೇಕು. ಪ್ರತಿ ಕುಟುಂಬ ಕೂಡ ಈ ತತ್ವದ ಮೇಲೆಯೇ ನಡೆಯುತ್ತದೆ. ಯಾವ ರೀತಿ ಕುಟುಂಬದಲ್ಲಿ ನಡೆಯುತ್ತದೋ ಅದೇ ರೀತಿ ಇಡೀ ರಾಷ್ಟ್ರದಲ್ಲಿಯೂ ನಡೆಯಬೇಕು. ಇದರ ಹೆಸರೇ "ರಾಷ್ಟ್ರೀಯ ಅರ್ಥಶಾಸ್ತ್ರ"-

ಯಾವ ದೇಶದಲ್ಲಿ ಕೇವಲ ವ್ಯವಸಾಯ ಮಾತ್ರ ನಡೆಯುತ್ತದೋ ಆ ದೇಶ ದುರ್ಬಲವಾದ ದೇಶವೆಂದು ತಿಳಿಯಲಾಗುತ್ತದೆ. ಹಿಂದೂಸ್ತಾನದಲ್ಲಂತೂ ೧೦೦ ಕ್ಕೆ ೭೫ಕ್ಕೂ ಹೆಚ್ಚು ಜನ ವ್ಯವಸಾಯದ ಮೇಲೆ ಅವಲಂಬಿತರಾಗಿದ್ದಾರೆ. ಇಲ್ಲಿಯ ಭೂಮಿಯ ಮೇಲೆ ಅತ್ಯಂತ ಕಡಿಮೆಯೆಂದರೂ ೧೦,೦೦೦

ವರ್ಷಗಳಿಂದ ವ್ಯವಸಾಯ ನಡೆಯುತ್ತಿದೆ. ಅಮೇರಿಕಾ ಭಾರತಕ್ಕಿಂತ ಮೂರರಷ್ಟು ದೊಡ್ಡ ದೇಶವಾಗಿದೆ. ಆದರೆ ಅಲ್ಲಿಯ ಜನಸಂಖ್ಯೆಯ ಪ್ರಮಾಣ ಬಹಳ ಕಡಿಮೆಯಿದೆ ಮತ್ತು ಅಲ್ಲಿಯ ಭೂಮಿಯ ಮೇಲಿನ ವ್ಯವಸಾಯ ಕೇವಲ ಮೂನ್ನೂರು-ನಾಲ್ಕುನೂರು ವರ್ಷಗಳಿಂದ ಮಾತ್ರ ಆಗುತ್ತಿದೆ. ಆದ್ದರಿಂದ ಅಲ್ಲಿಯ ಭೂಮಿ ಫಲವತ್ತಾಗಿದೆ ಮತ್ತು ಆ ದೇಶ ಸಮೃದ್ಧವಾಗಿದೆ. ಆದರೆ ನಮ್ಮ ದೇಶದ ಸ್ಥಿತಿ ಮೇಲೆ ತಿಳಿಸಲಾದ ರೀತಿಯಲ್ಲಿರುವಾಗ ನಮ್ಮ ರೈತರಿಗೆ ಇನ್ನೂ ಹೆಚ್ಚು ಉದ್ಯೋಗ ಕೊಟ್ಟಲ್ಲಿ ಮಾತ್ರ ಅವರು ಬದುಕಬಲ್ಲರು. ಹಿಂದೂಸ್ತಾನದ ಪ್ರಮುಖ ಶಕ್ತಿ ಕೈ. ಜನರಿಗೆ ಇರುವ ಎರಡು ಕೈಗಳ ಜೊತೆಗೆ ಇನ್ನೆರಡು ಕೈಗಳು ದೊರೆತಲ್ಲಿ ಅಂದರೆ ಕೃಷಿ ಮತ್ತು ಚರಖಾ ದೊರೆತಲ್ಲಿ ನಾಲ್ಕು ಕೈಗಳಾಗುವುವು. ಆಗ ರೈತರು ಚತುರ್ಭುಜರಾಗುವರು. ಇಂಥ ಅನಂತ ಶಕ್ತಿ ಹಿಂದೂಸ್ತಾನದಲ್ಲಿದೆ. ಈಗ ಒಂದು ವೇಳೆ ಕೈ ಶಕ್ತಿಗೆ ಉದ್ಯೋಗವಿಲ್ಲದಂತಾಗಿ ಮತ್ತು "ಯಂತ್ರ – ತಂತ್ರದ" ಜಪಮಾತ್ರ ನಡೆದರೆ ಅದರಿಂದ ಯಾವ ಕೆಲಸವೂ ಸಿದ್ಧಿಸುವುದಿಲ್ಲ. ಆದರೆ ಕೈಗೆ ಚರಖಾ ತೆಗೆದುಕೊಂಡು ಬಟ್ಟೆಯನ್ನು ಮಾಡುತ್ತಾ ಹೋದರೆ ಆ ಕೈಗಳಿಗೆ ಕ್ರಿಯಾಶಕ್ತಿ ಕೂಡ ಬರುವುದು.

ಹಿಂದೂಸ್ತಾನದಲ್ಲಿ ಇಂದು ಯಾವ ಪರಿಸ್ಥಿತಿ ಇದೆಯೋ ಅದರಲ್ಲಿ ರೈತರು ನಿರುದ್ಯೋಗಕ್ಕಿಂತಲೂ ಹೆಚ್ಚಾಗಿ ಅರೆ-ಉದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಯಾವ ಗಳಿಗೆಯಲ್ಲಿ ಕೆಲಸಮಾಡಲು ಇಷ್ಟವಾಗುತ್ತದೋ ಆ ಘಳಿಗೆಯಲ್ಲಿ ಕೆಲಸ ಮಾಡಲು ಸಾಧ್ಯವಾಗುವಂಥ ಮತ್ತು ಬೇಡವೆಂದೆನಿಸಿದಾಗ ಬಿಡಲು ಸಾಧ್ಯವಾಗುವಂಥ ಉದ್ಯೋಗವನ್ನು ರೈತರಿಗೆ ಕೊಡಬೇಕು. ಈ ರೀತಿಯ ಉದ್ಯೋಗ ರೈತನ ಮನೆಯಲ್ಲಿಯೇ ಇರಬೇಕು. ಹಾಗಿಲ್ಲವಾದರೆ ಭಾರತದ ರೈತ ಉಳಿಯಲು ಸಾಧ್ಯವಿಲ್ಲ ಮತ್ತು ಹಿಂದೂಸ್ತಾನದ ರಕ್ಷಣೆಯೂ ಕೂಡ ಸಾಧ್ಯವಿಲ್ಲ. ಬಡವರಿಗೆ ಕೂಡಲೆ ಕೆಲಸ ಕೊಡಬೇಕೆಂಬ ಮಾತನ್ನೇನೊ ಸರ್ಕಾರ ಆಡುತ್ತದೆ. ಆದರೆ ಅವರಿಗೆ ನೀವು ಯಾವ ಕೆಲಸವನ್ನು ಕೊಡಬಲ್ಲಿರಿ ಎಂದು ನಾನು ಕೇಳುತ್ತೇನೆ. ರಸ್ತೆ ಮಾಡುವುದು, ಕಾಲುವೆ ತೋಡುವುದು ಇತ್ಯಾದಿ ಕೆಲಸಗಳು ಪ್ರತಿದಿನದ ಕೆಲಸಗಳಲ್ಲ. ಆದ್ದರಿಂದ ಗ್ರಾಮೋದ್ಯೋಗಗಳಿಗೆ ಪರಿಪೂರ್ಣವಾದ ಪ್ರೋತ್ಸಾಹವನ್ನು ಕೊಡದೇ ಬೇರೆ ದಾರಿಯಿಲ್ಲ. ಚರಖಾದ ಹಿಂದೆ ಒಂದು ಹೊಸ ಅರ್ಥವ್ಯವಸ್ಥೆಯ ದೃಷ್ಟಿಯಿದೆ. ಯಾರಿಗೆ ಅತ್ಯಧಿಕವಾಗಿ ಸಹಾಯದ ಅಗತ್ಯವಿದೆಯೋ ಅಂಥವರಿಗೆ ಮೊಟ್ಟಮೊದಲು ಯಾವ ರೀತಿ ಸಹಾಯವನ್ನು ಮುಟ್ಟಿಸಬೇಕು ಈ ಕುರಿತಾದ ಉಪಾಯವನ್ನು ಗಾಂಧೀಜಿ ಹುಡುಕುತ್ತಿದ್ದರು. ಆ ಪರಿಣಾಮವಾಗಿಯೇ ಚರಖಾ ದೊರೆಯಿತು. ಚರಖಾ ಮುಂದಿಕೆಯ ಸಾಧನವೆಂದು ಜನ ಅನ್ನುತ್ತಾರೆ. ಯಾವ ದಿನ ಚರಖಾದ ಬಗ್ಗೆ

ಈ ಮಾತು ಹುಟ್ಟಿತೊ ಆ ದಿನ ನನ್ನ ಅಂತರಾತ್ಮಕ್ಕೆ ಬಹಳ ಶಾಂತಿಸಿಕ್ಕಿತು. ಗಂಡಸರು ಜೊತೆಗಿದ್ದರೂ ಮುದುಕಿಯು ಜೊತೆಗೆ ಏಕರೂಪವಾಗುವ ಒಂದು ಸಾಧನ ನನಗೆ ಸಿಕ್ಕಿತಲ್ಲ ಎಂದು ನಾನು ಯೋಚಿಸಿದೆ. ಯಾವುದೇ ಪ್ರಕಾರದ ಆಧಾರವಿಲ್ಲದ ಓರ್ವವೃದ್ಧೆ ಯಾವ ಸಾಧನದ ಆಧಾರವನ್ನು ಹೊಂದುತ್ತಾಳೊ ಅಂಥ ಆಧಾರಕ್ಕೆ ನಾನು ಚಾಲನೆ ಕೊಡ ಬಯಸುತ್ತೇನೆ. ಇದರಿಂದಾಗಿ ಆ ವೃದ್ಧೆಯ ಹೃದಯದೊಂದಿಗೆ ನಾನು ಏಕರೂಪವಾಗಿಬಿಡುತ್ತೇನೆ.

ನೂಲುವ ಕೆಲಸ ಅತ್ಯಂತ ಹಗುರಾದ ಮತ್ತು ಸರಳವಾದ ಕೆಲಸವಾಗಿದೆ. ಕಿಶೋರ್‌ಲಾಲ್ ಮಶ್ರೂವಾಲ್‌ರಂಥ ಕಾಯಿಲೆಯ ಮನುಷ್ಯನು ಕೂಡ ಚರಖಾದ ಮೂಲಕ ದೇಶಕ್ಕಾಗಿ ಸ್ವಲ್ಪ ಸ್ವಲ್ಪ ಉತ್ಪಾದನೆಯನ್ನು ಮಾಡುತ್ತಲೇ ಇದ್ದರು. ಮಶ್ರೂವಾಲರವರಿಗೆ ಪ್ರತಿ ದಿನ ಸಂಜೆಯ ಹೊತ್ತಿಗೆ ತಾನು ಸತ್ತು ಹೋಗುತ್ತೇನೆಂದು ಅನಿಸುತ್ತಿತ್ತು. ಆದರೂ ಕೂಡ ಇದೇ ರೀತಿಯ ಅನುಭವದಲ್ಲಿ ಅವರು ೨೦-೨೫ವರ್ಷ ಕಳೆದರು. ಅವರು ತಮಗೆ ಬೇಕಾಗಿದ್ದಷ್ಟು ಬಟ್ಟೆಗಾಗಿ ದಾರ ತೆಗೆಯುತ್ತಿದ್ದರೆಂಬುದು ನನ್ನ ತಿಳುವಳಿಕೆ. ಅತ್ಯಂತ ದುರ್ಬಲವಾಗಿರುವಂಥ ವ್ಯಕ್ತಿಗೂಕೂಡ ಚರಖಾ ಉತ್ಪಾದನೆಯ ಸಾಧನವಾಗಬಲ್ಲದು. ಇದು ಚರಖಾದ ವಿಶೇಷ. ಕಾಯಿಲೆಯುಳ್ಳವನೂ ಅದನ್ನು ನಡೆಸಬಲ್ಲ. ಪ್ರವಾಸ ಕಾಲದಲ್ಲಿಯೂ ಅದನ್ನು ನಡೆಸಲು ಸಾಧ್ಯ. ರೈತ ಇನ್ನೇನ ಹೊಲಕ್ಕೆ ಹೊರಡಬೇಕೆಂದು ಆಲೋಚಿಸುತ್ತಿದ್ದಾಗಲೇ ಮಳೆ ಪ್ರಾರಂಭವಾಗಿ ಅವನು ೧೫ ನಿಮಿಷ ಕಾಯುತ್ತಾನೆ. ಈ ೧೫ ನಿಮಿಷದಲ್ಲಿಯೂ ಕೂಡ ಅವನು ಚರಖಾ ನಡೆಸುತ್ತಾನೆ. ಸಂಪತ್ತಿನ ಉತ್ಪಾದನೆಯಲ್ಲಿ ಪ್ರತಿಯೊಬ್ಬರ ಭಾಗವೂ ಇರತಕ್ಕದು. ಆಗಲೇ ಹಿಂದುಸ್ತಾನ ಉಳಿದೀತು. "ಸಂಪತ್ತಿನ ಹಂಚಿಕೆಯನ್ನು ನಾವು ಮಾಡಬಹುದು. ಆದರೆ ಅದನ್ನು ಹೆಚ್ಚಿಸುವ ಹೊರೆ ಕೆಲವೇ ಜನರ ಮೇಲೆ ಬೀಳುತ್ತದೆ" ಎಂದು ರವೀಂದ್ರನಾಥ್‌ಟಾಗೋರ್ ಹೇಳಿದ್ದಾರೆ. ಸಂಪತ್ತಿನ ವೃದ್ಧಿಯ ಸರಳವಾದ ರೀತಿಯನ್ನು ಗಾಂಧೀಜಿ ತೋರಿಸಿದ್ದಾರೆ: ಚರಖಾ ಮತ್ತು ಗ್ರಾಮೋದ್ಯೋಗ. ನಿಮ್ಮ ಮನೆಯಲ್ಲಿ ನೀರಿಗಾಗಿ ನಲ್ಲಿ ಇವೆ. ಆದರೆ ಮಳೆಯ ಒಂದು ಹನಿಯ ಯೋಗ್ಯತೆಯೂ ಅದಕ್ಕಿಲ್ಲ. ಮಳೆಯ ನೀರಿನ ಹನಿ ಚಿಕ್ಕದಾಗಿರಬಹುದು. ಆದರೆ ಅದು ಎಲ್ಲ ಕಡೆಗೂ ಬೀಳುತ್ತದೆ. ಆದ್ದರಿಂದ ಅದರ ಯೋಗ್ಯತೆ ಬಹಳ ದೊಡ್ಡದಾಗಿದೆ. ಅದೇ ರೀತಿಯ ಗುಣ ಚರಖಾದಲ್ಲಿಯೂ ಇದೆ. ಚರಖಾ ಅಲ್ಪ ಸ್ವಲ್ಪ ಸಂಪತ್ತನ್ನು ಎಲ್ಲ ಮನೆಯವರಿಗೂ ಕೊಡುತ್ತದೆ. ಅರ್ಥಶಾಸ್ತ್ರದ ಅತ್ಯಂತ ದೊಡ್ಡ ಸಿದ್ಧಾಂತ "ಸಂಪತ್ತಿನ ಹಂಚಿಕೆ ಹೇಗೆ ಆಗಬೇಕು" ಎಂಬುದೇ. ಸಂಪತ್ತಿನ ಹಂಚಿಕೆ ಎಷ್ಟೊಂದು ಆಗುವುದೊ ಅಷ್ಟು ಸಮಾಜದ ಹಿತವಾಗುವುದು. ಯಾರದೇ ಒಬ್ಬರ ಬಳಿ ಶ್ರೀಮಂತಿಕೆ ಇದರೆ ಅದು ಹಂಚಿಹೋಗಬೇಕೆಂಬ ವಿಚಾರ ಕುತು

ಖಾದಿಯ ಮೂಲಕವೇ ಸಿದ್ಧಿತವಾಗುತ್ತದೆ. ಗಿರಣಿಯಲ್ಲಿ ತೊಡಗಿಸಲಾಗಿರುವ ಹಣ ಗಿರಣಿ ಮಾಲೀಕನಿಗೆ ಮತ್ತು ಅವನ ಪಾಲುದಾರರ ಜೇಬಿಗೆ ಹೋಗುತ್ತದೆ. ಆದರೆ ಖಾದಿಯ ಮೂಲಕ ಹಣದ ವಿತರಣೆಯಾಗುತ್ತದೆ. ಕಣ ಅಥವಾ ಹುಲ್ಲಿನಷ್ಟೇ ಪ್ರಮಾಣದ್ದಾಗಿರಲು ಅದು ಎಲ್ಲರದೂ ಆಗುತ್ತದೆ. ಯಾವ ರೀತಿ ಮಳೆಯು ಹನಿಯದಾಗಿರುತ್ತದೆಯೊ ಅದೇ ಖಾದಿಯಲ್ಲೂ ಇದೆ.

ಸಮಾಜದಲ್ಲಿ ಖಾದಿಯೆಂಬುದು ಶ್ರಮದ ಹಾಗೂ ಪ್ರತಿಷ್ಠೆಯ ಪ್ರತೀಕವಾಗಿದೆ. ಹಳ್ಳಿಗಳ ಜೀವನದಲ್ಲಿ ಚೈತನ್ಯವನ್ನು ಮತ್ತು ಜೀವನಕ್ಕಾಗಿ ಉತ್ಸಾಹವನ್ನು ಹೇಗೆ ಉಂಟುಮಾಡಬೇಕೆಂಬುದೇ ಪ್ರಶ್ನೆಯಾಗಿದೆ. ಇಂದು ಶ್ರಮವನ್ನು ವಿವಶತೆಯ ಮನೋಭಾವದಿಂದ ಮಾಡಲಾಗುತ್ತದೆ. ಆದ್ದರಿಂದ ಶ್ರಮದಿಂದ ಬಿಡುಗಡೆ ಹೊಂದಬೇಕೆಂಬ ಮನೋವೃತ್ತಿ ಎಲ್ಲೆಲ್ಲೂ ನೋಡಲು ಸಿಗುತ್ತದೆ. ಎಲ್ಲಿಯವರೆಗೆ ಶ್ರಮಕ್ಕೆ ನೈತಿಕ, ಸಾಮಾಜಿಕ ಮತ್ತು ಆರ್ಥಿಕ ಈ ಮೂರೂ ಪ್ರಕಾರದ ಗೌರವವನ್ನು ಕೊಡಲಾಗುವುದಿಲ್ಲವೊ ಅಲ್ಲಿಯವರೆಗೆ ಈ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಲು ಸಾಧ್ಯವಿಲ್ಲ ಮತ್ತು ಹಳ್ಳಿಗಳ ಜೀವನವು ಕೂಡ ಸುಂದರವೂ, ಬದುಕಲು ಯೋಗ್ಯವೂ ಆಗಲು ಸಾಧ್ಯವಿಲ್ಲ.

ಚರಖಾ ಒಂದು ಶ್ರಮನಿಷ್ಠೆಯ ಸಂಕೇತವಾಗಿದೆ. ಪ್ರಪಂಚದಲ್ಲಿ ಶೋಷಣೆ ಯಾವ ಕಾರಣಕ್ಕಾಗಿ ನಡೆಯುತ್ತದೆ? ಇದಕ್ಕೆ ಕಾರಣವೇನೆಂದರೆ ಕೆಲವು ಜನರು ಶ್ರಮಮಾಡುತ್ತಾರೆ ಮತ್ತು ಬೇರೆ ಹಲವರು ಅದರ ಲಾಭ ಪಡೆಯಲು "ಇಷ್ಟಪಡುತ್ತಾರೆ. 'ಎಲ್ಲ ಜನರೂ ಶ್ರಮ ಮಾಡಲಿ; ಶ್ರಮನಿಷ್ಠೆ ಉಂಟಾಗಲಿ: ಶೋಷಣೆ ನಿಂತುಹೋಗಲಿ' ಮತ್ತು ಉತ್ಪಾದನೆಯೂ ಕೂಡ ಹೆಚ್ಚಾಗಲಿ" ಎಂದು ಗಾಂಧೀಜಿ ಚರಖಾದಂಥ ಒಂದು ಸಣ್ಣ ಸಂಗತಿಯನ್ನು ದೇಶದ ಮುಂದೆ ಇಟ್ಟರು.

ಚರಖಾ ಪರಿಶ್ರಮಕ್ಕೆ ಅವಿರೋಧವಲ್ಲದರ ಪ್ರತೀಕವಾಗಿದೆ. ಪ್ರಪಂಚದಲ್ಲಿ ಯಾವುದೇ ವಸ್ತುವು ಪರಿಶ್ರಮವಿಲ್ಲದೆ ನಿರ್ಮಾಣವಾಗಲಾರದೆಂಬ ಸಂಗತಿ ನಮಗೆಲ್ಲ ಗೊತ್ತಿದೆ. ನಮ್ಮಲ್ಲಿಯ ಪ್ರತಿಯೊಬ್ಬರೂ ಪ್ರಪಂಚದ ಪದಾರ್ಥಗಳನ್ನು ಉಪಯೋಗಿಸುತ್ತೇವೆ. ಆದರೆ ಅವುಗಳನ್ನು ನಾವು ನಿರ್ಮಿಸುವುದಿಲ್ಲ. ಚರಖಾ ನಮಗೆ ನಿರ್ಮಾಣದ ಪ್ರೇರಣೆಯನ್ನು ಕೊಡುತ್ತದೆ. ಪ್ರತಿಯೊಬ್ಬ ಮನುಷ್ಯ ಬಟ್ಟೆಯನ್ನು ಉಡುತ್ತಾನೆ. ಒಂದು ವೇಳೆ ಅವನು ತನ್ನ ಬಟ್ಟೆಗಾಗಿ ಅವಶ್ಯಕವಾದ ದಾರವನ್ನು ನೂತರೆ ತನ್ಮೂಲಕ ಅವನು ಇಡೀ ಜನತೆಯ ಜೊತೆಗೆ ತನ್ನ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ. ಪ್ರಪಂಚದಲ್ಲಿ ವಸ್ತುಗಳನ್ನು ತಯಾರಿಸಲು ಅನೇಕ ಯಂತ್ರಗಳನ್ನು ರಚಿಸಲಾಗಿದೆ. ಆದರೆ ಅವುಗಳಿಂದಾಗಿ ಪ್ರಪಂಚದಲ್ಲಿ ವರ್ಗಭೇದ ನಿರ್ಮಾಣವಾಗುತ್ತದೆ. ವರ್ಗ - ಕಲಹಗಳು

ಹೆಚ್ಚಾಗುತ್ತವೆ ಮತ್ತು ಭೋಗವಾಸನೆಗೆ ಪೋಷಣೆ ಸಿಗುತ್ತದೆ.

ಯಾರೂ ಕೂಡ ತನ್ನ ಭಾರವನ್ನು ಎರಡನೆಯವನ ಮೇಲೆ ಹಾಕ ಬಾರದು. ಎರಡನೆಯವರ ಹೆಗಲ ಮೇಲೆ ಕುಳಿತುಕೊಳ್ಳಬಾರದು. ಈಗ ಯಾರು ಕುಳಿತು ಕೊಂಡಿದ್ದಾರೊ ಅವರು ಅಲ್ಲಿಂದ ಇಳಿದು ಬರಬೇಕು. ಅವರು ಅಲ್ಲಿಂದ ಇಳಿದು ಬಂದರೆ ಪ್ರಪಂಚದ ದೊಡ್ಡ ಸೇವೆ ಆಗುತ್ತದೆ. ಚರಖಾ ನಮಗೆ ಇದನ್ನೇ ತೋರಿಸುತ್ತದೆ. ನಾವೆಲ್ಲರೂ ಶ್ರಮಿಕರಾಗಬೇಕೆಂಬ ಮಾತನ್ನು ಚರಖಾ ನಮಗೆ ಹೇಳುತ್ತದೆ. ಒಂದು ವೇಳೆ ನಾವು ಶ್ರಮಿಕರಾ ಗದೆ ಇದ್ದಲ್ಲಿ ನಾವು ಕಳ್ಳತನ ಮಾಡುತ್ತೇವೆ. ಹಿಂಸೆ ಮಾಡುತ್ತೇವೆ, ಬೇರೆ ಯವರ ಮೇಲೆ ಭಾರ ಹಾಕುತ್ತೇವೆ.

ಖಾದಿಯಿಂದಾಗಿ ಬಟ್ಟೆಯ ಸಮಸ್ಯೆ ಬಗೆಹರಿಯುತ್ತದೆ. ಈ ಮಾತು ನಮ್ಮ ಗಮನಕ್ಕೆ ಬರುವುದಿಲ್ಲ. ಏಕೆಂದರೆ ನಮ್ಮ ಮೇಲೆ ಪಾಶ್ಚಾತ್ಯ ದೇಶಗಳ ಶಿಕ್ಷಣ ಜಾದೂ ಮಾಡಿದೆ. ನಾವು ರಾಜಕೀಯವಾಗಿ ಸ್ವತಂತ್ರರೇನೊ ಆಗಿದ್ದೇವೆ. ಆದರೆ ಬುದ್ಧಿಯ ಸ್ವಾತಂತ್ರ್ಯ ಬೇರೆಯೇ ರೀತಿಯದಾಗಿದೆ. ಬುದ್ಧಿಸ್ವಾತಂತ್ರ್ಯ ನಮಗೆ ಇನ್ನೂ ದೊರೆತಿಲ್ಲವೆಂಬ ಭಯ ನನಗಿದೆ. ಪಾಶ್ಚಾತ್ಯರು ಅರ್ಥ ಶಾಸ್ತ್ರವನ್ನು ರೂಪಿಸಿದ್ದಾರೆ. ಅವರದೇ ಆದ ಕೆಲವು ನಿಯಮಗಳನ್ನು ಮಾಡಿ ದ್ದಾರೆ. ಈ ನಿಯಮಗಳಲ್ಲಿ ಖಾದಿಗೆ ಸ್ಥಾನವಿಲ್ಲವೇನೋ ಎಂಬ ಭಯನನಗಿದೆ. ಆದರೆ ಪ್ರತಿಯೊಂದು ದೇಶಕ್ಕೂ ತನ್ನದೇ ಪರಿಸ್ಥಿತಿಗೆ ಅನುಸಾರವಾದ ಬೇರೆ ಬೇರೆ ಅರ್ಥಶಾಸ್ತ್ರವಿರಲು ಸಾಧ್ಯವಿದೆ. ಒಂದು ವೇಳೆ ನಾವು ಚರಖಾ ವನ್ನು ನಮ್ಮದಾಗಿಸಿಕೊಂಡರೆ ಮತ್ತು ನಮಗಿರುವ ಚರಖಾದ ಅನುಭವವನ್ನು ಉಪಯೋಗಿಸಿಕೊಂಡರೆ ಎರಡು ವರ್ಷಗಳೊಳಗಾಗಿ ಹಿಂದೂಸ್ಥಾನದ ಹಳ್ಳಿಗಳ ಬಟ್ಟೆಯ ಅವಶ್ಯಕತೆಯನ್ನು ಸುಲಭವಾಗಿ ಪೂರ್ಣಗೊಳಿಸಬಹುದೆಂಬುದು ನನ್ನ ಖಚಿತವಾದ ಅಭಿಪ್ರಾಯ.

ಉಪಾಸನಾ ಪ್ರತೀಕ

ದೇಶದ ಪ್ರತಿಯೊಬ್ಬ ಬಾಲಕನೂ ಮಾಡಬಹುದಾದಂಥ ಒಂದು ರಾಷ್ಟ್ರೀಯ ಉಪಾಸನೆ ಇರಬೇಕೆಂಬುದಾಗಿ ಗಾಂಧೀಜಿ ಹೇಳಿದ್ದರು. ಧಾರ್ಮಿಕ ಮತ್ತು ಪಂಥೀಯ ಉಪಾಸನೆಗಳೇನೋ ಇವೆ. ಆದರೆ ಅವುಗಳಿಂದ ಭೇದ ಹುಟ್ಟು ತ್ತದೆ. ದೇಶದಲ್ಲಿ ಐಕ್ಯತೆಯನ್ನು ಉಂಟುಮಾಡುವ ಉಪಾಸನೆ ಇರಬೇಕು. ದೇಶಕ್ಕಾಗಿ ನಾನು ಏನನ್ನಾದರೂ ಮಾಡುತ್ತಿದ್ದೇನೆ ಎಂದು ಎನಿಸಬೇಕು. ಈ ವಿಚಾರವನ್ನೇ ತೆಗೆದುಕೊಂಡು ಚರಖಾದ ವಿಕಾಸವಾಗಿದೆ.

ನಾನು ಮರಾಠಿಯಲ್ಲಿ ಚಿಕ್ಕದಾದ ಒಂದು ಕವಿತೆಯನ್ನು ರಚಿಸಿದ್ದೆ. ಅದರ ಬಹಳಷ್ಟು ಭಾಗ ಹಿಂದಿ ಭಾಷೆಯಂತೆಯೇ ಇದೆ. ಉಪಾಸನೆಯ ಲಕ್ಷಣ ಏನು ಎಂಬುದನ್ನು ತಿಳಿಸುವುದೇ ಆ ಕವಿತೆಯ ಉದ್ದೇಶವಾಗಿತ್ತು. ಯಾವ ರೀತಿ ಸೂರ್ಯನಾರಾಯಣನ ಉಪಾಸನೆಯಲ್ಲಿ ಉತ್ಥಾನದ ಶಕ್ತಿ ತುಂಬಿದೆಯೋ ಮತ್ತು ಎಲ್ಲರಿಗೂ ಹೇಗೆ ಲಭ್ಯವಿದೆಯೋ ಮತ್ತು ಕಲ್ಯಾಣ ಕಾರಿಯೂ, ಹಾಗೂ ಶಕ್ತಿಶಾಲಿಯೂ ಆಗಿದೆಯೋ ಅದೇ ರೀತಿ ಈ ಉಪಾಸನೆ ಇರಬೇಕೆಂದು ನಾನು ಆ ಕವಿತೆಯಲ್ಲಿ ತಿಳಿಸಿದ್ದೆ. ಸಾಮೂಹಿಕ ಶರೀರ ಶ್ರಮದಂಥ ಕಾರ್ಯಕ್ರಮದಲ್ಲಿ ಯಾವ ಆನಂದ ನನಗೆ ದೊರೆಯುವುದೋ ಅಂಥದು ಬೇರ ಯಾವುದರಿಂದಲೂ ನನಗೆ ದೊರೆಯುವುದಿಲ್ಲ ಯಾವುದು ಇನ್ನೊಬ್ಬರ ಹಿತಕ್ಕೆ ವಿರೋಧವಿಲ್ಲವೋ ಮತ್ತು ಯಾವುದು ಎಲ್ಲರಿಗೂ ಸುಲಭ ಸಾಧ್ಯವಿದೆಯೋ ಅಂಥ ಶ್ರಮ ಯಜ್ಞವೇ ಆಗುತ್ತದೆ ಮತ್ತು ಚರಖಾ ಅಂಥ ಯಜ್ಞದ ಗುರುತಾಗಿದೆ.

ಉಪಾಸನೆಯಲ್ಲಿ ಸಮರ್ಪಣೆಯ ತತ್ವವಿರುತ್ತದೆ. ಯಾವ ಪರಮೇಶ್ವರನು ಇಷ್ಟೊಂದು ರಚನೆಯನ್ನು ಮಾಡಿದ ಮತ್ತು ಇಡೀ ಸೃಷ್ಟಿಯನ್ನೂ ಸಮಾಜವನ್ನೂ ರಚಿಸಿದ ಅಂಥವನಿಗೆ ಏನನ್ನು ಸಮರ್ಪಿಸಬೇಕು? ವೇದಗಳು ಈ ರೀತಿ ಹೇಳಿವೆ:–?

ಚಕ್ರಂ ವಿಶ್ವಾನಿ ಚಕ್ರಯೇ

ಯಾವನೂ ವಿಶ್ವದ ರಚನೆಯನ್ನು ಮಾಡಿದ್ದಾನೋ ಅವನಿಗೆ ಉತ್ಪಾದನೆಯನ್ನು ಸಮರ್ಪಿಸಬೇಕಾಗುತ್ತದೆ. ಅವನಿಗೆ ನಾವು ಏನನ್ನಾದರು ಸಮರ್ಪಿಸಬೇಕೆಂದು ಬಯಸಿದ್ದಲ್ಲಿ ಪರಿಶ್ರಮದಿಂದ ತಯಾರಿಸಿದ ಪದಾರ್ಥವನ್ನೇ ಸಮರ್ಪಿಸಬೇಕು.

ಎಲ್ಲರೂ ಒಂದೇ ಸ್ಥಳಕ್ಕೆ ಬಂದು ದೇಶಕ್ಕಾಗಿ ಉಪಾಸನೆ ಮಾಡಬೇಕೆಂದು ಗಾಂಧೀಜಿ ಹೇಳಿದರು. ಅದು ನೂಲುಗಾರಿಕೆ, "ನಾವೆಲ್ಲರೂ ಒಂದೇ ಎಂಬ ಮಾತಿನ ಪ್ರತೀಕವಾಗಿ ದಿನಾಲೂ ನೂಲು ತೆಗೆಯುವ ನಿಯಮವನ್ನು ಹಾಕಿಕೊಳ್ಳಬೇಕು. ಈಶ್ವರನ ಭಕ್ತಿಗಾಗಿ, ಪ್ರೇಮಶಕ್ತಿಯ ನಿರ್ಮಾಣಕ್ಕಾಗಿ ದಿನಾಲೂ ನೂಲು ತೆಗೆಯುವ ಸಂಕಲ್ಪ ಮಾಡಬೇಕು ಎಂಬುದು ಗಾಂಧೀಜಿಯವರ ಹೇಳಿಕೆ" ಯಾಗಿತ್ತು. ನೂಲು ತೆಗೆಯುವ ಯಜ್ಞ ಸಭ್ಯತೆಯ, ಸಂಸ್ಕಾರಿಕೆಯ ಮತ್ತು ಸ್ವಾತಂತ್ರ್ಯದ ಪೋಷಣೆಯ ಕಾಮಧೇನು ಎಂದು ನಾನು ತಿಳಿದಿದ್ದೇನೆ. ಚರಖಾದ

ಇದರ ಹಿಂದೆ ಉಪಾಸನೆಯ ಮತ್ತು ಎಲ್ಲರೊಂದಿಗೆ ಏಕಾತ್ಮತೆಯನ್ನು ಸಾಧಿಸುವ ಒಂದು ಭಾವನೆ ಇದೆ.

ಖಾದಿಯ ರೂಪ

ಖಾದಿ ಎಂದರೆ ಬಡವರೊಂದಿಗೆ ಏಕರೂಪತೆ, ಮಾನವತೆಯ ದೀಕ್ಷೆ, ಆತ್ಮನಿಷ್ಠೆಯ ಚಿಹ್ನೆ. ಇದು ಯಾವುದೇ ಸಂಪ್ರದಾಯವಲ್ಲ. ಬದಲಿಗೆ ಮಾನವತೆಯ ಹೃದಯವಾಗಿದೆ. ಆದ್ದರಿಂದ ಹಳೆಯ ಕಾಲದ ಸಾಂಪ್ರದಾಯಿಕ ಚಿಹ್ನೆಗಳಿಂದ ಯಾವ ಪ್ರಕಾರದ ದುಷ್ಪರಿಣಾಮಗಳು ಉಂಟಾದವೊ ಅಂಥ ದುಷ್ಪರಿಣಾಮಗಳು ಖಾದಿಯಿಂದ ಉಂಟಾಗುವ ಭಯವಿಲ್ಲ. ಅಷ್ಟೇ ಅಲ್ಲ, ಜೀವನದಲ್ಲಿ ಪರಿವರ್ತನೆ ಮಾಡುವ ಸಾಮರ್ಥ್ಯವಂತೂ ಅದರಲ್ಲಿ ಅದ್ಭುತವಾಗಿದೆ.

ಓರ್ವ ಮಹನಿಯರು ಬಂದಿದ್ದರು. ನಾನು ಅವರಿಗೆ ಒಂದು ಲಾಕ್ಷಣಿಕ ಪ್ರಶ್ನೆಯನ್ನು ಕೇಳಿದೆ. "ದೇಶಕ್ಕೆ ಸಂಕಟ ಬಂದಿದೆ, ಹಾಗಿರುವಾಗಿ ಸರ್ಕಾರಕ್ಕೆ ಖಾದಿ ಏನನ್ನು ಕೊಡುತ್ತಿದೆ?" ಅದರ ಅರ್ಥವಿಷ್ಟೇ: ಸರ್ಕಾರದ ವಿಸರ್ಜನೆ ಮಾಡುವುದರಲ್ಲಿ ಖಾದಿ ಯಾವ ಸಹಾಯ ಮಾಡಬಲ್ಲದು? ಅಹಿಂಸೆಯ ವಿಚಾರದಲ್ಲಿ ಸರ್ಕಾರಕ್ಕೆ ನಾವು ಬಹಳಷ್ಟು ಸಹಾಯ ಮಾಡಬಹುದೆಂದರೆ ಅದರವಿಸರ್ಜನೆ ತೀವ್ರ ಗೊಳ್ಳುವಂತೆ ಮಾಡಬೇಕು. ಅಹಿಂಸಾ ವ್ಯವಸ್ಥೆಯಲ್ಲಿ ಕೇಂದ್ರಿತವಾದ ಶಾಸನದ ಕ್ಷಯವಾಗಬೇಕು. ಇದು ಹೇಗ ಆಗಲು ಸಾಧ್ಯ? ಶಾಸನದ ಒಂದೊಂದೂ ಚಿಂತೆಯೂ, ಒಂದೊಂದು ಕೆಲಸವೂ ಜನತೆಯಿಂದ ಎತ್ತಿಕೊಳ್ಳಲ್ಪಡಬೇಕು. ಆಗ ಅಷ್ಟರ ಮಟ್ಟಿಗೆ ಸರ್ಕಾರದ ಚಿಂತೆ. ಭಾರ ಕಡಿಮೆಯಾಗುತ್ತಾ ಹೋಗುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ ಸರ್ಕಾರದ ಅಧಿಕಾರ ಅಷ್ಟರ ಮಟ್ಟಿಗೆ ಕಡಿಮೆಯಾಗುವುದು,

ಖಾದಿಯ ಬೆಲೆ ಬಹಳ ದೊಡ್ಡದಾಗಿದೆ. ಅದೇನೆಂದರೆ ವಿಶ್ವದಲ್ಲಿ ಅವಿರೋಧವಾದ ಸಮಾಜದ ರಚನೆ. ಪರಸ್ಪರ ಸಹಯೋಗಿ ಮತ್ತು ಅವಿರೋಧಿ ಸಮಾಜ ರಚನೆ. ಅಂಥ ಸಮಾಜದ ರಚನೆಗಾಗಿಯೇ ಈ ಪ್ರಯೋಗವಿದೆ. ಸರ್ಕಾರ ವಿಸರ್ಜನೆಗೊಳ್ಳುವಂತೆಯೇ ನಾವು ಮಾಡಬೇಕಾಗಿದೆ. ಯಾವ ರೀತಿ ಗಿಡದ ಒಂದು ತುಂಡನ್ನು ಕೊಡಲಿಗೆ ಸೇರಿಸುತ್ತೇವೊ ಮತ್ತು ಅದೇ ಕೊಡಲಿಯಿಂದ ಮರವನ್ನು ಕಡಿಯುತ್ತೇವೆಯೊ ಅದೇ ರೀತಿ ಸರ್ಕಾರದಿಂದ ಸಹಾಯತೆಗೆದು ಕೊಂಡು ಸರ್ಕಾರವನ್ನು ಸಮಾಪ್ತಿಗೊಳಿಸಬೇಕಾಗಿದೆ. ಶಾಸನ ಮುಕ್ತವಾದ ಸಮಾಜದ ಆಕಾಂಕ್ಷೆಯೇ ನಮ್ಮ ಕೆಲಸದ ಅಡಿಪಾಯವಾಗಿದೆ. ಸಾಮ್ಯಯೋಗಸಿದ್ಧಿ ಮತ್ತು ಸ್ವರಾಜ್ಯಶಕ್ತಿ ಇವೇ ಖಾದಿಯ ಪರೀಕ್ಷಾ ಮೂಲರೂಪಗಳಾಗಿವೆ. ★

ಅನು: – **ಸುರೇಂದ್ರ ಕೌಲಗಿ**

(ಮೈತ್ರಿ ಸಾಭಾರ)

ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ದೇಶ ಭಾಷೆಗಳ ಸ್ಥಾನ

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್

(ಇದು ೧೯೩೩ರಲ್ಲಿ ಮೈಸೂರ್ ಎಕನಾಮಿಕ್ ಜರ್ನಲ್ ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಆಂಗ್ಲ ಲೇಖನ ಒಂದರ ಅನುವಾದ. ರಾಷ್ಟ್ರದ ಎಲ್ಲ ಮಟ್ಟದ ವಿದ್ಯೆಯೂ ಜನರ ಮಾತೃ ಭಾಷೆಗಳಲ್ಲಿ ನಡೆಯಬೇಕು ಎನ್ನುವ ಮಾತನ್ನು ಈಗ ರಾಷ್ಟ್ರವು ಒಪ್ಪಿಕೊಂಡಿದೆ. ಆ ದಿನದಲ್ಲಿ ಇದು ಬಹು ಜನರಿಗೆ ವಿಚಿತ್ರ ವಾದ ಎನ್ನಿಸುತ್ತಿತ್ತು. ಈಗಲಾದರೂ ನಮ್ಮಲ್ಲಿ ಹಲವರು ಇಂಗ್ಲೀಷ್ ಬಿಟ್ಟೆವೋ ನಾವು ಕೆಟ್ಟೆವು ಎನ್ನುತ್ತೇವೆ, ಬಿಡಿ ಎಂದು ಹೇಳುತ್ತಿಲ್ಲ ಎಂದರೆ ಮನಸ್ಸಿಗೆ ತೆಗೆದು ಕೊಳ್ಳುವುದಿಲ್ಲ. ಹೀಗಾಗಿ ಆಗ ಆಡಿದ ಈ ಮಾತು ಬಹುಪಾಲು ಈಗಲೂ ಆಡಬೇಕಾದ ಮಾತಾಗಿದೆ. ನನ್ನ ಚಿಕ್ಕಂದಿನ ಆಲೋಚನೆಯ ಒಂದು ಅವಿಷ್ಕಾರ ವೆಂಬ ಕಾರಣದಿಂದ ಈ ಲೇಖನವನ್ನು ನಾನು ಮರೆಯಲೊಲ್ಲದೆ ಇದೇನೆ. ಈ ಕಾರಣದಿಂದಲೇ ಇದು ಕೆಲವರಿಗಾದರೂ ರುಚಿಸಬಹುದು. ಈ ಭಾವನೆಯಿಂದಲೂ ಈಗ ಅದರ ಅನುವಾದವನ್ನು ಇಲ್ಲಿ ಪ್ರಕಟಣೆಗೆ ಕೊಟ್ಟಿದ್ದೇನೆ.)

ಸದ್ಯದಲ್ಲಿ ನಮ್ಮ ದೇಶದ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳಲ್ಲಿ ನಾವು ತೀರ ಅವಶ್ಯಕವಾಗಿ ಪರಿಶೀಲಿಸಬೇಕಾಗಿರುವ ಒಂದು ಸಮಸ್ಯೆ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಕುರಿತದ್ದಾಗಿದೆ. ಅದು ಆ ಕ್ರಮದಲ್ಲಿ ಇಂಗ್ಲೀಷಿಗೆ ದೇಶ ಭಾಷೆಗಳಿಗೆ ಯಾವ ಸ್ಥಾನ ಇರಬೇಕು ಎನ್ನುವುದು. ನಮ್ಮ ದೇಶ ಒಮ್ಮೆ ಉನ್ನತ ಸಂಸ್ಕೃತಿಯನ್ನು ಕಂಡ ದೇಶ ಬರುವ ಕಾಲಕ್ಕೆ ಅದು ಹಿಂದಿನ ವೈಭವಕ್ಕೆ ತರುವ ಒಂದು ಉನ್ನತಿಯಿಂದ ಇತರ ರಾಷ್ಟ್ರಗಳೊಂದಿಗೆ ಜೊತೆ ಜೊತೆಯಾಗಿ ನಿಲ್ಲಬೇಕು, ನಮ್ಮ ವಿದ್ಯಾಭ್ಯಾಸ ಕ್ರಮ ಇದನ್ನು ಸಾಧಿಸುವ ಸಾಧನೆ ಆಗಬೇಕು. ಇದಾಗ ಬೇಕಾದರೆ ಅದರಲ್ಲಿ ದೇಶ ಭಾಷೆಗಳಿಗೆ ಯಾವ ಸ್ಥಾನ ಇರಬೇಕು?

ಈ ವಿಷಯವನ್ನು ಕುರಿತು ಈ ವೇಳೆಗಾಗಲೇ ಹಲವು ಸಂದರ್ಭದಲ್ಲಿ ಹಲವರು ಹಲವು ಮಾತನ್ನಾಡಿದ್ದಾರೆ. ಒಂದು ಪಕ್ಷದಲ್ಲಿ ಎಷ್ಟು ಮಾತು ಹೇಳಿದ್ದಾಗಿದೆ, ಅಷ್ಟೂ ಮಾತನ್ನು ಪ್ರತಿಪಕ್ಷದಲ್ಲೂ ಹೇಳಿದ್ದಾಗಿದೆ. ಹೀಗಿದ್ದೂ ಸಮಸ್ಯೆ ಈಗಲೂ ಹಿಂದೆ ಎಲ್ಲಿತ್ತು ಅಲ್ಲೇ ನಿಂತಿದೆ. ಪ್ರತಿ ಸಲವೂ ಒಂದು ಪಕ್ಷ ತಾನು ಹಿಂದೆ ಹೇಳಿದ ಮಾತನ್ನೂ ಪ್ರತಿ ದಕ್ಷ ತಾನು ಹಿಂದೆ ಹೇಳಿದ ಮಾತನ್ನೂ ತೀರಾ ಹೊಸ ಮಾತು ಎಂಬಂತೆ ಮತ್ತೆ ಮತ್ತೆ ಹೇಳುತ್ತವೆ. ತಮ್ಮ ಮಾತಿಗೆ ಎದುರಾಳಿ ಹೇಳಿರುವ ಉತ್ತರ ಏನಿದೆ ಎನ್ನುವುದೇ ತಿಳಿದಿಲ್ಲ ಎನ್ನುವಂತೆ ನಡೆಯುತ್ತವೆ. ಯಾವುದೇ ಸಮಸ್ಯೆ ಜನ ಜೀವನದ ದಿನ ದಿನದ ವ್ಯವಹಾರಕ್ಕೆ ಸಂಬಂಧಿಸಿದ್ದರೆ ಅದು ಈ ದುರವಸ್ಥೆಯಲ್ಲಿರುವುದಿಲ್ಲ, ಸಂಬಂಧಿಸಲಿಲ್ಲವೊ ಅದು ಎಷ್ಟು ಪ್ರಮುಖವಾದ ಸಮಸ್ಯೆಯಾದರೂ ಈ ಪಾಡು ತಪ್ಪಿದ್ದಲ್ಲ.

ಮೈಸೂರು ಎಕನಾಮಿಕ್ ಜರ್ನಲಿನ ಈ ಮಾರ್ಚ್ ಏಪ್ರಿಲ್ ಸಂಚಿಕೆಯಲ್ಲಿ "ಭಾಷೆಗಳ ಯುದ್ಧ" ಎಂಬ ಹೆಸರಿನ ಲೇಖನವನ್ನು ಬರೆದಿರುವ "ಲಿಂಕ್ಸ್" ಮಹನೀಯರು ಹಿಡಿದಿರುವ ನಿಲುವಿಗೆ ಇದಲ್ಲದೆ ಬೇರೆಯಾದ ಸಮರ್ಥನವನ್ನೂ ಹೇಳುವಂತಿಲ್ಲ. ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ದೇಶ ಭಾಷೆಗಳ ಮೂಲಕ ಪಾಠ ಹೇಳುವುದೇ ಸರಿ ಎಂದು ಪ್ರಾಜ್ಞರಾದವರು ಅಭಿಪ್ರಾಯಪಟ್ಟಿದ್ದಾರಂತೆ, ಹೀಗೆಂದು ಈ ಜಿಜ್ಞಾಸು ತಿಳಿಸುತ್ತಾರೆ. ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ದೇಶ ಭಾಷೆಗಳಿಂದ ಪಾಠ ಹೇಳುವುದಾದರೆ ಇನ್ನು ಕೆಲವು ವರ್ಷ ದೇಶಗಳಲ್ಲಿ ಆದಕ್ಕೆ ಮೇಲಿನ ಮಟ್ಟದಲ್ಲಿಯೂ ದೇಶ ಭಾಷೆಗಳಲ್ಲಿ ಪಾಠ ಹೇಳಬೇಕಾಗುವುದು ಸಹಜವೂ, ಅನಿವಾರ್ಯವೂ ಆಗುತ್ತದೆ. ಹೀಗಿದ್ದು ಈ ನಮ್ಮ ಲೇಖಕರು ಈ ಮಾರ್ಪಾಟು ತನಗೆ ಒಪ್ಪಿಗೆ ಇಲ್ಲ ಎನ್ನುತ್ತಾರೆ. ಅದಕ್ಕೆ ಅವರು ಹೇಳುವ ಕಾರಣಗಳು ಈ ವಿಷಯದಲ್ಲಿ ಈ ಹಿಂದೆ ಈಗಾಗಲೇ ಹೇಳಿ ಗಣನೆಗೆ ಬಂದು ನಿರಾಕೃತ ಆದ ಹಳೆಯ ಕಾರಣಗಳು. ಆದ್ದರಿಂದ ಈಗ ನಾವು ಚರ್ಚೆಯ ಅಂಶಗಳು ಯಾವುವು ಎಂಬುದನ್ನು ಎಳೆ ಬಿಡಿಸಿ ತಿಳಿದುಕೊಳ್ಳಬೇಕಾಗಿದೆ ಈ ಲೇಖಕರು ವಾದದಲ್ಲಿ ಎತ್ತಿರುವ ಅಡ್ಡಿಗಳನ್ನು ಪರಿಶೀಲಿಸಿ, ಜನತೆಯ ಕ್ಷೇಮ ಸಾಧನೆಗೆ ನಮಗಿರುವ ಒಂದೇ ಮಾರ್ಗ ನಮ್ಮ ದೇಶ ಭಾಷೆಗಳಿಗೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಮೊದಲಸ್ಥಾನ ದೊರೆಯತಕ್ಕದ್ದು, ಅದಕ್ಕೆ ಕಡಿಮೆ ಯಾವ ಸ್ಥಾನವೂ ಅಯುಕ್ತ ಆಗುತ್ತದೆ, ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ಎಲ್ಲ ದೃಷ್ಟಿಯಿಂದಲೂ ನೋಡಿ ಇಂಗ್ಲೀಷಿಗೆ ಕೊಡಬೇಕಾಗುವ ಎರಡನೆಯ ಸ್ಥಾನ ಯಾವುದಿದೆ ಅದನ್ನು ಆ ಭಾಷೆಗೆ ಕೊಡಬೇಕು, ಸಂದೇಹವಿಲ್ಲ. ಆದರೆ ಬಗ್ಗೆ ಇಂಗ್ಲೀಷು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಇದುವರೆಗೆ ಆಕ್ರಮಿಸಿ ಬಂದಿರುವ ಪ್ರಪ್ರಥಮ ಸ್ಥಾನ ಯಾವುದಿದೆ ಅದರಲ್ಲಿ ಉಳಿದಿರುವುದುಸಾಧ್ಯವಿಲ್ಲ ಇಂಗ್ಲೀಷನ್ನು ಈ ಸ್ಥಾನದಿಂದ ತೆಗೆದರೆ ಆಗುವ ಪರಿಣಾಮ ದೇಶಕ್ಕೆ ಹಿತವಾದದ್ದೆ ಎನ್ನುವ ವಿಷಯದಲ್ಲಿ ಇಂಗ್ಲೀಷ್ ಪ್ರೇಮಿಗಳಿಗೆ ಒಂದು ಶಂಕೆ ಇದೆ. ಪ್ರಥಮ ಸ್ಥಾನದಿಂದ ತೆಗೆದು ಅದನ್ನು ದ್ವಿತೀಯ ಸ್ಥಾನ ದಲ್ಲಿರಿಸಿದಾಗಲೂ ನಮಗೆ ಆ ಭಾಷೆಯಲ್ಲಿ ದೊರೆಯುತ್ತಿರುವ ಎಲ್ಲ ಶುಭವೂ ದೊರೆಯುತ್ತಲೇ ಇರುತ್ತದೆ, ದೇಶ ಭಾಷೆಗಳನ್ನು ಮೊದಲ ಸ್ಥಾನದಲ್ಲಿಡುವುದ ರಿಂದ ಈಗ ನಮಗೆ ಲಭಿಸದೆ ಇರುವ ಹೆಚ್ಚಿನ ಶುಭ ಲಭಿಸಿದಂತಾಗುತ್ತದೆ. ಇದನ್ನು ನಾವು ಈ ಮಿತ್ರರಿಗೆ ತೋರಿಸಿಕೊಟ್ಟರೆ ಅವರ ಶಂಕೆ ಹರಿಯುತ್ತಾರೆ, ಅವರು ನಾವು ಸೂಚಿಸುವ ಮಾರ್ಪಾಡಿಗೆ ಒಪ್ಪಿಗೆ ಕೊಡುತ್ತಾರೆ. ದೇಶ ಭಾಷೆಗಳು ಪಾಠಹೇಳುವ ಭಾಷೆಗಳಾಗಲಿ ಎನ್ನುವವರ ಮನಸ್ಸಿಗೆ ಈ ನಿಶ್ಚಯ ಮನ ಮುಟ್ಟಿವೆ. ಇದರ ವಿವರವನ್ನು ಈ ಪತ್ರಿಕೆಯ ವಾಚಕರಲ್ಲಿ, ಅದರಲ್ಲೂ ಮುಖ್ಯವಾಗಿ ಲಿಂಕ್ಸ್ ಮಹನೀಯರ ರೀತಿಯಲ್ಲಿ ಯೋಚಿಸುತ್ತಿರುವ ವಾಚಕರಲ್ಲಿ ನಿವೇದಿಸಲು ಇಲ್ಲಿ ಯತ್ನ ಮಾಡಿದೆ.

ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಇಂಗ್ಲೀಷು ಮುಖ್ಯ ಭಾಷೆಯಾಗಿರಲಿ, ದೇಶಭಾಷೆಗಳು ಆಮೇಲೆ ಬರಲಿ ಎನ್ನುವವರು, ಮತ್ತು, ದೇಶಭಾಷೆಗಳು ಮೊದಲಾಗಿ ಆಮೇಲೆ ಇಂಗ್ಲಿಷು ಇರಲಿ ಎನ್ನುವವರ ವಾದಗಳಲ್ಲಿ ಎರಡು ಪಕ್ಷಕ್ಕೂ ಸಮ್ಮತವಾದ ಭಾಗ ತಕ್ಕಷ್ಟು ಇದೆ. ಸಧ್ಯದಲ್ಲಿ ದೇಶಭಾಷೆಗಳು ಶಾಲೆ ಕಾಲೇಜುಗಳಲ್ಲಿ ಎಲ್ಲ ವಿಷಯಗಳನ್ನೂ ಕಲಿಸಲು ತಕ್ಕಷ್ಟು ಮುಂಬರಿದಿಲ್ಲ; ಈ ಭಾಷೆಗಳಲ್ಲಿ ಪಠ್ಯಪುಸ್ತಕಗಳು ಸಿದ್ಧವಾಗಿಲ್ಲ ಅಥವಾ ಕೆಲವು ಇಂಥ ಪುಸ್ತಕಗಳು ಇರುವುದಾದರೆ ಅವು ತಕ್ಕಷ್ಟು ಚೆನ್ನವಾಗಿಲ್ಲ; ದೇಶವನ್ನೆಲ್ಲ ಭಾಷೆಗಳಿಗೆ ಅನುಗುಣವಾಗಿ ಪ್ರಾಂತಗಳಾಗಿ ವಿಭಾಗಿಸುವುದು ಸಾಧ್ಯವಿಲ್ಲ: ಭಾಷೆಯ ದೃಷ್ಟಿಯಿಂದ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದರಿಂದ ಸಂಕುಚಿತ ಭಾವನೆಗಳು ಬೆಳೆಯುವುದಕ್ಕೆ ಅವಕಾಶಕೊಟ್ಟಂತಾಗುತ್ತದೆ; ಆರೋಗ್ಯಕರವಾದ ಸ್ಪರ್ಧೆಯಿಲ್ಲದಂತೆ ಮಾಡಿ ಹೊರಗಿನ ಸಹಾಯ ಬೇಡ ಎಂದು ಹೇಳಿ ಈ ಕ್ರಮ ಧ್ಯೇಯಗಳನ್ನು ತಗ್ಗಿಸುವುದಕ್ಕೂ ಜ್ಞಾನದ ಬೆಳವಣಿಗೆಯನ್ನು ತಡೆಯುವುದಕ್ಕೂ ಕಾರಣವಾಗುತ್ತದೆ; ದೇಶಭಾಷೆಗಳು ರಾಷ್ಟ್ರ ಜೀವನದ ಹೊಸ ಉದ್ದೇಶಗಳನ್ನು ಸಾಧಿಸುವಂತೆ ಬೆಳೆಯಬೇಕಾದರೆ ಅವಕ್ಕೆ ಇಂಗ್ಲೀಷಿನ ಸಂಪರ್ಕ, ಅದರಲ್ಲೂ ಇಂದಿನ ಇಂಗ್ಲೀಷಿನ ಅತ್ಯುತ್ತಮ ಲೇಖನದ ಸಂಪರ್ಕ, ಇರಬೇಕು; ಇದಿಷ್ಟು ಎರಡು ಪಕ್ಷಗಳೂ ಒಪ್ಪುವ ಮಾತು. ಇದರ ಮೇಲೆ ಒಟ್ಟು ಭರತ ವರ್ಷಕ್ಕೆ ಪ್ರಾಂತ ಪ್ರಾಂತಗಳ ಮಧ್ಯದ ವ್ಯವಹಾರಕ್ಕೆ ಹಾಗೆಯೇ ಭರತವರ್ಷ ಮಿತ್ರೇತರ ದೇಶಗಳ ಮಧ್ಯೆ ವ್ಯವಹಾರಕ್ಕೆ ಇಂಗ್ಲೀಷೆ ಅನುಕೂಲಕರವಾದ ಭಾಷೆ ಎಂದು ಒಂದು ಜನರ ಒಪ್ಪಿಗೆ ಇದೆ. ಇದರಾಚೆಗೆ ಈ ವಾದಗಳಲ್ಲಿ ಭೇದ ಕಾಣುತ್ತದೆ. ಇಂಗ್ಲೀಷ್ ಅಭಿಮಾನಿಗಳು ಈ ತಳಹದಿಯನ್ನು ಹಿಡಿದು ಎಲ್ಲ ಕಾಲಕ್ಕೂ ಇಂಗ್ಲೀಷೇ ಮುಖ್ಯ ಭಾಷೆಯಾಗಿ ಇದ್ದುಬಿಡಲಿ ಎನ್ನುತ್ತಾರೆ. ದೇಶಭಾಷೆಗಳಿಗೆ ಮೊದಲ ಸ್ಥಾನ ಇರಲಿ ಎನ್ನುವವರು ಇದು ಕೂಡದು ಎಂದು ಹೇಳಿ ಅದಕ್ಕೆ ಹಲವು ಕಾರಣಗಳನ್ನು ಸೂಚಿಸುತ್ತಾರೆ.

ಆ ಕಾರಣಗಳು ಇವು. ಮೊದಲಾಗಿ ಇಂಗ್ಲೀಷ್ ಪ್ರಪ್ರಥಮ ಸ್ಥಾನವನ್ನು ಪಡೆದಿರುವುದರ ಫಲವಾಗಿ ದೇಶ ಭಾಷೆಗಳು ಶೀರ ಮೂಲೆಪಾಲಾಗಿವೆ: ಎರಡನೆಯದಾಗಿ ಬುಡದಿಂದ ತಲೆಯವರೆಗೆ ಪರದೇಶದ ಭಾಷೆ ಒಂದನ್ನು ಬಳಸುವುದು ಒಂದು ಕೃತಕ ಪರಿಸ್ಥಿತಿ. ಈ ಕ್ರಮದಲ್ಲಿ ವಿದ್ಯೆ ಕಲಿಯುವುದೆನ್ನುವುದು ಪದಗಳನ್ನು ಕಲಿಯುವ ಪಾಡಾಗಿದೆ. ಇದರ ಪರಿಣಾಮವಾಗಿ ವಿದ್ಯೆ ವಿದ್ಯಾರ್ಥಿಯ ವಿಕಾಸನಕ್ಕೆ ಸಾಧನ ಆಗದೆ ವಿಫಲವಾಗಿದೆ. ಇಂಗ್ಲೀಷು ಪ್ರಮುಖ ಭಾಷೆ ಆಗಿರುವುದರಿಂದ ಎಲ್ಲ ತಿಳಿವಳಿಕೆಯೂ ಸಾಮಾನ್ಯ ಜನರ ಕೈಗೆಟುಕ

ದಂತೆ ದೂರ ಉಳಿಯಿತು; ಅಂತೆಯೇ ವಿದ್ಯೆ ಕಲಿತವರು ವಿದ್ಯೆ ಕಲಿಯದವರಿಂದ ಪೃಥಕ್ಕಾಗಿ ಬಾಳುವುದಾಗಿದೆ; ಇದು ಮೂರನೆಯ ಆಕ್ಷೇಪ. ಇದೇ ಕಾರಣದಿಂದ ನಾವು ನಮ್ಮ ಪಿತ್ರಾರ್ಜಿತ ಸಂಸ್ಕೃತಿಯಿಂದ ಬೇರೆಯಾಗುತ್ತಿದ್ದೇವೆ; ರಾಷ್ಟ್ರಜೀವನವನ್ನು ಉನ್ನತ ಲಕ್ಷ್ಯಗಳತ್ತ ಪ್ರೇರಿಸಲು ಆ ಪಿತ್ರಾರ್ಜನೆಯಲ್ಲಿ ಏನೂ ಇಲ್ಲ ಎಂಬಂತೆ ನಡೆಯುತ್ತಿದ್ದೇವೆ; ಹೀಗೆ ನಡೆದು ಮುಂಬರಿವಿಗೆ ಸಾಧ್ಯವಾದ ಮೊದಲ ಪ್ರಚೋದನೆ ಒಂದನ್ನು ತೋರದಿದ್ದೇವೆ; ಇದು ನಾಲ್ಕನೆಯ ಆಕ್ಷೇಪ.

ಇಂಗ್ಲೀಷ್ ಅಭಿಮಾನಿಗಳು ಈ ಆಕ್ಷೇಪಗಳಿಗೆ ಗಮನ ಕೊಟ್ಟಿರುವುದು ಅವರ ಲೇಖನಗಳಲ್ಲಿ ಕಂಡಿಲ್ಲ. ಮೊದಲ ಆಕ್ಷೇಪಕ್ಕೆ ಎರಡನೆ ಆಕ್ಷೇಪಕ್ಕೆ ಸ್ವಲ್ಪ ಮಟ್ಟಿಗೆ ಲಿಂಕ್ಸ್ ಮಹನೀಯರು ಹೀಗೆಂದು ಉತ್ತರ ಹೇಳಿದ್ದಾರೆ. ಒಬ್ಬ ವ್ಯಕ್ತಿ ಪರದೇಶದ ಭಾಷೆ ಒಂದರಲ್ಲಿ ಪಾಂಡಿತ್ಯ ಗಳಿಸುವುದರಲ್ಲಿ ಕೃತಕತೆ ಏನೂ ಇಲ್ಲ. ವಿದ್ಯೆಯಲ್ಲಿ ಎರಡು ಭಾಷೆಗಳು ಬಳಕೆಯಲ್ಲಿರುವ ದೇಶಗಳು ಹಲವಿದೆ. ಇಂಥ ಹಲವು ದೇಶಗಳಲ್ಲಿ ಭರತವರ್ಷವೂ ಒಂದು ಅಷ್ಟೆ. ಇದು ಅವರು ಹೇಳುವ ಸಮಾಧಾನ. ಈ ಸಮಾಧಾನ ಸಾಲದು ಎನ್ನಬೇಕು. ಒಬ್ಬ ವ್ಯಕ್ತಿಯೊ, ಒಬ್ಬರಲ್ಲ ಒಂದು ನೂರು ಮಂದಿಯೊ, ಪರದೇಶದ ಭಾಷೆಯೊಂದನ್ನು ಕಲಿಯುವುದು ಕೃತಕ ಆಗಲೇಬೇಕಾದ್ದಿಲ್ಲ. ಆದರೆ ಕೋಟಿ ಕೋಟಿ ಜನ ಜ್ಞಾನಪಡೆಯಬೇಕಾದರೆ ಪರದೇಶದ ಒಂದು ಭಾಷೆಯನ್ನು ಕಲಿಯಲೇ ಬೇಕೆನ್ನುವುದು ನಿಸ್ಸಂದೇಹವಾಗಿ ಕೃತಕ ಪರಿಸ್ಥಿತಿ ಹಲವು ದೇಶಗಳಲ್ಲಿದೆ ಎನ್ನುವುದರಿಂದ ಅದರ ಕೃತಕತೆ ನಿವಾರಣೆ ಆಗುವುದಿಲ್ಲ. ಇದು ಬೇರೆ ಕಡೆಯೂ ಇದೆಯೇ ಎಂದು ಮತ್ತಷ್ಟು ವ್ಯಥೆ ಆಗುತ್ತದೆ ಅಷ್ಟೇ. ಅಲ್ಲದೆ ಆ ಬೇರೆ ದೇಶಗಳ ಪಾಡನ್ನು ನೆನೆದು ಅವುಗಳಂತೆ ನಾವೂ ಇದ್ದರಾಯಿತು ಎನ್ನುವ ಮುನ್ನ ನಮಗೆ ಕೆಲವು ವಿವರಗಳು ತಿಳಿಯಬೇಕು. ಆ ಇತರ ದೇಶಗಳು ಕೃತಕ ಪರಿಸ್ಥಿತಿಯಿಂದ ಬಿಡಿಸಿಕೊಳ್ಳಲು ಅನುಕೂಲ ಪಡೆದಿವೆಯೇ? ಅವುಗಳಲ್ಲಿ ಪರದೇಶದ ಭಾಷೆ ಪ್ರಮುಖ ಭಾಷೆಯಾಗಿದೆಯೇ? ಸ್ವಭಾಷೆ ಗೌಣಸ್ಥಾನದಲ್ಲಿದೆಯೆ? ಅದು ಗೌಣವಾಗಿರುವುದಕ್ಕೆ ಕಾರಣವೇನು? ಈ ವಿವರಗಳು ನಮಗೆ ತಿಳಿಯದು.

ವಿದ್ಯಾರ್ಥಿಯ ಬುದ್ಧಿಯ ವಿಕಾಸವನ್ನು ವಿದ್ಯೆ ಸಾಧಿಸ ಬೇಕಾದರೆ ಅದು ದೇಶಭಾಷೆಯಲ್ಲಿ ಆಗಬೇಕು ಎಂಬ ಮಾತನ್ನು "ಲಿಂಕ್ಸ್" ಒಪ್ಪಿಕೊಳ್ಳುತ್ತಾರೆ. ಒಪ್ಪಿಕೊಂಡು ಅದಕ್ಕೆ ಒಂದು ಚಿಕಿತ್ಸೆಯನ್ನು ಸೂಚಿಸುತ್ತಾರೆ. ದೇಶದ ಮಕ್ಕಳನ್ನು ಎಳೆವಯಸ್ಸಿನಲ್ಲೇ ಪಾಠಶಾಲೆಗಳಲ್ಲಿ ವಾಸಿಸುವುದಕ್ಕೆ ಬಿಟ್ಟು, ಅಲ್ಲಿ ಇಂಗ್ಲೀಷಿನಲ್ಲೇ ಪಾಠ ಹೇಳಿ ಇಂಗ್ಲೀಷಿನಲ್ಲೇ ಎಲ್ಲ ವ್ಯವಹಾರ ನಡೆಸಿ, ನಮ್ಮ

ಮಕ್ಕಳಿಗೆ ಇಂಗ್ಲೀಷು ಮಾತೃಭಾಷೆಗೆ ಸಮಾನಾಗಿ ಸಹಜವಾಗುವಂತೆ ಮಾಡಬೇಕು ಎನ್ನುವುದು ಅವರ ಸೂಚನೆ. ಇಂಥ ಶಾಲೆಗಳು ಸಾವಿರಾರು ಬೇಕಾಗುತ್ತವೆ. ಅವುಗಳ ವೆಚ್ಚಕ್ಕೆ ಬಹಳ ಹಣ ಬೇಕಾಗುತ್ತದೆ. ಜನ ಈ ಹಣವನ್ನು ಸರಕಾರಕ್ಕೆ ಸುಲಭ ಬಡ್ಡಿಗೆ ಒದಗಿಸಬೇಕು. ಈ ನಿವಾಸ ಶಾಲೆಗಳಲ್ಲಿ ಮಹಿಳೆಯರೇ ಪಾಠ ಹೇಳಬೇಕು. ಸಾಧ್ಯವಾದರೆ ಇವರು ಉದ್ಧಾರಕ ಸೇವಾದೃಷ್ಟಿಯಿಂದ ಜೀವನವನ್ನರ್ಪಿಸಿದ ಮಹಿಳೆಯರಾಗಿರಬೇಕು.

ಲಿಂಕ್ಸ್ ಮಹನೀಯರ ಈ ಯೋಜನೆ ಕೊಂಚ ವೆಚ್ಚದ ಯೋಜನೆಯೇ. ಇಂಥ ಯೋಜನೆ ಸಾಧ್ಯವೇ? ಲಿಂಕ್ಸ್ ಮಹನೀಯರೇ ಒಪ್ಪುತ್ತಾರೆ: ಇದು ಬಹು ಕಷ್ಟ; ಅಸಾಧ್ಯವೆಂದೇ ಹೇಳಬಹುದಾದಷ್ಟು ಎಂದು ಆದರೆ ಯೋಜನೆಯ ಅತಿ ದೊಡ್ಡ ಕಷ್ಟ ಅದರ ಈ ಅತಿಯಾದ ವೆಚ್ಚವಲ್ಲ. ಈ ವೆಚ್ಚದ ಮಾತು ಒಂದೇ ಸಾಕು ದಿಟ, ಅದನ್ನು ಕೈ ಬಿಡುವುದಕ್ಕೆ ಈ ವೆಚ್ಚ ಲಕ್ಷದ ಲೆಕ್ಕವನ್ನಲ್ಲ, ಕೋಟಿಗಳ ಲೆಕ್ಕವನ್ನು ದಾಟುತ್ತದೆ ನಮ್ಮ ಬಡ ಜನ ಈ ಕೋಟ್ಯಾಂತರ ಹಣವನ್ನು ಒದಗಿಸಲಾರದು. ಈ ತೆರದ ಶಾಲೆಗಳು ಒಳ್ಳೆಯವೆಂದು ಸರಕಾರಕ್ಕೆ ಕಂಡರೆ ಸರಕಾರ ಸಾಲ ಕೇಳದೆ ಅದನ್ನು ನಡೆಸಬೇಕು. ಇವು ಒಳ್ಳೆಯದೆಂದು ಕಾಣದಿದ್ದರೆ ಸರಕಾರ ಅವನ್ನು ನಡೆಸಿ ಯಾವ ಶುಭವನ್ನು ಸಾಧಿಸಬಹುದು?

ಆದರೆ ಈ ಯೋಜನೆಯಲ್ಲಿ ಈ ವೆಚ್ಚಕ್ಕಿಂತ ಹೆಚ್ಚು ಕಷ್ಟದ ವಿವರ ಒಂದು ಇದೆ. ಸದ್ಯ ಸ್ಥಿತಿಯಲ್ಲಿ ನಾವು ನಡೆಸುತ್ತಿರುವ ಎಲ್ಲ ಪ್ರಾಥಮಿಕ ಶಾಲೆಗಳಿಗೆ ಬೇಕಾಗುವಷ್ಟು ಮಂದಿ ದಕ್ಷ ಉಪಾಧ್ಯಾಯರು ಒದಗುವುದೇ ಕಷ್ಟವಾಗಿದೆ. ಇಂಥದರಲ್ಲಿ ಸಾವಿರಾರು ಸಂಖ್ಯೆಯ ಈ ನಿವಾಸ ಶಾಲೆಗಳಿಗೆ ಬೇಕಾಗುವ ಉದ್ಧಾರಕ ಸೇವಾ ಬುದ್ಧಿಯ ಇಂಗ್ಲೀಷ್ ಬಲ್ಲ ಮಹಿಳಾಮಣಿ ಉಪಾಧ್ಯಾಯರ ಸಂಖ್ಯೆ ಎಲ್ಲಿಂದ ಬರಬೇಕು? ಇಂಥ ಶಾಲೆಗಳು ಅಪೇಕ್ಷಣೀಯ ಎಂದು ಒಪ್ಪಿದರೂ ಇವನ್ನು ನಿರ್ಮಿಸುವುದು ಸಾಧ್ಯವಲ್ಲ. ಇದು ಅನುಲ್ಲಂಘ್ಯ, ಕಾರಣ ಇದರಿಂದ ನಾವು ಈ ಯೋಜನೆಯನ್ನು ಕೈಬಿಡಬೇಕು.

ಆದರೆ ಈ ಯೋಜನೆಯನ್ನು ಕೈಬಿಡಲು ಹಿಂತೆಗೆಯಬೇಕಾಗಿಲ್ಲ. ಏಕೆಂದರೆ ದಿಟದಲ್ಲಿ ಇಂಥ ಶಾಲೆ ಅಪೇಕ್ಷಣೀಯ ಅಲ್ಲ. ಒಟ್ಟು ಈ ಯೋಜನೆಯ ಮೂಲದಲ್ಲೇ ಒಂದು ತಪ್ಪು ಕಲ್ಪನೆ ಅಡಗಿದೆ. ಮಗು ಬೆಳೆಯುತ್ತ ತನ್ನ ತಾಯಿ ಭಾಷೆಯಲ್ಲಿ ಯೋಚಿಸಲು ಕಲಿಯುತ್ತದೆ; ಅದನ್ನು ತಪ್ಪಿಸಿ ಮಗು ಇಂಗ್ಲೀಷಿನಲ್ಲಿ ಯೋಚಿಸುವ ಸನ್ನಿವೇಶವನ್ನು ಕಲ್ಪಿಸಬೇಕು; ಇದರಿಂದ ಮಗುವಿಗೆ ಇಂಗ್ಲೀಷು ತಾಯ್ನುಡಿಯಂತೆ ಸಹಜವಾಗಬೇಕು ಎನ್ನುವುದು ಯೋಜನೆಯ ಮೂಲದ ಭಾವ. ಈ ಸನ್ನಿವೇಶವೇ ಕೃತಕ. ಸುತ್ತಲೆಲ್ಲ ಜನ ನಾವು ನಮ್ಮ ಅತ್ಯುತ್ತಮ ಯೋಚನೆಯನ್ನೆಲ್ಲ ನಮ್ಮ ಭಾಷೆಗಳಲ್ಲಿ ನಡೆಸಬೇಕು ಎಂದು

ಬಯಸುತ್ತಿರುವಲ್ಲಿ "ಲಿಂಕ್ಸ್" ಮಹಾಶಯರು ಹಾಗೆ ಯೋಚನೆಮಾಡುವುದು ಒಂದು ವಿಪತ್ತು ಎಂಬಂತೆ ಮಾತನಾಡುತ್ತಿದ್ದರೆ, ಇದನ್ನು ನಿವಾರಿಸುವುದು ಹೇಗೆ ಎಂದು ಯೋಚಿಸುತ್ತಾರೆ. ಇದಕ್ಕೆ ಕಾರಣ ಈ ಬಯಕೆ ಬಂದರೆ ಅದು ನಮ್ಮ ಮಕ್ಕಳು ಇಂಗ್ಲೀಷಿನಲ್ಲಿ ನಿಪುಣರಾಗುವುದನ್ನು ತಪ್ಪಿಸುತ್ತದೆ ಎಂಬ ಅವರ ಭಯ. ಭಾರತೀಯ ಶಿಶು ಒಂದು ಇಂಗ್ಲೀಷ್ ಮಾತೃಭಾಷೆಯಾದ ಒಂದು ಸಂಸಾರಕ್ಕೆ ಸಮನಾದ ನಿವಾಸ ಶಾಲೆಯಲ್ಲಿ ಬೆಳೆಸಿದರೆ ಅದು ಮಾತೃಭಾಷೆಯಲ್ಲಿ ಕಲಿಯುವಷ್ಟೇ ಸುಲಭವಾಗಿ ಇಂಗ್ಲೀಷನ್ನು ಕಲಿಯುತ್ತದೆ ಎಂದು ತೋರಿಸುವುದು "ಲಿಂಕ್ಸ್" ಮಹನೀಯರ ಉದ್ದೇಶ. ಈ ಉದ್ದೇಶ ಮಹಾ ಉದ್ದೇಶ ಅಲ್ಲ; ಇದು ಎಂಥ ಉದ್ದೇಶ ಆದರೂ ಇದನ್ನು ಸಾಧಿಸುವುದಕ್ಕೆ ಇವರು ಹೋಗುವಷ್ಟು ದೂರ ಹೋಗಲು ಇತರರು ಒಪ್ಪಲಾರರು ಭರತವರ್ಷದಲ್ಲಿ ಹುಟ್ಟಿದ ಮಾತ್ರಕ್ಕೇ ಇಂಗ್ಲೀಷಿನಲ್ಲಿ ನೈಪುಣ್ಯ ಅಸಾಧ್ಯವಲ್ಲ ಎಂದು ತೋರಿಸುವ ಇವರ ಉದ್ದೇಶ ಬಹು ದೊಡ್ಡದೇನಲ್ಲ. ಆ ನೈಪುಣ್ಯ ಸಾಧ್ಯ ಎಂದು ಒಪ್ಪುವುದಕ್ಕೆ ಪ್ರಮಾಣವನ್ನು ಒದಗಿಸಬೇಕಾಗಿಲ್ಲ. ಅದು ಹೇಗೆ ಆದರೂ "ಲಿಂಕ್ಸ್" ಮಹನೀಯರ ಈ ಯೋಜನೆ ಕಾರ್ಯಗತವಾಗಬಲ್ಲ ಯೋಜನೆ ಅಲ್ಲ.

ಇಂಗ್ಲೀಷ್ ನಮ್ಮ ವಿದ್ಯೆಯಲ್ಲಿ ಪ್ರಮುಖ ಭಾಷೆಯಾಗಿರಬಾರದು ಎನ್ನುವವರ ಆಕ್ಷೇಪದಲ್ಲಿ ಲಿಂಕ್ಸ್ ಮಹಾಶಯರು ದಿಟವಾಗಿ ಗಮನಕೊಟ್ಟಿರುವುದು ಈ ಎರಡಕ್ಕೇ. ಮೂರನೆಯ ಆಕ್ಷೇಪ ಅವರ ಮನಸ್ಸಿಗೆ ಮುಟ್ಟಿದೆ ಎನ್ನುವುದಕ್ಕೆ ಅವರ ಲೇಖನದಲ್ಲಿ ಸೂಚನೆ ಕಾಣುತ್ತದೆ. ಆದರೆ ತಕ್ಕಷ್ಟು ದೀರ್ಘವಾದ ಲೇಖನದಲ್ಲಿ ಇದರ ಸೂಚನೆ ಇದೆ ಹೊರತಾಗಿ ಇದಕ್ಕೆ ಸಮಾಧಾನ ಉಕ್ತವಾಗಿಲ್ಲ. ನಾಲ್ಕನೆಯ ಆಕ್ಷೇಪಕ್ಕೆ ಅವರು ಗಮನಕೊಟ್ಟಿದ್ದಾರೆ ಎನ್ನುವುದು ಲೇಖನದಲ್ಲಿ ಕಾಣುವುದೇ ಇಲ್ಲ. ಇಂಗ್ಲೀಷ್ ಪ್ರಮುಖ ಭಾಷೆಯಾಗಿರಲಿ ಎನ್ನುವವರು ಪ್ರತಿಪಕ್ಷದ ಮನಸ್ಸನ್ನು ಒಪ್ಪಿಸಬೇಕಾದರೆ ಈ ಎರಡು ಆಕ್ಷೇಪಗಳನ್ನು ಎತ್ತಿಕೊಂಡು ಅವಕ್ಕೆ ತಕ್ಕ ಸಮಾಧಾನವನ್ನು ಕೊಡಬೇಕು. ಆಗ ಪ್ರತಿಪಕ್ಷ ಇವರ ವಾದವನ್ನು ಒಪ್ಪೀತು. ಆದರೆ ಇಂಗ್ಲೀಷಿನ ಅಭಿಮಾನಿಗಳು ಈ ಆಕ್ಷೇಪಗಳನ್ನು ಗಮನಿಸುವುದೇ ಇಲ್ಲ. ಈ ಕಾರಣದಿಂದ ದೇಶಭಾಷೆಗಳು ಪ್ರಮುಖವಾಗಿರಲಿ ಎನ್ನುವವರು ಆ ಆಕ್ಷೇಪಗಳಿಗೆ ಪೂರ್ಣ ಪ್ರಾಮುಖ್ಯವನ್ನು ಕೊಡುತ್ತಾರೆ.

ದೇಶಭಾಷೆಯಲ್ಲಿ ವಿದ್ಯೆ ನಡೆದರೆ ಜ್ಞಾನ ಜನಸಾಮಾನ್ಯದ ಆಸ್ತಿಯಾಗುತ್ತದೆ; ಆಗ ನಮ್ಮ ಪಿತಾರ್ಜಿತ ಸಂಸ್ಕೃತಿ ಮತ್ತೆ ಉಜ್ಜೀವಿಸುತ್ತದೆ, ನಮ್ಮ ಬಾಳನ್ನು ಬೆಳಗುತ್ತದೆ; ಆಗ್ಗೆ ನಮ್ಮ ರಾಷ್ಟ್ರಜೀವನ ಪೂರ್ಣವಾಗುತ್ತದೆ,

ಸರ್ವತೋಮುಖವಾಗುತ್ತದೆ: ಆದ್ದರಿಂದ ದೇಶಭಾಷೆಗಳು ಪ್ರಮುಖವಾಗಬೇಕು. ಇದು ಈ ಪಕ್ಷದವಾದ. ಇಂಗ್ಲೀಷ್ ಪ್ರಮುಖವಾಗಿರಲಿ ಎನ್ನುವವರು ಇದಕ್ಕೆ ಸಮನಾಗಿ ಏನೂ ಹೇಳುವಂತಿಲ್ಲ.

ಈ ವಿವರಗಳಿಗೆ ಪ್ರತಿಯಾಗಿ ಏನನ್ನೂ ಹೇಳಲಾಗದಿದ್ದರೂ ಈ ಆಂಗ್ಲಾಭಿಮಾನಿಗಳು ಬೇರೆ ಕೆಲವು ಮಾತನ್ನಾಡುತ್ತಾರೆ: ಇಂಗ್ಲೀಷು ರಾಷ್ಟ್ರವನ್ನು ಕಟ್ಟಲು ಸಾಧಕವಾಗುತ್ತದೆ; ಭಾರತೀಯರ ಭೌತಶಾಸ್ತ್ರ ವಿಜ್ಞಾನ ಈ ಒಂದು ಭಾಷೆಯಲ್ಲಿ ನಡೆಯುವುದು ಅನುಕೂಲ; ಈ ಒಂದು ಭಾಷೆಯಲ್ಲಿ ನಡೆಯುವುದರಿಂದ ಅದು ಪಾಶ್ಚಾತ್ಯ ವಿಜ್ಞಾನಿಗಳ ಗಮನಕ್ಕೆ ಬರುತ್ತದೆ. ಈ ಮಾತು ಸರಿಯೆಂದು ಒಪ್ಪುವುದಾದರೂ ಈ ಗುರಿ ಸಿದ್ಧಿಸುವುದಕ್ಕೆ ಇಂಗ್ಲೀಷು ಪ್ರಮುಖ ಭಾಷೆ ಆಗಿ ಇರುವುದು ಅನವಶ್ಯಕ. "ದೇಶಭಾಷೆಗಳು ಪ್ರಮುಖಸ್ಥಾನಕ್ಕೆ ಬಂದರೆ" ಎಂಬ ಮಾತಿನಿಂದ "ಲಿಂಕ್" ಮಹನೀಯರು "ಆಗ್ಗೆ ಭಾರತೀಯ ವಿಜ್ಞಾನ ಹತ್ತು ದೇಶಭಾಷೆಗಳಲ್ಲಿ ಮರೆಯಾಗಿ ಮುಚ್ಚಿಹೋಗುತ್ತದೆ" ಎಂಬ ಸಿದ್ಧಾಂತಕ್ಕೆ ನಡೆದಿದ್ದಾರೆ. ಇದರ ಮೇಲೆ "ಲಿಂಕ್ಸ್" ಮಹನೀಯರು ದೇಶದ ಭಾಷೆಗಳು ಪ್ರಮುಖವಾದಾಗ ಶಂಕರನ್‌ನಾಯರಂಥ ದಕ್ಷ ಮಲೆಯಾಳಿ ಕೇರಳದಿಂದ ಹೊರಗೆ ಕೆಲಸಕ್ಕೆ ಬರುವುದಿಲ್ಲ, ಎಂದು ಹೇಳಿದ್ದಾರೆ. ಇವರ ಈ ತಿಳಿವಳಿಕೆಯಲ್ಲಿ ದೊಡ್ಡ ತಪ್ಪು ಒಂದು ಅಡಗಿದೆ. ದೇಶಭಾಷೆಗಳು ಪ್ರಮುಖ ಆಗಬೇಕು ಎಂದರೆ ಇಂಗ್ಲೀಷನ್ನು ತೊಡೆದುಹಾಕಬೇಕು ಎಂದು ಅರ್ಥ ಅಲ್ಲ. ದೇಶಭಾಷೆಗಳು ಪ್ರಮುಖವಾಗಿರಲಿ ಎನ್ನುವವರು ಇಂಗ್ಲೀಷು ಬೇಡಲೇ ಬೇಡ ಎಂದು ಹೇಳುತ್ತಿಲ್ಲ. ಅದರಲ್ಲಿ ಪಾಠ ಹೇಳುವುದು ಬೇಡ, ಅದನ್ನು ಒಂದು ಭಾಷೆ ಎಂದು ಕಲಿಯೋಣ ಎನ್ನುತ್ತಾರೆ. ಇಂಗ್ಲೀಷಿನ ಗಂಧವೇ ಬೇಡ ಎಂದರೆ ಇವರ ವಾದ ಸಂದೀತು. ಪ್ರತಿಪಕ್ಷ ಹೀಗೆ ಎನ್ನುತ್ತಿಲ್ಲ. ನಮ್ಮ ವಿಜ್ಞಾನಿ ನಮ್ಮ ಸೂಚನೆಯಂತೆ ನಡೆದರೆ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯುತ್ತಾನೆ, ತನ್ನ ಅನ್ವೇಷಣದ ಫಲವನ್ನು ಇಂಗ್ಲೀಷಿನಲ್ಲಿ ಹೇಳಬಲ್ಲವನಾಗಿರುತ್ತಾನೆ. ಒಬ್ಬ ಶಂಕರನ್‌ನಾಯರ್ ಇಂಗ್ಲೀಷನ್ನು ಎರಡನೆಯ ಭಾಷೆಯಾಗಿ ಕಲಿತು ಕೇಂದ್ರ ಸರ್ಕಾರದ ಏಣಿಯಲ್ಲಿ ಮೇಲಿನ ಮಟ್ಟಕ್ಕೆ ಏರುವುದು ಸಾಧ್ಯವಾಗಿಯೇ ಇರುತ್ತದೆ. ಕೇಂದ್ರ ಸರ್ಕಾರ ಒಟ್ಟು ದೇಶದ ಆಡಳಿತದಲ್ಲಿ ಇಂಗ್ಲೀಷನ್ನೇ ಬಳಸುತ್ತದೆ.

"ಒಂದು ಭಾಷಾಪ್ರಾಂತದ ವಿಜ್ಞಾನಿ ಇತರ ಭಾಷಾ ಪ್ರಾಂತಗಳ ವಿಜ್ಞಾನಿಗಳ ಅನ್ವೇಷಣವನ್ನು ತಿಳಿದುಕೊಳ್ಳಬೇಕೆಂದರೆ ಆ ಭಾಷೆಗಳನ್ನು ಕಲಿಯಬೇಕಾಗುತ್ತದೆ. ನಮ್ಮ ವಿಜ್ಞಾನಿಗಳು ಈಗಾಗಲೇ ಪಾಶ್ಚಾತ್ಯ ಭಾಷೆ ಹಲವನ್ನು ಕಲಿಯಬೇಕಾದ ಸ್ಥಿತಿಯಲ್ಲಿದ್ದಾರೆ. ಜೊತೆಗೆ ಉನ್ನತಾಧಿಕಾರದ ರಾಜಪುರುಷ

ನಮಗೆ ಬೇಕು. ಹಲವು ದೇಶಭಾಷೆಗಳನ್ನೂ ಕಲಿಯಬೇಕೆಂದರೆ ಅವರು ಕಲಿಯಬೇಕಾದ ಭಾಷೆಗಳ ಹೊರೆ ಬಹಳವಾಗುತ್ತದೆ" ಎಂದು "ಲಿಂಕ್" ಮಹಾಶಯರು ವಾದಿಸಿದಾರೆ. ಇರಬಹುದು, ಆದರೆ ಹತ್ತು ಹೊರಗಿನ ಭಾಷೆಯನ್ನು ಕಲಿಯುವ ನಮ್ಮ ವಿಜ್ಞಾನಿ ಆವಶ್ಯಕ ಕಂಡರೆ ನಾಲ್ಕು ದೇಶ ಭಾಷೆಗಳನ್ನೂ ಕಲಿತುಕೊಳ್ಳಬಾರದೇಕೆ?

ಆದರೆ ಈ ವಾದದಲ್ಲಿ ಮೂಲತಃ ಒಂದು ದೋಷ ಇದೆ. ವಿದ್ಯೆಯ ಉದ್ದೇಶವೆಲ್ಲ ಅನ್ವೇಷಣದಲ್ಲಿ ಸಿದ್ಧಿ ಪಡೆಯುವ ವಿಜ್ಞಾನಿ ಒಬ್ಬ, ಕೇಂದ್ರ ಆಡಳಿತದಲ್ಲಿ ಉನ್ನತ ಸ್ಥಾನವನ್ನು ಪಡೆಯುವ ರಾಜ ಪುರುಷ ಒಬ್ಬ, ಇವರ ನಿರ್ಮಾಣವನ್ನು ಕುರಿತಿರಬೇಕೆನ್ನುವುದು ಸಾಧುವಾದ ವಾದ ಅಲ್ಲ. ಅನ್ವೇಷಣದ ವಿಜ್ಞಾನಿ, ಆದರೆ ಇವರು ಬೇಕು ಎಂದು ನಾವು ಹೇಳುವುದು ನಾವೂ ಜಾಣರು ಎಂದು ಲೋಕಕ್ಕೆ ತೋರಿಸಿ ಕೊಡುವುದಕ್ಕಲ್ಲ. ನಮ್ಮ ಜನಾಂಗದ ಬುದ್ಧಿ ಜೀವನ, ರಾಜಕೀಯ ಜೀವನ, ಎತ್ತರವನ್ನು ಮುಟ್ಟಲಿ ಎನ್ನುವುದಕ್ಕಾಗಿ. ಇಂಗ್ಲೀಷು ಜನರ ಭಾಷೆ ಅಲ್ಲದಿರುವಾಗ ಆ ಭಾಷೆಯಲ್ಲಿ ಉನ್ನತಿಯನ್ನೇರಿದ ಇಂಗ್ಲೀಷ್ ವಿಜ್ಞಾನಿ, ಉನ್ನತಾಧಿಕಾರಿ ರಾಜಪುರುಷ, ಅವರ ಜನತೆಯ ಜೀವನದ ಒಂದು ಫಲ ಹೇಗಾದೀತು? ಇಂಗ್ಲೀಷನ್ನು ಕಲಿಯಲು ಬರುವ ಜನರ ಬುದ್ಧಿಯು, ಅನ್ವೇಷದ ವಿಜ್ಞಾನಿ ಬುದ್ಧಿಯು, ಹತ್ತು ಮಡಿ, ನೂರು ಮಡಿ ಬುದ್ಧಿ ರಾಷ್ಟ್ರದ ಜನತೆಯಲ್ಲಿದೆ. ಇಂಗ್ಲೀಷಿನ ಮೂಲಕ ಜನರ ಸೇವೆ ಮಾಡಬಲ್ಲ ಜನರ ಶಕ್ತಿಯ ಹತ್ತುಮಡಿ ನೂರುಮಡಿ ಶಕ್ತಿ ದೇಶದ ಜನತೆಯಲ್ಲಿ ಉಂಟು. ನಮ್ಮ ಜನಾಂಗ ಸಾಧಿಸಬಹುದಾದ ಶುಭವನ್ನೆಲ್ಲ ಸಾಧಿಸಬೇಕಾದರೆ ನಮ್ಮ ಅನ್ವೇಷಕರು, ನಮ್ಮ ರಾಜಪುರುಷರು, ನಮ್ಮ ಜನಾಂಗದ ಎಲ್ಲ ವರ್ಗದಿಂದ ಎಲ್ಲ ಅಂತಸ್ತುಗಳಿಂದ ಬರಬೇಕು. ಅನ್ವೇಷಣ ರಾಜಕಾರಣ, ಇಂಗ್ಲೀಷು ಕಲಿತವರಿಗೆ ಮಾತ್ರ ವಿಾಸಲು ಎಂದೆವಾದರೆ ನಮಗೆ ಈ ಗುರಿ ಸಿದ್ಧಿಸುವುದಿಲ್ಲ.

ನಮ್ಮ ಜನರಿಗೆ ನಾವು ಯಾವ ಶುಭವನ್ನು ಬಯಸುತ್ತಿದ್ದೇವೆ ಎಂಬ ವಿಷಯದಲ್ಲಿ ನಾವು ನಮ್ಮ ಕಲ್ಪನೆಯನ್ನು ನಿಷ್ಕೃಷ್ಟ ಮಾಡಿಕೊಳ್ಳಬೇಕು. ನಮ್ಮ ಜನತೆಗೆ ಬೇಕಾದದ್ದು ತುಂಬಿದ ಜೀವನ, ಸುಶಿಕ್ಷಿತ ಜೀವನ. ಆ ಜೀವನದಲ್ಲಿ ಭೌತಶಾಸ್ತ್ರದ ಅನ್ವೇಷಣ ಉನ್ನತ ರಾಜಕಾರಣಕ್ಕೆ ಎಡೆ ಇರಬೇಕು. ಆದರೆ ಇವುಗಳ ಜೊತೆಗೆ ಇವುಗಳ ಪರಿಧಿಯನ್ನು ಮೀರಿದ ಬಹುತೆರನ ಸಂಪತ್ತು ಇರಬೇಕು. ಆ ಸಂಪತ್ತಾದರೂ ಆ ಜೀವನದ ಅವಶ್ಯವಾದ ಅಂಗವಾಗಿ ಇರಬೇಕು. ಅದಕ್ಕೆ ಅಂಟಿ ಕಾಣುವ ಒಂದು ಅಲಂಕಾರ ಆಗಬಾರದು. ಆ ಸಂಪತ್ತಿನ ಉದ್ದೇಶ ಹೊರಗಿನ ಜನರ ಗಮನವನ್ನು ಸೆಳೆಯುವಷ್ಟು ಮಾತ್ರ ಆದರೆ ಸಾಲದು. ವಿದ್ಯೆ ಇಡೀ ನಮ್ಮ ಜನರಲ್ಲಿ ಈ ಸಂಪೂರ್ಣ ಜೀವನಕ್ಕೆ ಸಾಧನವಾಗುವಂತೆ

ವಾಸ್ತವ ಶಿಕ್ಷಣವಾಗಬೇಕು. ಎಂದರೆ ನಾವು ಅಂಗೀಕರಿಸಬೇಕಾದ ವಿದ್ಯಾಭ್ಯಾಸ ಕ್ರಮ ಯಾವುದು?

ಇಂಥ ಸಂಪೂರ್ಣ ಜೀವನ ಸಿದ್ಧಿಸಬೇಕೆಂದರೆ ಒಂದು ಸನ್ನಿವೇಶ ಅನಿವಾರ್ಯ: ಅದು ಯಾವುವೆಂದರೆ, ಜನಾಂಗದ ಅತ್ಯುತ್ತಮ ಚಿಂತನ ಅದರ ದೈನಂದಿನ ಜೀವನದ ಕ್ಷೇತ್ರದಲ್ಲಿ ನಡೆಯಬೇಕು; ಈ ದೈನಂದಿನ ಜೀವನ ಸಂತತವಾಗಿ ಆ ಅತ್ಯುತ್ತಮ ಚಿಂತನದಿಂದ ಪ್ರಗತಿ ಪಡೆಯುತ್ತಿರಬೇಕು, ಇದರ ಅರ್ಥ, ಜ್ಞಾನವನ್ನು ಕೊಡಬಲ್ಲವರು ಜ್ಞಾನವನ್ನು ಪಡೆಯಲಿರುವವರು, ಇವರ ಮಧ್ಯೆ. ಪೂರ್ಣ ಅವಿಚ್ಛಿನ್ನ ಆದ ಭಾವ ವಿನಿಮಯ ಇರಬೇಕು. ಎಂದರ ಜನಾಂಗ ಜೀವನ ಅಖಂಡವಾಗಿ ಒಂದಾಗಿರಬೇಕು. ಅತ್ಯುತ್ತಮ ವಿಚಾರ ಜಾಣರಿಂದ ಇಂಗ್ಲೀಷಿನಲ್ಲಿ ನಡೆಯುತ್ತ, ಅದರ ಅಲ್ಪಾಂಶ ದೇಶ ಭಾಷೆಗಳ ಮೂಲಕ ಸಾಮಾನ್ಯ ಜನರಿಗೆ ಬರಲಿ ಎಂದೆವಾದರೆ ಈ ಅಖಂಡ ಏಕ ಜೀವನ ಸಿದ್ಧಿಸುವುದಿಲ್ಲ. ನಾವೆಲ್ಲ ಇದನ್ನು ಮನಗಾಣಬೇಕು.

ಮಾತೃಭೂಮಿ ಪ್ರೇಮ ಸಾರ್ಥಕವೆನಿಸುವುದು ಆ ಭೂಮಿಯಲ್ಲಿ ಬಾಳುವ ಜನರ ಸೇವೆಯಲ್ಲಿ ತೊಡಗುವುದರಿಂದ. ಜನಾಂಗವನ್ನು ಉನ್ನತ ಸ್ಥಾನಕ್ಕೆ ಏರಿಸುವುದು ಎನ್ನುವುದು, ಜನಾಂಗದ ವ್ಯಕ್ತಿಗಳ ಉನ್ನತಿಯಿಂದ ಬೇರೆಯಾದ ಒಂದು ವ್ಯವಹಾರವಲ್ಲ. ಜನಾಂಗದ ಪ್ರತಿಯೊಬ್ಬ ವ್ಯಕ್ತಿಗೂ ಅದರ ಅತ್ಯುನ್ನತ ಚಿಂತನ ಲಭ್ಯವಾಗಿರಬೇಕು. ಒಬ್ಬೊಬ್ಬ ವ್ಯಕ್ತಿಯೂ ಅದನ್ನು ಪಡೆಯಲು ಬಯಸುತ್ತಾನೆ ಅಥವಾ ಯತ್ನಿಸುತ್ತಾನೆ ಎಂದಲ್ಲ; ಆದರೆ ಯಾವನು ಬಯಸಿದರೂ, ಯಾವನು ಯತ್ನಿಸಿದರೂ, ಅದನ್ನು ಪಡೆಯಬಹುದು ಎಂಬ ಸ್ಥಿತಿ ಇರಬೇಕು. ಇದರ ಮೇಲೂ ಒಂದು ಮಾತಿದೆ. ವ್ಯಕ್ತಿಗಳು ಬಯಸದೆಯೆ, ಯತ್ನಿಸದೆಯೆ ರಾಷ್ಟ್ರದ ಅತ್ಯುನ್ನತ ಚಿಂತನ ಅವರ ಭಾವನೆಯನ್ನು ರೂಪಿಸುವ ಸ್ಥಿತಿ ಇರಬೇಕು. ಈ ಸ್ಥಿತಿ ಇರಲಿ ಎನ್ನುವುದಾದರೆ ಆ ಅತ್ಯುನ್ನತದ ಚಿಂತನ ಜನರ ಭಾಷೆಯಲ್ಲಿ ನಡೆಯಬೇಕು.

ಇಂಗ್ಲೀಷನ್ನು ಸಮಸ್ತ ಜನತೆಯ ಮಾತೃ ಭಾಷೆಯಾಗಿ ಮಾಡುವುದು ಸಾಧ್ಯವಾಗಿತ್ತೇ, ಜಾಣರಾದ ಕೆಲವರಿಗೆ ಮಾತ್ರವಲ್ಲ. ಸಾಮಾನ್ಯರಾದ ಸಾವಿರಾರು ಜನರ ಕ್ಷೇಮಕ್ಕಾಗಿ ನಾವು ಅದನ್ನು ವಿದ್ಯೆಯ ಪ್ರಮುಖ ಭಾಷೆಯಾಗಿ ವರಿಸಬಹುದಾಗಿತ್ತು. ಆಗ್ಗೆ ಅದು ಶ್ರೇಷ್ಠ ರಾಜ ಪುರುಷರನ್ನು ನಿರ್ಮಿಸುವ ಹೊತ್ತಿನಲ್ಲೇ, ಜನರ ಜೀವನವನ್ನೂ ಮೇಲಕ್ಕೆ ಎತ್ತಬಹುದಾಗಿತ್ತು. ನೂರು ಇನ್ನೂರು ವರ್ಷ ಇಂಥ ವಿದ್ಯಾಭ್ಯಾಸ ಕ್ರಮ ವ್ಯವಹಾರದಲ್ಲಿದ್ದು ಒಂದು ರೀತಿಯ ಇಂಗ್ಲೀಷ್ ಭಾಷೆ ಜನಾಂಗದಲ್ಲಿ ಬಳಕೆಗೆ ಬಂದು ಉದ್ಯೋಗದಿಂದ ಬೆಳೆದು ರಾಷ್ಟ್ರದ ಏಕೈಕ ಭಾಷೆ ಆಗಿ ಮೆರೆಯಬಹುದಾಗಿತ್ತು. ನಾನು ಈ ವಾದವನ್ನು ಒಪ್ಪುತ್ತಿದ್ದೇನೆ ಎಂದು ಅರ್ಥ

ವಲ್ಲ. ನಮ್ಮ ದೇಶ ಭಾಷೆಗಳ ಸಾಹಿತ್ಯವನ್ನು ಕಳೆದುಕೊಳ್ಳುವುದು. ಹಾಗೆಯೆ ನಮ್ಮ ಬಹು ಸಾಮಾನ್ಯ ಜೀವನದ ಬಹುಸಾಮಾನ್ಯ ವಿವರಗಳಲ್ಲಿಯೂ ಬೆರೆತಿರುವ ಒಂದು ಸುಸೂಕ್ಷ್ಮ ನಯವಂತಿಯ ಬೇರುಗಳನ್ನು ಕಿತ್ತೆಸೆಯುವುದು ಶುಭ ಕರ್ಮ ಅಲ್ಲ. ಅದು ಒಂದು ನಷ್ಟವೆ ಹೌದು. ಆದರೂ ರಾಷ್ಟ್ರದ ಜೀವನದಲ್ಲಿ ಒಂದಾಗಲಿ ಎಂಬ ಉನ್ನತ ಧ್ಯೇಯದ ಸಲುವಾಗಿ ಇಂಗ್ಲೀಷು ನಮ್ಮ ಜನಾಂಗದ ಏಕೈಕ ಭಾಷೆಯಾಗಲಿ ಎಂದು ನಾವು ಅಪೇಕ್ಷಿಸಿ ಈ ನಷ್ಟವನ್ನು ಕಡೆಗಣಿಸಬಹುದಾಗಿತ್ತು. ಆದರೆ ಮಾಡುವುದೇನು? ಇಂಗ್ಲೀಷು ನಮ್ಮ ರಾಷ್ಟ್ರದ ಒಟ್ಟು ಜನಕ್ಕೆ ಮಾತೃಭಾಷೆ ಆಗುವುದು ಸಾಧ್ಯವಲ್ಲ. ರಾಷ್ಟ್ರದ ಮಕ್ಕಳನ್ನೆಲ್ಲ ನಿವಾಸ ಶಾಲೆಗಳಲ್ಲಿ ಬೆಳೆಸುವುದೂ, ಅಲ್ಲಿ ಉದಾತ್ತ ಸೇವಾಬುದ್ಧಿಯ ಅಧ್ಯಾಪಕಿಯರ ಮೂಲಕ ಶಿಕ್ಷಣ ಕೊಟ್ಟು ಮಕ್ಕಳಿಗೆಲ್ಲ ಇಂಗ್ಲೀಷು ಮಾತೃಭಾಷೆಗೆ ಸಮಾನವಾಗಿ ಪರಿಚಿತವಾಗುವಂತೆ ಮಾಡುವುದೂ ಸಾಧ್ಯವಲ್ಲ. ಆದ್ದರಿಂದ ಇಂಗ್ಲೀಷನ್ನೂ ಮಾತೃಭಾಷೆಗೆ ಸಮನಾಗುವ ಹಾಗೆ ಕಲಿಸುವ ಈ ಉದ್ಯಮವನ್ನು ತೊರೆದು ವಾಸ್ತವವಾಗಿ ಮಾತೃಭಾಷೆಗಳಾಗಿರುವ ಭಾಷೆಗಳ ಮೂಲಕ ವಿದ್ಯೆ ಕೊಡಲು "ಲಿಂಕ್ಸ್" ಮಹನೀಯರೂ ಸಮ್ಮತಿಸಬೇಕು.

ಈಗ ಹೇಳುತ್ತಿರುವ ಈ ಮಾತು ನಮ್ಮ ದೇಶ ಭ್ರಾತೃಗಳ ಹಲವಾರು ಅಭಿಪ್ರಾಯವನ್ನು ಸೂಚಿಸುವುದಾಗಿದೆ. "ದೇಶ ಭಾಷೆಗಳನ್ನು ಮುಖ್ಯ ಸ್ಥಾನಕ್ಕೆ ತರಬೇಕೆನ್ನುವವರು ಒಂದು ರೀತಿಯ ಅತಂತ್ರವಾದ ಸಂಕುಚಿತ ದೇಶಪ್ರೇಮದಿಂದ ಪ್ರೇರಣೆ ಪಡೆಯುತ್ತಾರೆ ಎನ್ನುವುದು ಬಹುಕಡೆ ಕಾಣುತ್ತದೆ" ಎಂದು ಲಿಂಕ್ಸ್ ಮಹನೀಯರು ಅಪ್ಪಣೆ ಕೊಡಿಸಿದ್ದಾರೆ. ಈ "ನಿಲುವಿನಿಂದ ಪ್ರಯೋಜನವಿಲ್ಲ. ದಿಟದಲ್ಲಿ ಯಾವುದು ಮುಖ್ಯ ಅದನ್ನು ಸಾಧಿಸಲು ನಾವು ತೊಡಗಬೇಕು". ಇದು ಅವರ ಬುದ್ಧಿವಾದ. ದೇಶ ಭಾಷೆಗಳನ್ನು ಪ್ರಮುಖ ಸ್ಥಾನಕ್ಕೆ ತರಬೇಕೆನ್ನುವವರು ಹಾಗೆನ್ನುವುದಕ್ಕೆ ಕಾರಣ ಅತಂತ್ರ ದೇಶಪ್ರೇಮ ಅಲ್ಲ. ಯಾವುದು ಮುಖ್ಯವೊ ಅದನ್ನು ಸಾಧಿಸೋಣ ಎಂಬ ಆಸೆಯೇ ಈ ಅಭಿಪ್ರಾಯದ ಕಾರಣ. ಹೀಗೆನ್ನುವವರ ಮನಸ್ಸಿಗೆ ಜನತೆಯ ತಿಳಿವಿನ ಮಟ್ಟ ಮೇಲಕ್ಕೆ ಏರುವುದು ಮುಖ್ಯ ಎನಿಸುತ್ತದೆ. ಹತ್ತು ಸಾವಿರದಲ್ಲಿ ಒಬ್ಬ ಭೌತಶಾಸ್ತ್ರ ಅನ್ವೇಷಕ ಎಂದು ಹೆಸರುಗಳಿಸುವುದು ಇದರಷ್ಟು ಮುಖ್ಯ ಅಲ್ಲ ಎನ್ನಿಸುತ್ತದೆ. ಜನತೆಯ ಜೀವನ ತುಂಬು ಜೀವನ ಆಗಬೇಕು. ಇದು ಮುಖ್ಯ. ಭಾಷೆ-ಭಾಷೆಯ ಮಧ್ಯೆ ಕಚ್ಚಾಟದಿಂದ ಕೇಂದ್ರ ಸರ್ಕಾರಕ್ಕೆ ತೊಂದರೆ ಆಗುತ್ತದೆ ಎನ್ನುವುದು ದೊಡ್ಡ ವಿಚಾರ ಅಲ್ಲ. ಲಿಂಕ್ಸ್ ಮಹಾಶಯರು ಇಂಗ್ಲೀಷ್ ಇರಲಿ ಎನ್ನುವುದು ವಿಸ್ತಾರವಾದ ಲೋಕ ಪ್ರೇಮದ ಸೋಗು ಅಷ್ಟೆ ಎಂದು ವಿರೋಧಿಯು ಹೇಳಬಹುದು; ಆ ಆರೋಪಣ ಸರಿಯಾಗುವುದಿಲ್ಲ. ಲಿಂಕ್ಸ್ ಅವರ ಆಶೆ ನಮ್ಮ ದೇಶಕ್ಕೆ ಲೋಕದ ಅತ್ಯುತ್ತಮ

ಜ್ಞಾನ ದೊರೆಯಲಿ ಎನ್ನುವುದು. ಭಾಷೆಗಳ ಪರವಾಗಿ ವಾದಿಸುವವರು ಲಿಂಕ್ಸ್ ರವರನ್ನು ಕುರಿತು ಈ ಮಾತನ್ನು ಒಪ್ಪುತ್ತಾರೆ. ಇಂಥವರು ನಮ್ಮಂಥ ಎದುರಾಳಿಯ ವಿಷಯ ಹೀಗೆಯೇ ಯೋಚನೆ ಮಾಡಬೇಕು. ಎದುರಾಳಿಯ ದೇಶಪ್ರೇಮ ಯಾವುದೇ ರೀತಿಯ ಅತಂತ್ರ ದೇಶಪ್ರೇಮ ಅಲ್ಲ. ಲಿಂಕ್ಸ್ ಮಹನೀಯರ ದೇಶಪ್ರೇಮದಷ್ಟೇ ಸಾಧುವಾದದ್ದು, ಯುಕ್ತವಾದದ್ದು, ದೇಶದ ಪ್ರೇಮವನ್ನು ಕುರಿತು ಎದುರಾಳಿ ತಮ್ಮಂತೆಯೇ ಎಚ್ಚರದಿಂದ ಕಾತರವಾಗಿ ಯೋಚಿಸುತ್ತಾನೆ ಎಂದು ಲಿಂಕ್ಸ್ ಮಹನೀಯರು ಮನಗಾಣಬೇಕು.

ಸಧ್ಯದಲ್ಲಿ ನಮ್ಮ ರಾಷ್ಟ್ರಜೀವನದಲ್ಲಿ ಇಂಗ್ಲೀಷಿನಿಂದ ಮಾತ್ರ ಆಗಬಲ್ಲ ಕೆಲಸ ಒಂದಷ್ಟಿದೆ. ವಿದ್ಯಾಭ್ಯಾಸದಲ್ಲಿ ಇಂಗ್ಲೀಷಿಗೆ ಎರಡನೆಯ ಸ್ಥಾನವನ್ನು ಕೊಟ್ಟರೆ ಹಾಗೆ ಕಲಿಯುವ ಇಂಗ್ಲೀಷು ಈ ಕೆಲಸಕ್ಕೆ ಸಾಕಾಗುತ್ತದೆ. ಇಂಗ್ಲೀಷನ್ನು ಮೊದಲ ಭಾಷೆಯಾಗಿ ಇಟ್ಟುಕೊಂಡು ಇಷ್ಟು ದಿನ ನೋಡಿದ್ದಾರೆ. ಅದರಿಂದ ನಮ್ಮ ಗುರಿ ಸಾಧಿಸಲಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಆದ್ದರಿಂದ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಥಮ ಸ್ಥಾನ ನಮ್ಮ ಭಾಷೆಗಳಿಗೇ ಇರಬೇಕು. ಪ್ರತಿಪಕ್ಷದವರು ಹೇಳುತ್ತಾರೆ: "ಇದು ಬಹಳ ಕಷ್ಟದ ಕೆಲಸ." ದಿಟ; ಈ ಉದ್ಯಮ ಸುಲಭವಲ್ಲ. ಆದರೆ ಇಂಗ್ಲೀಷನ್ನು ಜನತೆಯ ಪಾಲಿಗೆ ದೇಶ ಭಾಷೆಗಳಂತೆಯೇ ಸುಲಭ ಮಾಡುತ್ತೇವೆ ಎನ್ನುವ ಉದ್ಯಮ ಇದಕ್ಕೂ ಹೆಚ್ಚಿನ ಕಷ್ಟದ ಉದ್ಯಮ.

ದೇಶ ಭಾಷೆಗಳನ್ನು ಮುಖ್ಯ ಭಾಷೆಗಳನ್ನಾಗಿ ಮಾಡಿಕೊಳ್ಳುವ ಬಗ್ಗೆ ಈ ಹಿರಿಯರು ಹೇಳುವ ಕಷ್ಟಗಳೇನು? ಅದನ್ನು ನೋಡೋಣ. ಮೊದಲ ಅಡ್ಡಿ, ಭಾಷೆಗಳಲ್ಲಿ ಪಠ್ಯಪುಸ್ತಕಗಳಿಲ್ಲ ಎನ್ನುವುದು ಆದರೆ ನಮ್ಮ ಭಾಷೆಗಳಲ್ಲಿ ಪಾಠ ಹೇಳಲು ಆರಂಭಿಸಿದರೆ, ಲೇಖಕರು ಪಠ್ಯಪುಸ್ತಕಗಳನ್ನು ಬರೆಯುತ್ತಾರೆ; ಪ್ರಕಾಶಕರು ಅವನ್ನು ಪ್ರಕಟಿಸುತ್ತಾರೆ. ಇದು ಆಗುವುದಕ್ಕೆ ಸ್ವಲ್ಪ ತಡ ಆಗಬಹುದು. ಅದುವರೆಗೆ ಪಾಠದ ವಿಷಯ ಏನು ಎನ್ನುವುದರ ಒಂದು ಹೆಗ್ಗುರುತು ಸಾಕಾಗುತ್ತದೆ. ಆ ಹೆಗ್ಗುರುತು ನಮ್ಮ ಭಾಷೆಗಳಲ್ಲೇ ಇರಬೇಕು ಎನ್ನುವುದೂ ಇಲ್ಲ. ರಾಸ್ಕೋ ಪಂಡಿತನ ಕೆಮಿಸ್ಟ್ರಿ ಸರಳ ಪಾಠವನ್ನು ಕೈಯಲ್ಲಿರಿಸಿಕೊಂಡು ಉಪಾಧ್ಯಾಯರು ತಮ್ಮ ಭಾಷೆಯಲ್ಲಿ ಪಾಠ ಹೇಳಬಹುದು. ಎರಡನೆಯ ಆಕ್ಷೇಪ, ಪಾಶ್ಚಾತ್ಯ ಭಾಷೆಗಳಾದ ದೇಶ ಭಾಷೆಗಳಿಗೆ ಪಠ್ಯ ಗ್ರಂಥಗಳನ್ನು ಭಾಷಾಂತರಿಸುವುದು ಬಹು ಶ್ರಮದ ಕೆಲಸ, ಎನ್ನುವುದು. ಇದು ಬಹು ಶ್ರಮದ ಕೆಲಸ ಸರಿ. ಆದರೆ ಜನತೆಯಲ್ಲ ಆ ಪುಸ್ತಕಗಳನ್ನು ಅವು ಇರುವ ಭಾಷೆಯಲ್ಲೇ ಓದುವಂತೆ ಮಾಡೋಣ ಎನ್ನುವುದು ಇದಕ್ಕಿಂತ ಹೆಚ್ಚು ಶ್ರಮದ ಕೆಲಸ. ಭೌತಶಾಸ್ತ್ರಗಳ ಪಾರಿಭಾಷಿಕ ಭಾವನೆಗಳಿಗೆ ತಕ್ಕ ಶಬ್ದಗಳನ್ನು ಎಲ್ಲಿಂದ ತರುವುದು ಎನ್ನುವುದು ಮೂರನೇ ಅಡ್ಡಿ, ಇದು ಸರಿ, ಆದರೆ ತರುವುದು ಅಸಾಧ್ಯ ಅಲ್ಲ. ನಾವು

ಈ ವಿಷಯದಲ್ಲಿ ಯಾವುದೇ ಯತ್ನವನ್ನೂ ಮಾಡಿಲ್ಲ. ಯತ್ನವನ್ನೇ ಮಾಡದೆ ಕೆಲಸ ಕಷ್ಟ ಎನ್ನುವುದು ಯುಕ್ತವಲ್ಲ.

ನಮ್ಮ ಭಾಷೆಗಳು ಹೊಸಕಾಲದ ವಿಷಯುಗಳನ್ನೆಲ್ಲ ಕಲಿಸಲು ಸಕ್ಷಮವಾದ ಸ್ಥಿತಿಯನ್ನು ಮುಟ್ಟಿಲ್ಲ ಎನ್ನುವುದು ದಿಟ. ಈ ವಿಷಯಗಳನ್ನು ನಮ್ಮ ಭಾಷೆಗಳ ಮೂಲಕ ಕಲಿಸೋಣ ಎಂದು ನಾವು ಈ ವರೆಗೆ ಯೋಚಿಸಲಿಲ್ಲ. ಯೋಚಿಸಿದೆವಾದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ಭಾಷೆಗಳ ಪಾರಿಭಾಷಿಕಗಳಿಗೆ ಪ್ರತಿಯಾಗಿ ಪಾರಿಭಾಷಕ ಶಬ್ದಗಳು ನಮ್ಮ ಭಾಷೆಗಳಿಗೆ ಇಲ್ಲವಾದರೂ ಆ ಭಾಷೆಗಳಲ್ಲಿ ಹೇಳುವ ಉಳಿದೆಲ್ಲ ವಿಷಯಗಳನ್ನೂ ನಮ್ಮ ಮುಖ್ಯ ಭಾಷೆಗಳಲ್ಲೆಲ್ಲ ಕಷ್ಟವಿಲ್ಲದೆ ಹೇಳಬಹುದು. ಪಾರಿಭಾಷಿಕ ಶಬ್ದಗಳಿಗೆ ನಮ್ಮ ಭಾಷೆಯಲ್ಲಿ ಅರ್ಥವನ್ನು ವಿವರಿಸಿ ಹೇಳಬೇಕಾಗುತ್ತದೆ. ಲಾಂಜಿಟ್ಯೂಡ್–ಲ್ಯಾಟಿಟ್ಯೂಟ್', ರೈಟ್ ಆ್ಯಂಗಲ್ ಡಯಾಮೀಟರ್, ಇಂಗ್ಲೀಷ್‌ನಲ್ಲಿ ಪಾಠ ಕೇಳಿ ಈ ಶಬ್ದಗಳು ನಮ್ಮ ಕಿವಿಗೆ ಪರಿಚಿತವಾಗಿವೆ. ಅಕ್ಷ, ವ್ಯಾಸ, ಕೋಣ, ರೇಖಾಂಶ ಮುಂತಾದ ಪದಗಳು ಇನ್ನು ಮೇಲೆ ಕಿವಿಗೆ ಬೀಳಬೇಕು, ಪರಿಚಿತವಾಗಬೇಕು. ಅದುವರೆಗೆ ವಿಚಿತ್ರವಾಗಿ ಕೇಳುತ್ತವೆ. ಈಗ ಸದ್ಯಕ್ಕೆ ಎಲ್ಲಿಯೂ ಅರ್ಥವಿವರಣೆ ಅವಶ್ಯಕ. ಅವುಗಳ ಪರಿಚಯ ವಾಡಿಕೆಯಿಂದ ಬರಬೇಕು. ಅದುವರೆಗೆ ಅವನ್ನು ಪಾಠದಲ್ಲಿ ಕೇಳುವ ಕಿವಿಗೆ ಅವು ಯಾವ ಅರ್ಥವನ್ನೂ ತರುವುದಿಲ್ಲ. ಇದರಲ್ಲೇನೂ ಆಶ್ಚರ್ಯವಿಲ್ಲ. ಕನ್ನಡವನ್ನು ಕಲಿಸುವುದಕ್ಕೆ ಇಂಗ್ಲೀಷ್ ಭಾಷೆಯನ್ನು ಬಳಸುತ್ತ ಕದಳೀ ಫಲ ಎಂದರೆ a kind of fruit ಎಂದೂ ಭೃಂಗ ಎಂದರೆ a kind of musical insect ಎಂದೂ ಅರ್ಥ ಹೇಳುವ ಈ ದಿನದಲ್ಲಿ ಅಕ್ಷಾಂಶ, ರೇಖಾಂಶ ಎಂಬ ಪಾರಿಭಾಷಿಕ ಶಬ್ದಗಳಿಗೆ ಅರ್ಥವಿವರಣೆ ಬೇಕಾಯಿತಲ್ಲಾ ಎಂದು ಶೋಕಿಸೋಣವೆ? ಕನ್ನಡದಲ್ಲಿ ಮಾತನಾಡುವುದಿಲ್ಲ. ಕನ್ನಡ ಪುಸ್ತಕಗಳನ್ನು ಓದುವುದಿಲ್ಲ. ಈ ಶಬ್ದಗಳು ತಿಳಿಯಬೇಕು ಹೇಗೆ? ಕದಳೀ ಫಲ, ಭೃಂಗ ನಾವು ಕಂಡ ವಸ್ತುಗಳು. ಅಕ್ಷಾಂಶ, ರೇಖಾಂಶ ಇಂಥವೇನೂ ಅಲ್ಲ, ಕದಳೀ ಭೃಂಗಕ್ಕೆ ಆ ಗತಿ ಬಂದರೆ ಅಕ್ಷಾಂಶಗಳ ಪಾಡು ತಳಮಳಕ್ಕೆ ಕಾರಣವಾಗಬಾರದು.

ಸಧ್ಯದಲ್ಲಿ ನಮ್ಮ ಭಾಷೆಗಳಲ್ಲಿ ದೊರೆಯುವ ಪಠ್ಯಪುಸ್ತಕಗಳು ಚೆನ್ನಾಗಿಲ್ಲವೆಂದು ಲಿಂಕ್ಸ್ ಮಹಾಶಯರು ಅತೃಪ್ತಿ ಸೂಚಿಸಿದ್ದಾರೆ. ಈ ಅತೃಪ್ತಿ ನ್ಯಾಯ ಎನ್ನಬಹುದು. ಆದರೆ ಇದರ ಹೊಣೆ ಆ ಪುಸ್ತಕಗಳನ್ನು ಬರೆಯುತ್ತಿರುವ ಬಡಪಾಯಿ ಲೇಖಕರದಲ್ಲ. ಅವರು ಆ ಸಮಯಕ್ಕೆ ಒದಗುವ ಒಂದು ಪದವನ್ನು ಬಳಸಿ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗಿದೆ. ಆ ಪದ ಹತ್ತು ಸಲ ಕಿವಿಗೆ ಬಿದ್ದು ಬಳಕೆಯಿಂದ ನಾಣ್ಯವಾದ ಮೇಲಲ್ಲವೆ ಅದಕ್ಕೆ ಒಂದು ಸ್ಥಾನ ದೊರೆಯುವುದು? ಸದ್ಯ ಈ ಬಳಕೆಗೆ ಅವಕಾಶವೇ ಇಲ್ಲವಾಗಿದೆ. ಇಂಥ

ವಿಷಯಗಳನ್ನು ಹೇಳುವುದಕ್ಕೆ ನಾವು ನಮ್ಮ ಭಾಷೆಗಳನ್ನು ಈ ಮುನ್ನ ಉಪಯೋಗಿಸಿದ್ದರೆ ಈ ಭಾವಗಳನ್ನೂ ವಸ್ತುಗಳನ್ನೂ ನಿರ್ದೇಶಿಸಲು ಪದಗಳು ಒಂದು ಭಾಷೆಯಲ್ಲಿ ಬೆರೆಯುತ್ತಿದ್ದುವು. ನಮ್ಮ ಭಾಷೆಗಳು ಸಂಪದ್ಯುಕ್ತ ಆಗುತ್ತಿದ್ದುವು. ಆ ಯತ್ನ ನಡೆಯಲಿಲ್ಲ. ನಮ್ಮ ಭಾಷೆಗಳೋ ಇರುವ ಮಾತುಗಳನ್ನೂ ಕಳೆದುಕೊಂಡು ಅನ್ಯ ಭಾಷೆಗಳ ರಿಕ್ತಸ್ಥಿತಿಯನ್ನು ಸಾರಲು ಹೊರಟಿವೆ. ದೇಶ ಭಾಷೆಗಳಲ್ಲಿ ಬರೆಯುವುದು, ವಿವರಣೆ ಮಾಡುವುದು ಅವಶ್ಯಕವೆನ್ನುವುದು ಒಮ್ಮೆ ಒಪ್ಪಿಗೆ ಆಗಲಿ; ನಿಷ್ಕೃಷ್ಟ ಪದಗಳು ನಿಷ್ಕೃಷ್ಟ ಅರ್ಥಗಳಲ್ಲಿ ಬಳಕೆಗೆ ಬರಲಿ; ಇಂಗ್ಲೀಷಿನಲ್ಲಿ ಬರಿಯ ಮಾತಾಗಿ ನಾವು ನಡೆಸುವ ಚರ್ಚೆಗಳು ಹೇಗೋ ಕನ್ನಡದಲ್ಲಿ ನಡೆಯುವುದು ಆರಂಭವಾಗಲಿ. ಆಗ ನಮಗೆ ಒಡನೆ ಒಂದು ವಿಷಯ ಸ್ಪಷ್ಟವಾಗುತ್ತದೆ. ನಮ್ಮ ಭಾಷೆಗಳು ನಾವು ಭ್ರಮಿಸುವಷ್ಟು ಶಬ್ದ ದರಿದ್ರ ಭಾಷೆಗಳಲ್ಲ. ಬಹು ವಿಷಯಗಳಲ್ಲಿ ಅವು ಸುಮಾರು ಇಂಗ್ಲೀಷಿನಷ್ಟೆ ದಕ್ಷವಾಗಿ ಅರ್ಥವನ್ನು ಪ್ರಕಟಿಸಬಲ್ಲವು. ಅವು ಇದಕ್ಕೂ ಹೆಚ್ಚಿನ ಶಕ್ತಿಯನ್ನೂ ಪಡೆಯುವುದು ಅಸಾಧ್ಯವಲ್ಲ. ಅದು ನಮ್ಮ ಯೋಗ್ಯತೆಯನ್ನು ಅವಲಂಬಿಸಿದೆ. ನಮ್ಮಲ್ಲಿ ಭಾವನೆಗಳಿರುವುದು ದಿಟವಾದರೆ ಅದನ್ನು ಪ್ರಕಟಿಸಲು ನಮಗೆ ಪದಗಳು ಒದಗುತ್ತವೆ.

ದೇಶ ಭಾಷೆಗಳಲ್ಲಿಯೇ ವಿದ್ಯೆ ಹೇಳಬೇಕು ಎಂಬ ಸೂತ್ರ ಒಂದು ವಿವರದಲ್ಲಿ ಮಾತ್ರ ಸ್ವಲ್ಪ ತೊಂದರೆಕೊಡುವ ಸಂಭವ ಇದೆ. ದೊಡ್ಡ ನಗರಗಳಲ್ಲಿ ಬಳಕೆಯಲ್ಲಿರುವ ಹಲವು ದೇಶ ಭಾಷೆಗಳಲ್ಲಿ ಪಾಠ ಹೇಳಲು ಏನು ಏರ್ಪಾಡು? ಲಿಂಕ್ಸ್ ಮಹನೀಯರು ಇದು ಅಸಾಧ್ಯ ಕಾರ್ಯ ಎಂದು ನಿಶ್ಚಯಿಸಿಕೊಂಡಿದ್ದಾರೆ. ದೇಶ ಭಾಷೆಬೇಕು ಎನ್ನುವವರು ಇದಕ್ಕೆ ಉತ್ತರ ಹೇಳಿ ಎಂದು ಮಾತನ್ನು ಮುಗಿಸಿದ್ದಾರೆ. ಮದರಾಸ್ ಈ ಕಷ್ಟಕ್ಕೆ ಉದಾಹರಣೆ ಆಗುತ್ತದೆ ಎಂದಿದ್ದಾರೆ. ಈ ವಿಷಯವನ್ನು ಈಗ ನಾನು ಪೂರ್ಣವಾಗಿ ಚರ್ಚಿಸಹೋಗುವುದಿಲ್ಲ. ಇಷ್ಟನ್ನು ಮಾತ್ರ ಹೇಳುತ್ತೇನೆ. ಇದನ್ನು ನಿರ್ವಹಿಸುವುದು ಸಾಧ್ಯ ಮಾರ್ಗವೇ ಏನು ಎಂದರೆ ಸಂಗ್ರಹವಾಗಿ ಸೂಚಿಸುತ್ತೇನೆ. ಮದರಾಸನ್ನೇ ತೆಗೆದುಕೊಳ್ಳೋಣ. ಮದರಾಸಿನಲ್ಲಿ ಈಗ ಅನೇಕ ಕಾಲೇಜುಗಳಿವೆ. ವಿದ್ಯಾರ್ಥಿಯ ದೇಶಭಾಷೆ ಯಾವುದೇ ಆಗಿರಲಿ ಅವನಿಗೆ ಯಾವ ಕಾಲೇಜಿನಲ್ಲೂ ಸ್ಥಳವುಂಟು. ದೇಶಭಾಷೆಗಳಲ್ಲಿ ಪಾಠ ಹೇಳುವ ಕ್ರಮ ಬಳಕೆಗೆ ಬಂದಾಗ ಈ ಕಾಲೇಜುಗಳು ನಗರದ ನಿವಾಸಿಗಳ ದೊಡ್ಡ ಸಂಖ್ಯೆಯ ನಾಲ್ಕು ಭಾಷೆಗಳಲ್ಲಿ ಪಾಠ ಹೇಳುವ ಕೆಲಸವನ್ನು ಹಂಚಿಕೊಳ್ಳಬೇಕು. ಕೆಲವು ಶಾಲೆ ಕಾಲೇಜುಗಳು, ತೆಲುಗಿನಲ್ಲಿ ಇನ್ನು ಕೆಲವು ತಮಿಳಿನಲ್ಲಿ. ಇತ್ಯಾದಿ ಈ ಸಮಸ್ಯೆ ಇಂಥ ನಗರಗಳಲ್ಲಿ ಮಾತ್ರ ಏಳುತ್ತವೆ

ಎನ್ನುವುದಂತೂ ಸ್ಪಷ್ಟವೇ. ಪ್ರದೇಶಗಳನ್ನು ಭಾಷೆಗಳಿಗೆ ಅನುಗುಣವಾಗಿ ವಿಂಗಡಿಸಬೇಕು. ಬಹುಜನ ಮಾತನಾಡುವ ಎರಡೊ ಮೂರೊ ಭಾಷೆಗಳನ್ನು ಅವುಗಳಲ್ಲಿ ವಿದ್ಯೆ ಕಲಿಸುವ ಭಾಷೆಗಳಾಗಿ ಎಣಿಸಬೇಕು.

ದೊಡ್ಡ ನಗರಗಳಲ್ಲಿ ಹೊರತಾಗಿ ಎಲ್ಲ ಕಡೆ ಪ್ರಾಂತದ ಭಾಷೆ ಅಲ್ಲದೆ ಬೇರೆ ಭಾಷೆಗಳಲ್ಲಿ ಪಾಠ ಹೇಳುವ ಅವಶ್ಯಕತೆ ಇರುವುದಿಲ್ಲ. ಉದಾಹರಣೆಗಾಗಿ ಮೈಸೂರು ದೇಶವನ್ನು ತೆಗೆದುಕೊಳ್ಳಬಹುದು. ಇಲ್ಲಿ ಕನ್ನಡದಲ್ಲಿ ಹೊರತು ಬೇರೆ ಯಾವುದೇ ಭಾಷೆಯಲ್ಲಿ ಪಾಠ ಕಲಿಸುವ ಅವಶ್ಯಕತೆ ಇರುವುದಿಲ್ಲ. ಹಿಂದುಸ್ಥಾನಿ ಶಾಲೆಗಳಲ್ಲಿ ಹೊರತು ಕೆಳಗಿನ ಶಾಲೆಗಳಲ್ಲಿ ಈಗ ಇದೇ ವ್ಯವಸ್ಥೆ ಇದೆ. ಬೇರೆ ಭಾಷೆ ಮನೆಮಾತಾದ ಸ್ವಲ್ಪ ಸಂಖ್ಯೆಯ ಜನರಿಗೆ ಇದು ಅಸಮಾಧಾನ ಉಂಟುಮಾಡುವುದಿಲ್ಲವೆ ಎನ್ನಬಹುದು. ಸ್ವಲ್ಪ ವಿಚಾರ ಮಾಡಿ ನೋಡಿದರೆ ಅಸಮಾಧಾನಕ್ಕೆ ಕಾರಣವಿಲ್ಲ ಎನ್ನುವುದು ಕಾಣುತ್ತದೆ. ತೆಲುಗೊ ತಮಿಳೊ ಮನೆ ಮಾತಾದ ಮೈಸೂರ ನಿವಾಸಿ ಕನ್ನಡದಲ್ಲಿ ಪಾಠ ಕಲಿಯುತ್ತಾನೆ. ಇಂಗ್ಲೀಷನ್ನು ಎರಡನೆಯ ಭಾಷೆಯಾಗಿ ಕಲಿಯುತ್ತಾನೆ. ಅವನ ಮನೆ ಮಾತು ಅವನು ಶಾಲೆಯಲ್ಲಿ ಕಲಿಯುವ ವಿದ್ಯೆಯಲ್ಲಿ ಸೇರುವುದಿಲ್ಲ. ಮೈಸೂರು ನಿವಾಸಿಗಳಾದ ತೆಲುಗು ಮಾತಿನ, ತಮಿಳು ಮಾತಿನ ಜನರ ಸ್ಥಿತಿ ಈಗ ಹೀಗೆಯೆ ಇದೆ. ಇದರಿಂದ ಅವರಿಗೆ ಕೆಡಕೇನೂ ಆಗಿಲ್ಲ. ಅವರು ಮುಖ್ಯ ಎಂದು ಕಲಿಯುವ ಕನ್ನಡ ಭಾಷೆ ಅವರ ಮನೆಯ ಭಾಷೆಗೆ ಬಂಧುವಾದ ಭಾಷೆ. ಹರೆಯ ಬಂದಮೇಲೆ ಆ ಭಾಷೆಯನ್ನೂ ಕಲಿಯಬೇಕೆಂದು ಬಯಸಿದರೆ ಇವರು ಕಲಿತಿರುವ ಕನ್ನಡ ಅವರ ಮನೆಯ ಭಾಷೆಯನ್ನು ಕಲಿಯುವುದಕ್ಕೆ ನೆರವಾಗುತ್ತದೆ. ಈ ಸಮಾಧಾನ ಹಿಂದುಸ್ಥಾನಿಗೆ ಅನ್ವಯಿಸುವುದಿಲ್ಲ. ಆದರೂ ಮೇಲೆ ಹೇಳಿರುವ ಕ್ರಮದಿಂದ ವ್ಯವಸ್ಥೆ ಮಾಡಿದರೆ ಈ ಭಾಷೆಗಳ ಸಮಸ್ಯೆ ದಿಟದಲ್ಲಿ ಇಷ್ಟು ಕಷ್ಟದ್ದಲ್ಲ ಎಂದು ಕಾಣುವುದು. ಇಷ್ಟಾದ ಮೇಲೂ ಸ್ವಲ್ಪ ಅನಾನುಕೂಲ ಇರುವುದಾದರೆ ಅದು ಕೆಲವು ವಿಶಿಷ್ಟ ಜನರ ಬಹು ಅಲ್ಪ ಸಂಖ್ಯೆಯನ್ನು ಕುರಿತಿರುತ್ತದೆ. ಪ್ರಾಂತದ ಒಟ್ಟು ಜನರ ಕ್ಷೇಮವನ್ನು ಸಾಧಿಸುವ ಇಂಥ ವ್ಯವಸ್ಥೆಯನ್ನು ಬಹು ಅಲ್ಪ ಸಂಖ್ಯೆಯ ಇಂಥ ವಿಶಿಷ್ಟ ಸಮುದಾಯ ಒಪ್ಪಿ ಕೊಳ್ಳಬೇಕು.

ಒಂದೊಂದು ಪ್ರಾಂತದಲ್ಲಿ ವಿದ್ಯೆ ಅದರ ಭಾಷೆಯಲ್ಲೇ ನಡೆಯುವುದರಿಂದ ಸಂಕುಚಿತ ಮನೋಧರ್ಮ ಬೆಳೆಯುತ್ತದೆ ಎನ್ನುವ ಭಯಕ್ಕೆ ನಾವು ಹೇಳಬಹುದಾದ ಉತ್ತರ ಇಷ್ಟೆ. ಇಡೀ ಜನತೆಯೇ ಜಾಣಾಗಬೇಕೆಂದರೆ ಪ್ರಾಂತ ಭಾಷೆಗಳಲ್ಲಿ ಎಲ್ಲ ಪಾಠವೂ ನಡೆಯಬೇಕು. ಎಲ್ಲಪಾಠವೂ ಹೀಗೆ ನಡೆದಿದ್ದರಿಂದ ಸಂಕುಚಿತ ಮನೋಧರ್ಮ ಬೆಳೆಯುತ್ತದೆ ಎನ್ನುವುದಾದರೆ ವಿದ್ಯಾಭ್ಯಾಸ

ಕ್ರಮ: ಈ ಅಪಾಯವನ್ನು ಗಮನಕ್ಕೆ ತಂದುಕೊಂಡು ಅದು ಸಂಭವಿಸದಂತೆ ಎಚ್ಚರದಿಂದ ದಕ್ಷತೆಯಿಂದ ನಡೆದುಕೊಳ್ಳಬೇಕು. ಇಂಗ್ಲೀಷನ್ನು ಪ್ರಥಮ ಭಾಷೆಯಾಗಿಟ್ಟುಕೊಂಡಿರುವ ಇಂದಿನ ದಿನಗಳಲ್ಲಿ ಸಂಕುಚಿತ ಮನೋಧರ್ಮ ತೀರ ಇಲ್ಲದೆ ಹೋಗಿಲ್ಲ. ಮೇಲಾಗಿ ಇಂಗ್ಲೀಷಿನಿಂದ ನಮಗೆ ಬರುವುದು ಎಂದು ನಾವು ಹೇಳಿಕೊಳ್ಳುವ ಸಂಸ್ಕೃತಿ ಎನ್ನುವುದು ಬರಿಯ ಮೇಲೆ ಸವರಿದ ಒಂದು ಲೇಪ ಅಷ್ಟೆ. ಇದನ್ನು ನಾವು ಧ್ಯಾನಗಾಣಬೇಕು. ಈ ಲೇಪವನ್ನು ಪಡೆಯುವುದರಲ್ಲಿ ನಾವು ನಿಜವಾಗಿ ನಮ್ಮದಾಗಿದ್ದ ನಮ್ಮ ಸಂಸ್ಕೃತಿಯನ್ನು ಕಳೆದುಕೊಂಡಿದ್ದೇವೆ. ಅದರ ಸ್ಥಾನದಲ್ಲಿ ಅಷ್ಟೆ ದಿಟವಾದ ಇನ್ನೊಂದು ಸಂಸ್ಕೃತಿಯನ್ನು ಗಳಿಸದೆ ಇದ್ದೇವೆ. ನಮ್ಮ ಹೊಸ ಸಂಸ್ಕೃತಿ ಬರಿಯ ಲೇಪವಾಗುವುದಕ್ಕೆ ಕಾರಣ ಅದರ ಹಿಂದೆ ಅಡಗಿರುವ ನಮ್ಮ ಸ್ವಂತ ಸಂಸ್ಕೃತಿ ನಿರ್ಜೀವವಾಗಿರುವುದು. ರೋಗಿಯ ಚರ್ಮ ಇಷ್ಟು ಬಿಳಿಚಿಕೊಂಡಿದೆ: ಅದರ ವರ್ಣಹೀನತೆ ತನ್ನ ಮೇಲೆ ಹಚ್ಚಿದ ಬಣ್ಣವನ್ನು ಧಿಕ್ಕರಿಸುತ್ತದೆ. ನಾವು ಈ ದಾರಿಯನ್ನು ಬಿಟ್ಟು ಬೇರೆ ದಾರಿಯನ್ನು ಹಿಡಿದು ಸಂಸ್ಕಾರದ ಸಾಮಗ್ರಿಯನ್ನು ಸಂಸ್ಕೃತಿಯ ಮೂಲಗಳನ್ನು ಒಟ್ಟು ಜನತೆಯ ಸ್ವತ್ತಾಗಿ ಮಾಡಿ ಜನತೆ ತನ್ನ ಸಂಸ್ಕೃತಿಯನ್ನು ತಾನೆ ರೂಪಿಸಿಕೊಳ್ಳಲು ಬಿಟ್ಟೆವು ಎನ್ನೋಣ. ಆ ಸಂಸ್ಕೃತಿ ಯಾವ ಆಕಾರವನ್ನು ಪಡೆದರೂ ಸರಿ, ಅದು ಉನ್ನತವಾಗಿರುತ್ತದೆ, ಶ್ರೇಷ್ಠವಾಗಿರುತ್ತದೆ. ಈ ವಿಷಯದಲ್ಲಿ ಸಂಶಯವಿಲ್ಲ. ಸಂಶಯ ಇದೆ, ಎಂದು ಯಾರಾದರೂ ಹೇಳುವುದಾದರೆ ಅದಕ್ಕೆ ಉತ್ತರ ಇದೇ. ಒಟ್ಟು ಜನತೆ ಹೀಗೆ ದಾರಿಬಿಡುವ ಅಪಾಯ ಇದೆಯಾದರೆ ಅದರಲ್ಲಿ ಒಂದು ನೂರೂ ಜನ ತಮ್ಮ ವಿದ್ಯೆಯ ದಿನದಲ್ಲಿ ನೂರೊ ಇನ್ನೂರೊ ಇಂಗ್ಲೀಷ್ ಪುಸ್ತಕಗಳನ್ನು ಓದಿದರೆಂಬಷ್ಟರಿಂದ ಈ ಜನತೆಯ ಸಂಸ್ಕೃತಿ ಉನ್ನತವಾಗುವುದಿಲ್ಲ. ನಮ್ಮ ಏಳಿಗೆಗೆ ಸಾಧನವಾಗುವಂತೆ ನಮ್ಮ ವಿದ್ಯಾವಂತರು ಇಂಗ್ಲೀಷಿನ ಅತ್ಯುತ್ತಮ ವಿಚಾರಗಳ ಪರಿಚಯವನ್ನು ಪಡೆಯುತ್ತಿರಬೇಕು. ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿತರೆ ಈ ಉದ್ದೇಶ ಸಿದ್ಧಿಸುತ್ತದೆ. ಇಂಗ್ಲೀಷು ಎಲ್ಲ ಪಾಠಗಳನ್ನು ಕಲಿಸುವ ಭಾಷೆಯಾಗದೆ ಕಲಿಯುವ ಒಂದು ಭಾಷೆಯಾಗಿರುವುದನ್ನು ನಾವು ಒಪ್ಪುತ್ತೇವೆ. ಇಂಗ್ಲೀಷನ್ನು ಹೀಗೆ ಕಲಿತರೆ ಅದರ ಅತ್ಯುತ್ತಮ ವಿಚಾರದ ಸಂಪರ್ಕದಿಂದ ಪ್ರಯೋಜನ ಪಡೆಯುವುದು ಸಾಧ್ಯ ಆಗಿರುತ್ತದೆ. ಇದು ನಾವು ಬಯಸುವ ಮುಂಬರಿವಿನ ಆಶ್ವಾಸನೆ. ನಮ್ಮ ಜನತೆಯ ಸಹಜ ಪ್ರವೃತ್ತಿ ಈ ಸಹಾಯವನ್ನು ಬಳಸಿಕೊಂಡು ಮತ್ತೆ ಮತ್ತೆ ಮುಂಬರಿವನ್ನು ಸಾಧಿಸಿಕೊಂಡು ಅದನ್ನು ಸಂಸ್ಕೃತಿಯ ಉನ್ನತ ಸ್ಥಳಗಳಿಗೆ ಏರಿಸುತ್ತದೆ ಎಂದು ನೆಚ್ಚಬೇಕು.

ಈ ನಿವೇದನದ ಸರಣಿ ಹೀಗಿದೆ. ದೇಶದ ಮಕ್ಕಳು ತಮ್ಮ ಭಾಷೆಯನ್ನು ಕಲಿಯುತ್ತ ಬೆಳೆಯುತ್ತಾರೆ: ಜನತೆ ತಮ್ಮ ಭಾಷೆಗಳನ್ನು ಬಲ್ಲವರಾಗಿದ್ದಾರೆ; ಇದು

ಕಲಿಯುವ ಸಮುದಾಯ. ನಮ್ಮ ವಿದ್ಯಾವಂತ ಜನ ಇಂಗ್ಲೀಷಿನ ಮೂಲಕ ಹೊಸಕಾಲದ ಜೀವನಕ್ಕೆ ಬೇಕಾದ ಸಂಗತಿಗಳನ್ನು ಬಲ್ಲವರಾಗಿದ್ದಾರೆ: ಸ್ವಲ್ಪ ಶ್ರಮ ತೆಗೆದುಕೊಂಡು ಇವರು ತಿಳಿಯುವ ಸಂಗತಿಯನ್ನು ನಮ್ಮ ಭಾಷೆಗಳಲ್ಲಿ ವಿವರಿಸ ಬಲ್ಲರು: ಇವರು ಕಲಿಸುವ ಸಮುದಾಯ. ಪ್ರಪಂಚ ಕಂಡಿರುವ ಅತ್ಯುನ್ನತ ನಾಗರಿಕತೆ ಒಂದರಲ್ಲಿ ಬೆಳೆದುಬಂದಿರುವ ನಮ್ಮ ಜನದಲ್ಲಿ ಒಂದು ಉನ್ನತ ಸಂಸ್ಕೃತಿಗೆ ಬೇಕಾದ ತಳಹದಿ ಇದೆ. ಏನೇ ಮಾಡಿದರೂ ಇಂಗ್ಲೀಷು ಸಿದ್ಧಿಸುವುದು ಕೆಲವರಿಗೆ ಮಾತ್ರ: ಎಲ್ಲ ಜನತೆಗೆ ಅಲ್ಲ. ಕಲಿಯುವವರ ಸಮುದಾಯ ಈ ಭಾಷೆಯನ್ನು ಕಾಣದು. ಕಲಿತಿರುವ ಸಮುದಾಯವಾದರೂ ಇದರಲ್ಲಿ ದಿಟವಾದ ಪ್ರಭುತ್ವವನ್ನು ಪಡೆಯುವುದು ಅಪರೂಪ. ವಿದ್ಯೆ ಪಡೆದವರೆಂಬ ಜನ ತಮ್ಮ ಯೋಚನೆಯನ್ನೆಲ್ಲ ಇಂಗ್ಲೀಷಿನಲ್ಲಿ ನಡೆಸಿ ಏತರದೊ ಒಂದು ಸಂಸ್ಕೃತಿಯನ್ನು ಬೆಳೆಸಿ ಸಾಮಾನ್ಯ ಜನರಿಗೆ ಅದನ್ನು ದೇಶಭಾಷೆಗಳಲ್ಲಿ ಬಸಿದು ಕೊಡಬಹುದು; ಹೀಗೆ ಬಸಿಯುದ ಈಸಂಸ್ಕೃತಿ ಜನತೆಯ ಸ್ವಂತ ಸಂಸ್ಕೃತಿ ಆಗುವುದಿಲ್ಲ. ವಿದ್ಯಾವಂತ, ಸಾಮಾನ್ಯ ಜನ ಎಂಬ ಈ ವಿಭಾಗ ಅಂತತಃ ಕೃತ್ರಿಮ ಆಗಿರುತ್ತದೆ. ಎರಡು ಪಕ್ಷಕ್ಕೂ ಇದರಿಂದ ಕೆಡಕು. ಈ ಸನ್ನಿವೇಶದಲ್ಲಿ ವಿದ್ಯಾವಂತರೆಂಬ ಈ ಸಂಸ್ಕೃತಿಯಲ್ಲಿ ತಿರುಳು ಇರುವುದಿಲ್ಲ, ದೇಶಭಾಷೆಗಳ ಮೂಲಕ ಬೆಳೆದ, ಸಂಸ್ಕೃತಿ ಎಲ್ಲ ಜನರ ಸಂಸ್ಕೃತಿಯಾಗುತ್ತದೆ. ಜೀವಂತವಾಗಿ ಸಾರವತ್ತಾಗಿರುತ್ತದೆ. ಈ ಎರಡರಲ್ಲಿ ನಾವು ಯಾವುದನ್ನು ವಹಿಸೋಣ? ಈಗ ಇರುವಂತೆ ಇರಲಿ ಎನ್ನುವುದು ಸುಲಭ. ಮಾರ್ಪಾಟಿನಿಂದ ಏನು ತೊಂದರೆಯೊ ಎನ್ನುವ ಭಯ ಸಹಜ. ಈ ಕಾರಣದಿಂದ ನಮಗೆ ಸದ್ಯದ ಸ್ಥಿತಿ ಇದ್ದುಕೊಳ್ಳಲಿ ಎಂದು ತೋರುವುದು ಸಾಧ್ಯ. ಆದರೆ ತಿಳಿವಿಗೆಂದು ಬಾಯ್ತೆರೆದು ಕಾದಿರುವ ಕೋಟಿ ಕೋಟಿ ಜನರ ಕಡೆ ಕಣ್ಣು ತಿರುಗಿಸಿದೆವಾದರೆ ಈ ಯೋಚನೆ ಹಿಮ್ಮೆಟ್ಟುತ್ತದೆ. ಜನಾಂಗ ನಿಜವಾಗಿ ಬಾಳಬಹುದು. ಇದಕ್ಕೆ ಇರುವುದು ಒಂದೇ ದಾರಿ, ಬೇರೆ ಇಲ್ಲ. ಪಾಠ ಹೇಳುವುದಕ್ಕೆ, ಸಂಸ್ಕೃತಿಯ ಪ್ರಸಾರಕ್ಕೆ, ಎಲ್ಲ ತೆರನ ಅನ್ವೇಷಣಕ್ಕೆ, ಜನ ಮನೆಯಲ್ಲಿ ಬೀದಿಯಲ್ಲಿ ಬಳಸುವ ಮಾತನ್ನು ಬಳಸಬೇಕು.

ಬರುವ ತಲೆಮಾರುಗಳ ಜನತೆಗೆ ನಮ್ಮ ತರವಾರಿಗೆ ಸಿದ್ಧಿಸಿದ ಜೀವನಕ್ಕಿಂತ ಹೆಚ್ಚು ಸಾಫಲ್ಯದ ಜೀವನವನ್ನು ಸಾಧಿಸಬೇಕೇ, ಅದು ಈ ದಾರಿಯಿಂದ ಮಾತ್ರ ಸಾಧ್ಯ. ರವೀಂದ್ರನಾಥ ಠಾಕೂರರು ತಮ್ಮ ವಿದ್ಯಾಭ್ಯಾಸವನ್ನು ಕುರಿತು ಹೀಗೆಂದರು : "ನಮ್ಮ ತಾಯ್ನುಯಲ್ಲಿ ಪಾಠ ಹೇಳಿದ ಕಾರಣದಿಂದ ನಮ್ಮ ಬುದ್ಧಿ ಎಚ್ಚರಗೊಂಡಿತು. ಕಲಿಯಲು ಮೊದಲು ಮಾಡಿದ ದಿನದಂದು ಒಟ್ಟು ಬುದ್ಧಿ ಎಚ್ಚೆತ್ತುಕೊಳ್ಳದಿದ್ದರೆ ಅದರ ಸಂಪೂರ್ಣ ಶಕ್ತಿ ಕೊನೆಗಾದರೂ ಬೆಳೆಯದೆ ನಿಲ್ಲುತ್ತದೆ. ನಮ್ಮ ಸುತ್ತೆಲ್ಲ ಇಂಗ್ಲೀಷಿನಲ್ಲಿ ಪಾಠ ಹೇಳಬೇಕೆಂದು ಜನ ಕಿರಿಚುತ್ತಿದ್ದಾಗ ನಮ್ಮ ಮೂರನೆಯ ಅಣ್ಣ ಧೈರ್ಯಮಾಡಿ ನಮ್ಮನ್ನು ವಿಷಯ ಎಲ್ಲ

ವನ್ನೂ ಬಂಗಾಳಿಯಿಂದ ಕಲಿಯುವ ಕ್ರಮದಲ್ಲಿ ನವೆಸಿದರು. ಸ್ವರ್ಗದಲ್ಲಿರುವ ಆತನಿಗೆ ನಾನು ಕೃತಜ್ಞತೆಯಿಂದ ಪ್ರಣಾಮ ಸಲ್ಲಿಸುತ್ತೇನೆ" ಇವು ತೂಕದ ಮಾತುಗಳು. ಇವನ್ನು ಆಡುತ್ತಿರುವವರು ಅತ್ಯಂತ ಪ್ರತಿಷ್ಠೆಯ ಸ್ಥಾನವನ್ನು ಗಳಿಸಿರುವ ರವೀಂದ್ರನಾಥರು. ಈ ಕಾರಣದಿಂದ ಇವು ಗಮನಾರ್ಹವಾಗಿವೆ. ಇದನ್ನು ಕಡೆಗಣಿಸುವುದು ನಮಗೆ ಶುಭವಲ್ಲ. ನಮ್ಮ ತಲೆಮಾರಿನ ಜನ ಠಾಕೂರರ ಈ ಮಾತು ಎಷ್ಟು ಮುಖ್ಯ ಎನ್ನುವುದನ್ನು ಮನಗಾಣಬೇಕು, ಅದಕ್ಕನುಗುಣವಾಗಿ ನಡೆದುಕೊಳ್ಳಬೇಕು. ಹೀಗಾದರೆ ಈ ತಲೆಮಾರು ಕಣ್ಮರೆಯಾಗಿ ಈ ದೇಶದಲ್ಲಿ ಮುಂದಿನ ಪೀಳಿಗೆ ಬಾಳುವಾಗ ಆ ಪೀಳಿಗೆ ತನ್ನ ಏಳಿಗೆಯನ್ನು ಸಾಧಿಸುವಂತೆ ತನ್ನ ವಿದ್ಯಾಭ್ಯಾಸಕ್ಕೆ ಸರಿಯಾದ ತಳಹದಿ ಹಾಕಿದ ಹಿಂದಿನ ತಲೆಮಾರಿನ ನಮ್ಮತ್ತ ತಲೆಯೆತ್ತಿ, ನಮಗೆ ಕೃತಜ್ಞತೆಯ ವಂದನೆಯನ್ನು ಸಲ್ಲಿಸುತ್ತದೆ. ಆದು ಹಾಗೆ ಮಾಡುವಂತೆ ನಾವು ಇಂದು ನಡೆದುಕೊಳ್ಳುವುದನ್ನು ನಮ್ಮ ದೈವ ನಮಗೆ ಅನುಗ್ರಹಿಸಬೆಬೇಕು. ★

ಜೀವನ ಸಾಭಾರ ೧೯೬೭

KA-SKMND-470/-2000. [illegible]

Regd No. KAR/KAN/2000/3820

Vol 3 Issue 4.

Janapada Vichara – Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote. Dist – Mandya 571 431.
Phone : 0823/648754